
# ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 44 | ಅಕ್ಟೋಬರ್ 26–ನವೆಂಬರ್ 1, 2020 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



## ರೈತ-ಕಾರ್ಮಿಕ ಮುಖಂಡ ಕಾಮ್ರೇಡ್ ಮಾರುತಿ ಮಾನಪಡೆ ಇನ್ನಿಲ್ಲ



ತೆಲಂಗಾಣ ರೈತಮಹಿಳೆಯರ ಸಶಸ್ತ್ರ ತುಕಡಿ

**ವಿಶೇಷಾಂಕ**



ತೆಭಾಗಾ ಕಿಸಾನ್ ಸ್ವಯಂಸೇವಕರ ಪಡೆ

# ಭಾರತ ಕಮ್ಯೂನಿಸ್ಟ್ ಚಳುವಳಿಗೆ ನೂರು ವರ್ಷ

CENTENARY OF FORMATION OF COMMUNIST PARTY OF INDIA

1920 OCT.17 - 2020 OCT.17

CENTENARY OF COMMUNIST PARTY OF INDIA



ಮೊದಲ ಕಮ್ಯುನಿಸ್ಟ್ ಸರಕಾರ



ನಾಸಿಕ್ ನಿಂದ ಮುಂಬಯಿಗೆ ಕಿಸಾನ್ ಜಾಥಾ



20ನೇ ಮಾಹಾಧಿವೇಶನ

# ಹೋರಾಟ ಮತ್ತು ತ್ಯಾಗ-ಬಲಿದಾನಗಳ ಒಂದು ಶತಮಾನ

ಪ್ರಕಾಶ ಕಾರಟ್




**ಸ್ವಾತಂತ್ರ್ಯ ಆಂದೋಲನದ ವಿವಿಧ ಧಾರೆಗಳ ಅತ್ಯುತ್ತಮ ಮತ್ತು ಅತ್ಯಂತ ಸಮರಧೀರ ಹೋರಾಟಗಾರರನ್ನು ಒಳಗೊಂಡ ಕಮ್ಯುನಿಸ್ಟ್ ಪಕ್ಷ ಕಾರ್ಮಿಕರು ಮತ್ತು ರೈತಾಪಿ ಜನಗಳ ಆರ್ಥಿಕ ಮತ್ತು ಸಾಮಾಜಿಕ ವಿಮೋಚನೆಯಾದರೆ ಮಾತ್ರವೇ ಪೂರ್ಣ ಸ್ವರಾಜ್ಯಕ್ಕೆ ಅರ್ಥ ಬರುತ್ತದೆ ಎಂದು ನಂಬಿತ್ತು. ಕಾರ್ಮಿಕ ವರ್ಗವನ್ನು ಕಾರ್ಮಿಕ ಸಂಘಗಳ ಮೂಲಕ ಮತ್ತು ರೈತಾಪಿ ಜನಗಳನ್ನು ಕಿಸಾನ್ ಸಭಾಗಳ ಮೂಲಕ ರಾಷ್ಟ್ರೀಯ ಆಂದೋಲನಕ್ಕೆ ಸೆಳೆಯುವಲ್ಲಿ ಕಮ್ಯುನಿಸ್ಟರು ಒಂದು ಮಹತ್ವದ ಪಾತ್ರ ವಹಿಸಿದರು.**
**ಸ್ವಾತಂತ್ರ್ಯದ ನಂತರ, ಹೊಸ ಆಳುವ ವರ್ಗ ಪ್ರಜಾಪ್ರಭುತ್ವ ಕ್ರಾಂತಿಯ ಕಾರ್ಯಭಾರಗಳನ್ನು ಪೂರ್ಣಗೊಳಿಸದೆ ಅದಕ್ಕೆ ಬೆನ್ನು ತಿರುಗಿಸಿದಾಗ ಅದನ್ನು ಕಮ್ಯುನಿಸ್ಟರು ಮುಂದೊಯ್ಯುತ್ತಿದ್ದಾರೆ.**

ಅಕ್ಟೋಬರ್ 17, 2020 ಒಂದು ಚಾರಿತ್ರಿಕ ದಿನ. ಏಕೆಂದರೆ ಈ ದಿನ ಆಗಿನ ಸೋವಿಯೆತ್ ಒಕ್ಕೂಟದ ತಾಷ್ಕೆಂಟಿನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಮೊದಲ ಘಟಕ ರಚನೆಯಾಗಿ ನೂರು ವರ್ಷಗಳಾಗಿವೆ.

ಕಮ್ಯುನಿಸ್ಟ್ ಆಂದೋಲನದ ಒಂದು ಶತಮಾನ ಕಳೆದಿದೆ–ಇದು 20ನೇ ಶತಮಾನದ ಎಂಟು ದಶಕಗಳು ಮತ್ತು 21ನೇ ಶತಮಾನದ ಎರಡು ದಶಕಗಳಲ್ಲಿ ಹರಡಿರುವಂತದ್ದು. ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷದ ಹುಟ್ಟು ಮತ್ತು ಬೆಳವಣಿಗೆ ಹಾಗೂ ಸ್ವಾತಂತ್ರ್ಯ ಹೋರಾಟ ಪರಸ್ಪರ ಹೆಣೆದುಕೊಂಡಿವೆ. ಸ್ವಾತಂತ್ರ್ಯ ಆಂದೋಲನದ ವಿವಿಧ ಧಾರೆಗಳ ಅತ್ಯುತ್ತಮ ಮತ್ತು ಅತ್ಯಂತ ಸಮರಧೀರ ಹೋರಾಟಗಾರರು ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. ಇದಕ್ಕೆ ಕಾರಣ ಅದರ ಕಟ್ಟಾ ಸಾಮ್ರಾಜ್ಯಶಾಹಿ–ವಿರೋಧಿ ಪಾತ್ರ. ಆರಂಭದಿಂದಲೇ ತೀವ್ರ ದಮನವನ್ನು ಎದುರಿಸಿದ ಸಾವಿರಾರು ಕಮ್ಯುನಿಸ್ಟರು ವರ್ಷಾನುಗಟ್ಟಲೆ ಜೈಲುವಾಸ ಅನುಭವಿಸಿದರು, ಹಲವರು ಪಾಳೆಯಗಾರಿ–ವಿರೋಧಿ ಮತ್ತು ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟಗಳಲ್ಲಿ, ನಿರ್ದಿಷ್ಟವಾಗಿ ಮಹಾಯುದ್ಧಾನಂತರದ(1945–47) ಉತ್ಕ್ರಾಂತಿಯಲ್ಲಿ ಹುತಾತ್ಮರಾದರು.

ಆ ಸಮಯದ ದಮನ ಮತ್ತು ಕಮ್ಯುನಿಸ್ಟರ ತ್ಯಾಗ–ಬಲಿದಾನದ ಪ್ರಮಾಣವೆಷ್ಟು ಎಂಬುದರ ಒಂದು ಇಣುಕುನೋಟ ಮುಂಬೈಯಲ್ಲಿ ಪಕ್ಷದ ಮೊದಲ ಮಹಾಧಿವೇಶನದಲ್ಲಿ ಭಾಗವಹಿಸಿದ 138 ಪ್ರತಿನಿಧಿಗಳು ಒಟ್ಟು 414 ವರ್ಷಗಳ ಜೈಲುವಾಸ ಅನುಭವಿಸಿದ್ದರು ಎಂಬ ಸಂಗತಿಯಲ್ಲಿ ಸಿಗುತ್ತದೆ.

ಕಾರ್ಮಿಕರು ಮತ್ತು ರೈತಾಪಿ ಜನಗಳ ಆರ್ಥಿಕ ಮತ್ತು ಸಾಮಾಜಿಕ ವಿಮೋಚನೆಯಾದರೆ ಮಾತ್ರವೇ ಪೂರ್ಣ ಸ್ವರಾಜ್ಯಕ್ಕೆ ಅರ್ಥ ಬರುತ್ತದೆ ಎಂದು ಕಮ್ಯುನಿಸ್ಟರು ನಂಬಿದ್ದರು. ಕಾರ್ಮಿಕ ವರ್ಗವನ್ನು ಕಾರ್ಮಿಕ ಸಂಘಗಳ ಮೂಲಕ ಮತ್ತು ರೈತಾಪಿ ಜನಗಳನ್ನು ಕಿಸಾನ್ ಸಭಾಗಳ ಮೂಲಕ ರಾಷ್ಟ್ರೀಯ ಆಂದೋಲನಕ್ಕೆ ಸೆಳೆಯುವಲ್ಲಿ ಅವರು ಒಂದು ಮಹತ್ವದ ಪಾತ್ರ ವಹಿಸಿದರು.

ಸ್ವಾತಂತ್ರ್ಯದ ನಂತರ, ಹೊಸ ಆಳುವ ವರ್ಗ– ಬಂಡವಾಳಶಾಹಿ–ಭೂಮಾಲಕ ಮೈತ್ರಿ– ಪ್ರಜಾಪ್ರಭುತ್ವ ಕ್ರಾಂತಿಯ ಕಾರ್ಯಭಾರಗಳನ್ನು ಪೂರ್ಣಗೊಳಿಸದೆ ಅದಕ್ಕೆ ಬೆನ್ನು ತಿರುಗಿಸಿದರು. ದೊಡ್ಡ ಬಂಡವಾಳಶಾಹಿಗಳ ನೇತೃತ್ವದ ಬಂಡವಾಳಶಾಹಿ–ಭೂಮಾಲಕ ಮೈತ್ರಿಯು ಪ್ರಭುತ್ವ ಶಕ್ತಿಯನ್ನು ಬಂಡವಾಳಶಾಹಿ ಅಭಿವೃದ್ಧಿ ಪಥದಲ್ಲಿ ಸಾಗಲು ಬಳಸಿಕೊಂಡಿತು. ಈ ದಾರಿಯಲ್ಲಿ ಸಾಗುವುದೆಂದರೆ ಭೂಮಾಲಕತ್ವದೊಂದಿಗೆ ರಾಜಿ ಮತ್ತು ರೈತಾಪಿಗಳನ್ನು ಓಬೀರಾಯನ ಕಾಲದ ಭೂಸಂಬಂಧಗಳ ಸಂಕೋಲೆಗಳಿಂದ ಮುಕ್ತಗೊಳಿಸುವಲ್ಲಿ ವಿಫಲತೆ ಹಾಗೂ ಅವರ ಮೇಲೆ ಬಂಡವಾಳಶಾಹಿ ಶೋಷಣೆಯ ಹೇರಿಕೆಯೇ ಆಗಿತ್ತು. ಸರಕಾರ ಅನುಸರಿಸಿದ ಧೋರಣೆಗಳು ಗುತ್ತೇದಾರಿ ಬಂಡವಾಳಶಾಹಿ ಗುಂಪುಗಳು ಮತ್ತು ಗ್ರಾಮೀಣ ಶ್ರೀಮಂತರ ಪರ ವಾಲಿದವು.

ಇಂತಹ ಸನ್ನಿವೇಶದಲ್ಲಿ, ಕಮ್ಯುನಿಸ್ಟ್ ಪಕ್ಷ ಭೂಸುಧಾರಣೆಗಳು ಮತ್ತು 'ಉಳುವವನೇ ಹೊಲದೊಡೆಯ' ಎಂಬ ಘೋಷಣೆಯನ್ನು ಸಾಕಾರಗೊಳಿಸುವ ಹೋರಾಟಗಳ ಮೂಲಕ ಕೃಷಿ ಸಂಬಂಧಗಳನ್ನು ಪ್ರಜಾಪ್ರಭುತ್ವೀಕರಿಸುವ ಕಾರ್ಯಭಾರವನ್ನು ಕೈಗೆತ್ತಿಕೊಂಡಿತು. ಈ ಹೋರಾಟಗಳಿಂದಾಗಿಯೇ ಕೇರಳದಲ್ಲಿ ಮೊದಲ ಕಮ್ಯುನಿಸ್ಟ್ ಮಂತ್ರಿಮಂಡಳ ಮತ್ತು ನಂತರ ಪಶ್ಚಿಮ ಬಂಗಾಳ ಮತ್ತು ತ್ರಿಪುರಾದ ಎಡ ನೇತೃತ್ವದ ಸರಕಾರಗಳು ಭೂಸುಧಾರಣೆಗಳನ್ನು ಜಾರಿಗೆ ತಂದವು. ಸ್ವಾತಂತ್ರ್ಯಾನಂತರದ ಮೊದಲ ದಶಕಗಳಲ್ಲಿ ಭೂಸುಧಾರಣೆಗಳನ್ನು ಭಾರತೀಯ ರಾಜಕಾರಣದ ಕೇಂದ್ರಕ್ಕೆ ತಂದದ್ದು ಕಮ್ಯುನಿಸ್ಟ್ ಪಕ್ಷ.

ಕಮ್ಯುನಿಸ್ಟರು ನೇತೃತ್ವದ ಪಾತ್ರ ವಹಿಸಿದ ಇನ್ನೊಂದು ಪ್ರಮುಖ ಹೋರಾಟವೆಂದರೆ ರಾಜ್ಯಗಳ ಭಾಷಾವಾರು ಪುನರ್ರಚನೆ. ಸ್ವಾತಂತ್ರ್ಯದ ಮೊದಲೇ, ಕಮ್ಯುನಿಸ್ಟರು ಭಾಷಾವಾರು ನೀತಿಯ ಮೇಲೆ ಆಧಾರಿತ ರಾಜ್ಯಗಳ ಒಂದು ಒಕ್ಕೂಟ ಸ್ವರೂಪದ ಭಾರತೀಯ ಸಂಘದ ಯೋಜನೆಯನ್ನು ಮುಂದಿಟ್ಟಿದ್ದರು.

ರಾಜಕೀಯ ವ್ಯವಸ್ಥೆಯಲ್ಲಿ ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವದ ಅತ್ಯಂತ ನಿಷ್ಠ ಹೋರಾಟಗಾರರಾಗಿ ಕಮ್ಯುನಿಸ್ಟರು ಮೂಡಿ ಬಂದರು. ಕಾಂಗ್ರೆಸ್ ಮತ್ತಿತರ ಬೂರ್ಜ್ವಾ ಪಕ್ಷಗಳು ಜಾತ್ಯತೀತತೆ ಅಥವ ಧರ್ಮನಿರಪೇಕ್ಷತೆ ಎಂದರೆ ಎಲ್ಲ ಧರ್ಮಗಳ ಸಮಾನತೆ ಹಾಗೂ ಪ್ರಭುತ್ವ ಮತ್ತು ರಾಜಕೀಯದಲ್ಲಿ ಹಸ್ತಕ್ಷೇಪಕ್ಕೆ ಅವೆಲ್ಲಕ್ಕೂ ಸಮಾನ ಹಕ್ಕು ಎಂದೇ ವ್ಯಾಖ್ಯಾನಿಸಿವೆ. ಆದರೆ ಜಾತ್ಯಾತೀತತೆ ಎಂದರೆ ಧರ್ಮವನ್ನು ಪ್ರಭುತ್ವ ಮತ್ತು ರಾಜಕೀಯದಿಂದ ಪ್ರತ್ಯೇಕಿಸುವುದು ಎಂಬ ವ್ಯಾಖ್ಯಾನಕ್ಕೆ ಕಮ್ಯುನಿಸ್ಟರು ದೃಢವಾಗಿ ಬದ್ಧರಾದರು. ಜಾತ್ಯತೀತತೆಗೆ ಕಮ್ಯುನಿಸ್ಟರ ಬದ್ಧತೆಯನ್ನು ಪಶ್ಚಿಮ ಬಂಗಾಲ, ಕೇರಳ ಮತ್ತು ತ್ರಿಪುರಗಳಲ್ಲಿ ಎಡನೇತೃತ್ವದ ಸರಕಾರಗಳ ಪಾತ್ರ ಹಲವು ಸಂದರ್ಭಗಳಲ್ಲಿ ಸಾಬೀತು ಪಡಿಸಿದೆ. ಪಶ್ಚಿಮ ಬಂಗಾಲದಲ್ಲಿ 34 ವರ್ಷಗಳ ಕಾಲ ಎಡರಂಗ ಸರಕಾರದ ದಾಖಲೆಯಂತೂ ಈ ನಿಟ್ಟಿನಲ್ಲಿ ಆದರ್ಶಪ್ರಾಯ. 1990ರ ದಶಕದಲ್ಲಿ ಹಿಂದುತ್ವ ಶಕ್ತಿಗಳು ಎದ್ದೇಳಲಾರಂಭಿಸಿದಾಗ ಅಯೋಧ್ಯಾ ವಿವಾದ ಮುಂತಾದ ಪ್ರಶ್ನೆಗಳಲ್ಲಿ ಕೋಮುವಾದಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳದೆ ಅವನ್ನು ಎದುರಿಸಬೇಕೆಂಬ ದೃಢ ನಿಲುವು ತಳೆದದ್ದು ಕಮ್ಯುನಿಸ್ಟರು ಮತ್ತು ಎಡಪಕ್ಷಗಳು ಮಾತ್ರ.

ಕಮ್ಯುನಿಸ್ಟ್ ಆಂದೋಲನ ದೇಶದಲ್ಲಿ ಪ್ರಜಾಪ್ರಭುತ್ವವನ್ನು ವಿಸ್ತರಿಸಲು ಮತ್ತು ಆಳಗೊಳಿಸಲು ನಿರಂತರವಾಗಿ ಶ್ರಮಿಸುತ್ತ ಬಂದಿದೆ. ಆಳುವ ವರ್ಗಗಳು ಸದಾ ಪ್ರಜಾಪ್ರಭುತ್ವವನ್ನು ಮತ್ತು ನಾಗರಿಕರ ಸಂವಿಧಾನಿಕ ಹಕ್ಕುಗಳನ್ನು ನಿರ್ಬಂಧಗಳಿಗೆ ಒಳಪಡಿಸಲು ಪ್ರಯತ್ನಿಸಿವೆ. ಆರಂಭದಿಂದಲೇ ಕಮ್ಯುನಿಸ್ಟರು ನಿರ್ಬಂಧಕ ಬಂಧನ ಕಾನೂನುಗಳನ್ನು ವಿರೋಧಿಸಿಕೊಂಡು ಬಂದಿದ್ದಾರೆ; ಪ್ರತಿ ತಿರುವಿನಲ್ಲೂ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ರಕ್ಷಿಸಲು ಪ್ರಯತ್ನಿಸುತ್ತ ಬಂದಿದ್ದಾರೆ. ಸಿಪಿಐ(ಎಂ) ತುರ್ತುಪರಿಸ್ಥಿತಿಯನ್ನು ವಿರೋಧಿಸಿತು ಮತ್ತು ಅದರ ಹಲವಾರು ಕಾರ್ಯಕರ್ತರು ಜೈಲುವಾಸ ಅನುಭವಿಸಿದರು.

ಬಂಡವಾಳಶಾಹಿ ಬೆಳವಣಿಗೆಯ ಇಡೀ ಮಾದರಿ ಮೂರು ದಶಕಗಳ ಹಿಂದೆ ಆಳುವ ವರ್ಗಗಳು ನವ–ಉದಾರವಾದಿ ಧೋರಣೆಗಳನ್ನು ಅಂಗೀಕರಿಸಿದ ನಂತರ ಬದಲಾಯಿತು. ಕಾಂಗ್ರೆಸ್ ಮತ್ತು ಬಿಜೆಪಿ ಹಾಗೂ ಇತರ ಎಲ್ಲ ಬೂರ್ಜ್ವಾ ಪಕ್ಷಗಳು ನವ–ಉದಾರವಾದಿ ನಿಲುವನ್ನು ಅಪ್ಪಿಕೊಂಡವು. ಆದರೆ ಕಮ್ಯುನಿಸ್ಟರು ನವ–ಉದಾರವಾದಿ ಧೋರಣೆಗಳನ್ನು ಮತ್ತು ಅದರ ಅಂಗವಾಗಿ ಬಂದ ಸಾಮ್ರಾಜ್ಯಶಾಹಿ–ಪರ ಪಲ್ಲಟವನ್ನು ಸತತವಾಗಿ ವಿರೋಧಿಸಿಕೊಂಡು ಬಂದಿದ್ದಾರೆ. ವರ್ಗ ಮತ್ತು ಸಾಮೂಹಿಕ ಸಂಘಟನೆಗಳಲ್ಲಿ ಕೆಲಸ ಮಾಡುತ್ತಿರುವ ಕಮ್ಯುನಿಸ್ಟರು ಈ ಧೋರಣೆಗಳಿಗೆ ಪ್ರತಿರೋಧವನ್ನು ಅಣಿನೆರೆಸುವಲ್ಲಿ ನೇತೃತ್ವದಲ್ಲಿದ್ದಾರೆ. ಈ ನವ–ಉದಾರವಾದಿ ದಾಳಿಗಳನ್ನು ಹಿಮ್ಮೆಟ್ಟಿಸಲು ಕಾರ್ಮಿಕ ವರ್ಗದ ಸಾಕಷ್ಟು ವ್ಯಾಪಕವಾದ ಐಕ್ಯತೆಯನ್ನು ಕಟ್ಟಲು ಕಮ್ಯುನಿಸ್ಟರು ಕೆಲಸ ಮಾಡುತ್ತಿದ್ದಾರೆ. ಈ ಐಕ್ಯ ಕಾರ್ಮಿಕ ಆಂದೋಲನ ಕಳೆದ ಮೂರು ದಶಕಗಳಲ್ಲಿ ನವ–ಉದಾರವಾದದ ವಿವಿಧ ಆಯಾಮಗಳ ವಿರುದ್ಧ 19 ಸಾರ್ವತ್ರಿಕ ಮುಷ್ಕರಗಳನ್ನು ನಡೆಸಿದೆ. 20ನೇಯದಾಗಿ ನವಂಬರ್ 26ರಂದು ಒಂದು ದಿನದ ಸಾರ್ವತ್ರಿಕ ಮುಷ್ಕರ ನಡೆಯಲಿದೆ.

ಕಮ್ಯುನಿಸ್ಟರು ಮತ್ತು ಎಡ ಚಳುವಳಿಯ ಬಗ್ಗೆ ಆಳುವ ವರ್ಗಗಳ ವೈಷಮ್ಯದಿಂದಾಗಿ ಎಡ ಚಳುಳಿಯ ಕಾರ್ಯಕರ್ತರ ಮೇಲೆ ಸತತ ದಾಳಿಗಳು ನಡೆದಿವೆ. 1970ರ ದಶಕದಲ್ಲಿ ಪಶ್ಚಿಮ ಬಂಗಾಲದಲ್ಲಿ ಮತ್ತು ಒಂದು ದಶಕದ ನಂತರ ತ್ರಿಪುರಾದಲ್ಲಿ ಅರೆ–ಫ್ಯಾಸಿಸ್ಟ್ ಭಯೋತ್ಪಾದನೆ ವರ್ಗಹೋರಾಟ ತೀವ್ರಗೊಂಡಿರುವುದರ ಒಂದು ಫಲಿತಾಂಶ. ಎರಡೂ ರಾಜ್ಯಗಳಲ್ಲಿ ಕಮ್ಯುನಿಸ್ಟ್–ವಿರೋಧಿ ಭಯೋತ್ಪಾದನೆ ಮತ್ತು ಹಿಂಸಾಚಾರ ಮತ್ತೆ–ಮತ್ತೆ ನಡೆದಿವೆ. ಕೇರಳದಲ್ಲೂ ಸಿಪಿಐ(ಎಂ)ನ ನೂರಾರು ಸಿಪಿಐ(ಎಂ) ಕಾರ್ಯಕರ್ತರನ್ನು ಆರೆಸ್ಸೆಸ್ ಸೇರಿದಂತೆ ಆಳುವ ವರ್ಗದ ಶಕ್ತಿಗಳು ಕೊಂದಿವೆ.

ಮಹಿಳಾ ವಿಮೋಚನೆಯ ಬಗ್ಗೆ ಒಂದು ಸಮಗ್ರ ನಿಲುವನ್ನು ರೂಪೀಕರಿಸುವಲ್ಲಿ ಕಮ್ಯುನಿಸ್ಟರು ಒಂದು ಪಥಪ್ರದರ್ಶಕ ಪಾತ್ರವನ್ನು ವಹಿಸಿದ್ದಾರೆ. ನಿಜವಾದ ವಿಮೋಚನೆಯಾಗಬೇಕಾದರೆ ಸಾಮಾಜಿಕ ದಮನ ಮತ್ತು ಪಿತೃಪ್ರಾಧಾನ್ಯತೆ ಅಳಿಯಬೇಕಾಗುತ್ತದೆ. 1931ರಷ್ಟು ಹಿಂದೆಯೇ, ಕಮ್ಯುನಿಸ್ಟರ ಕರಡು ಕ್ರಿಯಾ ವೇದಿಕೆ ಜಾತಿ ವ್ಯವಸ್ಥೆಯ ನಿರ್ಮೂಲನೆ ಮತ್ತು ಅಸ್ಪೃಶ್ಯರ ವಿಮೋಚನೆಯನ್ನು ಪ್ರತಿಪಾದಿಸಿತ್ತು. ಕಮ್ಯುನಿಸ್ಟರು ವರ್ಗಹೋರಾಟವನ್ನು ಸಾಮಾಜಿಕ ದಮನದ ವಿರುದ್ಧ ಹೋರಾಟದೊಂದಿಗೆ ಸಮಗ್ರೀಕರಿಸಲು ಪ್ರಯತ್ನಿಸಿದ್ದಾರೆ.

ನವ–ಉದಾರವಾದ ಮತ್ತು ಹಿಂದುತ್ವ ಶಕ್ತಿಗಳ ಒಟ್ಟೊಟ್ಟಿನ ಬೆಳವಣಿಗೆ ಕಮ್ಯುನಿಸ್ಟ್ ಆಂದೋಲನಕ್ಕೆ ಮತ್ತು ಎಲ್ಲ ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಒಂದು ಗಂಭಿರ ಸವಾಲನ್ನು ಒಡ್ಡಿದೆ. ನವ–ಉದಾರವಾದಿ ಬಂಡವಾಳಶಾಹಿ ವರ್ಗಗಳ ಸಂರಚನೆ ಮತ್ತು ಸಂಯೋಜನೆಯಲ್ಲಿ ಹಲವಾರು ಬದಲಾವಣೆಗಳನ್ನು ತಂದಿದೆ, ಇವುಗಳಲ್ಲಿ ಕೆಲವು ಕಾರ್ಮಿಕ ವರ್ಗದ ಮತ್ತು ರೈತ ಆಂದೋಲನಗಳ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಿವೆ. ಎಲ್ಲ ವಲಯಗಳಲ್ಲೂ ವ್ಯಾಪಕವಾಗಿ ಹರಡಿರುವ ಖಾಸಗೀಕರಣ ಮಧ್ಯಂತರ ವರ್ಗಗಳ ಮೇಲೆ ತನ್ನದೇ ಪರಿಣಾಮ ಬೀರಿದೆ. ಈ ಅವಧಿಯಲ್ಲಿ ಎಡ ನೇತೃತ್ವದ ರಾಜ್ಯ ಸರಕಾರಗಳು ಕೂಡ ಪರ್ಯಾಯ ಧೋರಣೆಗಳನ್ನು ಜಾರಿಗೊಳಿಸುವಲ್ಲಿ ಗಂಭೀರ ಮಿತಿಗಳನ್ನು, ನಿರ್ಬಂಧಗಳನ್ನು ಎದುರಿಸಬೇಕಾಗಿ ಬಂದಿದೆ. ಸಿಪಿಐ(ಎಂ) ಮತ್ತು ಎಡಶಕ್ತಿಗಳು ಈ ಪ್ರಶ್ನೆಗಳನ್ನು ವಿಶ್ಲೇಷಿಸಲು ಮತ್ತು ಹೊಸ ತಂತ್ರಾತ್ಮಕ ನಿಲುವುಗಳನ್ನು ಹಾಗೂ ಘೋಷಣೆಗಳನ್ನು ರೂಪೀಕರಿಸಲು ಹೆಣಗುತ್ತಿವೆ.

2014ರಲ್ಲಿ ಮೋದಿ ಸರಕಾರ ಅಧಿಕಾರಕ್ಕೆ ಬರುವುದರೊಂದಿಗೆ ಒಂದು ಗುಣಾತ್ಮಕ ಬದಲಾವಣೆ ಬಂದಿದೆ. ಮೊತ್ತಮೊದಲ ಬಾರಿಗೆ, ಹಿಂದುತ್ವ ತತ್ವಸಿದ್ಧಾಂತವನ್ನು ಆಧರಿಸಿದ ಮತ್ತು ಫ್ಯಾಸಿಸ್ಟ್ ಮಾದರಿ ಆರೆಸ್ಸೆಸ್‌ನ ಹತೋಟಿಯಲ್ಲಿರುವ ಒಂದು ಪಕ್ಷ ಕಳೆದ ಆರು ವರ್ಷಗಳಿಂದ ಪ್ರಭುತ್ವ ಅಧಿಕಾರವನ್ನು ಚಲಾಯಿಸುತ್ತಿದೆ. ಜಾತ್ಯಾತೀತತೆ, ಪ್ರಜಾಪ್ರಭುತ್ವ ಮತ್ತು ದುಡಿಯುವ ಜನಗಳ ಕಲ್ಯಾಣದ ಮೇಲೆ ವಿನಾಶಕಾರಿ ಪರಿಣಾಮಗಳು ಅನಾವರಣಗೊಳ್ಳುತ್ತಿವೆ. ಸ್ವಾತಂತ್ರ್ಯ ಹೋರಾಟದಲ್ಲಿ ಯಾವುದೇ ಪಾತ್ರವಿಲ್ಲದ, ಆ ಹೋರಾಟದ ಸಾಮ್ರಾಜ್ಯಶಾಹಿ–ವಿರೋಧಿ ಜಾತ್ಯಾತೀತ ಚೇತನವನ್ನು ಹೊಂದಿರದ ಒಂದು ರಾಜಕೀಯ ಶಕ್ತಿ ಈಗ ಸಂವಿಧಾನವನ್ನು ಬುಡಮೇಲು ಮಾಡಲು ಮತ್ತು ಸರ್ವಾಧಿಕಾರಶಾಹಿ ಆಳ್ವಿಕೆಯನ್ನು ಸ್ಥಾಪಿಸುವಲ್ಲಿ ತೊಡಗಿದೆ– ಇವನ್ನೆಲ್ಲ ಪ್ರತಿಗಾಮಿಯಾದ ಮತ್ತು ಪ್ರತಿಕ್ರಿಯಾವಾದಿಯಾದ ಒಂದು ರಾಷ್ಟ್ರವಾದದ ಹೆಸರಿನಲ್ಲಿ ಮಾಡಲಾಗುತ್ತಿದೆ.

ಈಗಿರುವ ಸವಾಲು ಈ ಖೋಟಾ–ರಾಷ್ಟ್ರವಾದವನ್ನು ಒಂದು ಸಾಮ್ರಾಜ್ಯಶಾಹಿ–ವಿರೋಧಿ, ಜಾತ್ಯಾತೀತ ಮತ್ತು ಎಲ್ಲರನ್ನೂ ಒಳಗೊಳ್ಳುವ ರಾಷ್ಟ್ರವಾದದ ಮೂಲಕ ಎದುರಿಸುವುದು. ಇದನ್ನು ಕೈಗೆತ್ತಿಕೊಳ್ಳಲು ಅತ್ಯುತ್ತಮ ರೀತಿಯಲ್ಲಿ ಸಜ್ಜುಗೊಂಡಿರುವವರೆಂದರೆ ಕಮ್ಯುನಿಸ್ಟರೇ. ಏಕೆಂದರೆ ಅವರು ಸ್ವಾತಂತ್ರ್ಯಕ್ಕಾಗಿ ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟದ ಪರಂಪರೆಯನ್ನು ಮುಂದೊಯ್ಯುತ್ತಿರುವವರು. ಎಲ್ಲ ಕಮ್ಯುನಿಸ್ಟ್ ಮತ್ತು ಎಡಶಕ್ತಿಗಳ ಐಕ್ಯತೆಯನ್ನು ಕಟ್ಟುವುದು ಎಲ್ಲ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಳನ್ನು ಅಣಿನರೆಸಬೇಕಾದ ಈ ಕಾಲಘಟ್ಟದಲ್ಲಿ ಅತ್ಯಂತ ನಿರ್ಣಾಯಕ ಮಹತ್ವದ್ದಾಗಿದೆ.

ಮಾರ್ಕ್ಸ್‌ವಾದ–ಲೆನಿನ್‌ವಾದ ಭಾರತದಲ್ಲಿ ಕಮ್ಯುನಿಸ್ಟ್ ಆಂದೋಲನದ ತಾತ್ವಿಕ ಬುನಾದಿಯಾಗಿದೆ. 1964ರಲ್ಲಿ ಸಿಪಿಐ(ಎಂ)ನ ಸ್ಥಾಪನೆ ಪರಿಷ್ಕರಣವಾದದ ವಿರುದ್ಧ ಈ ಸುದೀರ್ಘ ಹೋರಾಟದ ಒಂದು ಫಲಿತಾಂಶ. ಸ್ಥಾಪನೆಯಾದ ಕೂಡಲೇ, ಪಕ್ಷವು ಎಡ–ದುಸ್ಸಾಹಸವಾದದ ವಿರುದ್ಧವೂ ಹೋರಾಡಬೇಕಾಯಿತು. ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಭಾರತೀಯ ಸಮಾಜದ ಮೂರ್ತ ಪರಿಸ್ಥಿತಿಗಳಿಗೆ ಅನ್ವಯಿಸುತ್ತ, ಸಿಪಿಐ(ಎಂ) ಒಂದು ಕಾರ್ಯಕ್ರಮವನ್ನು ಮುಂದಿಟ್ಟುಕೊಂಡಿದೆ. ಇದರ ಗುರಿ ಸಮಾಜವಾದದ ದಾರಿಯಲ್ಲಿ ಸಾಗಲು ಅನುಕೂಲ ಕಲ್ಪಿಸಿಕೊಡಬಲ್ಲ ಒಂದು ಜನತಾ ಪ್ರಜಾಪ್ರಭುತ್ವವನ್ನು ಸಾಧಿಸುವುದು. ಈ ವೈಜ್ಞಾನಿಕ ಸಿದ್ಧಾಂತ ಮತ್ತು ಆಚರಣೆಯೊಂದಿಗೆ ಸಜ್ಜುಗೊಂಡು ಭಾರತದಲ್ಲಿನ ಕ್ರಾಂತಿಕಾರಿ ಆಂದೋಲನ ವರ್ಗಶೋಷಣೆ ಮತ್ತು ಸಾಮಾಜಿಕ ದಮನದಿಂದ ಮುಕ್ತವಾದ ಒಂದು ಸಮಾಜವನ್ನು ಕಟ್ಟುವತ್ತ ಮುನ್ನಡೆಯಬಲ್ಲದು. ■

# ಜಾತ್ಯತೀತ ಪ್ರಜಾಪ್ರಭುತ್ವದ ದೃಢಚಿತ್ತದ ರಕ್ಷಕರು

**ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸಮಾನತೆಯ ಸಾಂವಿಧಾನಿಕ ಖಾತ್ರಿಯನ್ನು ಒಂದು ಚೈತನ್ಯಶೀಲ ಪ್ರಜಾಪ್ರಭುತ್ವವಿಲ್ಲದೆ ಸ್ಥಾಪಿಸಲು ಸಾಧ್ಯವಿಲ್ಲ. ಕಮ್ಯುನಿಸ್ಟರು, ಹಿಂದೆಯೂ ಭಾರತದಲ್ಲಿ ಇಂತಹ ಒಂದು ಜಾತ್ಯತೀತ ಪ್ರಜಾಪ್ರಭುತ್ವವನ್ನು ಅತ್ಯಂತ ದೃಢಚಿತ್ತದಿಂದ ಎತ್ತಿ ಹಿಡಿದಿದ್ದಾರೆ ಮತ್ತು ಇಂದೂ ಕೂಡ ಎತ್ತಿ ಹಿಡಿಯುತ್ತಿದ್ದಾರೆ.**

**ಸೀತಾರಾಮ್ ಯೆಚುರಿ**

ನಾವೀಗ ಅಕ್ಟೋಬರ್ 17, 1920ರಂದು ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಶತಮಾನೋತ್ಸವ ಆಚರಣೆಯನ್ನು ಪೂರ್ಣಗೊಳಿಸುತ್ತಿದ್ದೇವೆ.

ಕೊವಿಡ್–19 ಮಹಾಸೋಂಕು, ದೀರ್ಘಕಾಲ ಎಳೆದ ರಾಷ್ಟ್ರೀಯ ಲಾಕ್‌ಡೌನ್‌ಗಳು ಮತ್ತು ದೈಹಿಕ ಅಂತರ ಮುಂತಾದ ನಿರ್ಬಂಧಗಳು ಶತಮಾನೋತ್ಸವ ಕಾರ್ಯಕ್ರಮಗಳನ್ನು ಕಂಡರಿಸಿದ ರೀತಿಯಲ್ಲಿ ಗಟ್ಟಿಯಾಗಿ ನೆರವೇರಿಸುವುದಕ್ಕೆ ಅಡ್ಡಿಯಾದವು. ಆದರೂ, ಈ ಮಿತಿಗಳೊಳಗೆ, ವರ್ಚುವಲ್ ಮಾಧ್ಯಮಗಳು, ಮತ್ತು ಡಿಜಿಟಲ್ ಸಂಪರ್ಕಗಳನ್ನು ಬಳಸಿಕೊಂಡು, ಪಕ್ಷವು ಕಳೆದ ನೂರು ವರ್ಷಗಳಲ್ಲಿ ಭಾರತೀಯ ಇತಿಹಾಸದ ವಿವಿಧ ಘಟ್ಟಗಳಲ್ಲಿ ಕಮ್ಯುನಿಸ್ಟರು ವಹಿಸಿದ ಪಾತ್ರವನ್ನು ಎತ್ತಿ ತೋರುವ ಕಾರ್ಯಕ್ರಮಗಳನ್ನು ನಡೆಸಿದೆ.

### ರಾಷ್ಟ್ರೀಯ ಅಜೆಂಡಾವನ್ನು ರೂಪಿಸುವಲ್ಲಿ

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ, ಮತ್ತು ನಂತರ, ಪಕ್ಷದ ನೇತೃತ್ವದ ಭವ್ಯ ಹೋರಾಟಗಳು, ಅಸಂಖ್ಯಾತ ಕ್ರಾಂತಿಕಾರಿಗಳು ಮತ್ತು ಹುತಾತ್ಮರ ಅಪಾರ ತ್ಯಾಗಗಳ ಮೂಲಕ ಭಾರತೀಯ ಇತಿಹಾಸದ ವಿಕಾಸಕ್ಕೆ ತಮ್ಮ ಕೊಡುಗೆಗಳನ್ನು ನೀಡಿದವು ಎಂಬುದನ್ನು ನೋಡಿದ್ದೇವೆ. ಜನಗಳ ನಿಜವಾದ ತಲ್ಲಣಗಳು ಮತ್ತು ಸಮಸ್ಯೆಗಳನ್ನು ರಾಷ್ಟೀಯ ಅಜೆಂಡಾಕ್ಕೆ ತರುವಲ್ಲಿ ಪ್ರಧಾನ ಪಾತ್ರ ವಹಿಸಿದವು.

ಇವುಗಳಲ್ಲಿ, ಭಾರತದ ಅಪಾರ ವೈವಿಧ್ಯತೆಯನ್ನು ಗುರುತಿಸುವುದು, ಮತ್ತು ನಮ್ಮ ದೇಶದಲ್ಲಿ ಇರುವ ಹಲವಾರು ಭಾಷೆಗಳ ನಡುವೆ ಸಮಾನತೆಯ ಅಗತ್ಯವನ್ನು ಮತ್ತು ಅದನ್ನು ಖಾತ್ರಿಪಡಿಸಬೇಕಾಗಿದೆ ಎಂಬುದು ವಿವಿಧ ಭಾಗಗಳಲ್ಲಿ ಒಂದು ಭಾಷಾವಾರು ಮರು ಸಂಘಟನೆಗಾಗಿ ಹೋರಾಟಕ್ಕೆ ಹಾದಿ ಮಾಡಿಕೊಟ್ಟಿತು. ಇದಕ್ಕೆ ನೇತೃತ್ವ ನೀಡಿದವರಲ್ಲಿ ಕಮ್ಯುನಿಸ್ಟರು ಇದ್ದರು. ದೇಶಾದ್ಯಂತ ಕಮ್ಯುನಿಸ್ಟರ ನೇತೃತ್ವದ ಭೂಹೋರಾಟಗಳು ಭೂಸುಧಾರಣೆಯ ಪ್ರಶ್ನೆಯನ್ನು ರಾಷ್ಟ್ರೀಯ ಅಜೆಂಡಾಕ್ಕೆ ತಂದವು. ರಾಷ್ಟ್ರವಾದದ ವಿಷಯದಲ್ಲೂ ಸಂಕುಚಿತ ಮತ್ತು ಕೆಲ ವಿಭಾಗಗಳನ್ನು ಹೊರಗಿಡುವ ರಾಷ್ಟ್ರವಾದಕ್ಕೆ ಎದುರಾಗಿ ಎಲ್ಲರನ್ನೂ ಒಳಗೊಳ್ಳುವ ರಾಷ್ಟ್ರವಾದವನ್ನು ವಿಕಾಸಗೊಳಿಸುವಲ್ಲಿ ಭಾರತೀಯ ಕಮ್ಯುನಿಸ್ಟರ ಕೊಡುಗೆಗಳು ಕೂಡ ಬಹಳ ಮಹತ್ವದ್ದು.

### ಕಣ್ಣೋಟಗಳ ಸಮರ

ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಮೂಡಿಬಂದ ಮೂರು ಕಣ್ಣೋಟಗಳ ನಡುವಿನ ಸತತ ಸಮರದ ಒಂದು ಫಲವಾಗಿ ಎಲ್ಲರನ್ನೂ ಒಳಗೊಳ್ಳುವ ಭಾರತದ ಪರಿಕಲ್ಪನೆ ಮೂಡಿಬಂತು. ಮುಖ್ಯಧಾರೆಯ ಕಾಂಗ್ರೆಸ್ ಕಣ್ಣೋಟ ಸ್ವತಂತ್ರ ಭಾರತವು ಒಂದು ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರವಾಗಿರುತ್ತದೆ ಎಂದು ಪರಿಕಲ್ಪಿಸಿತು. ಕಮ್ಯುನಿಸ್ಟರು ಇದನ್ನು ಒಪ್ಪುತ್ತಲೇ, ಇನ್ನೂ ಮುಂದೆ ಹೋಗಿ, ಸ್ವತಂತ್ರ ಭಾರತ ಬಂಡವಾಳಶಾಹಿ ಅಭಿವೃದ್ಧಿ ಪಥವನ್ನು ಅನುಸರಿಸಿದರೆ, ಇಂತಹ ಒಂದು ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರಕ್ಕೆ ತಾಳಿಕೆಯಿರುವುದಿಲ್ಲ ಎಂದರು. ಹೀಗೆ ಕಮ್ಯುನಿಸ್ಟರು ನಾವು ಸಾಧಿಸುವ ರಾಜಕೀಯ ಸ್ವಾತಂತ್ರ್ಯವನ್ನು ಪ್ರತಿಯೊಬ್ಬ ಭಾರತೀಯನ ಸಾಮಾಜಿಕ–ಆರ್ಥಿಕ ಸ್ವಾತಂತ್ರ್ಯವಾಗಿ ವಿಸ್ತರಿಸಬೇಕು ಎಂಬ ಕಣ್ಣೋಟವನ್ನು ಹೊಂದಿದ್ದರು. ಇದು ಸಾಧ್ಯವಾಗುವುದು ಸಮಾಜವಾದದ ಅಡಿಯಲ್ಲಿ ಮಾತ್ರ.

ಇವೆರಡಕ್ಕೂ ವಿರುದ್ಧವಾಗಿದ್ದ ಮೂರನೇ ಕಣ್ಣೋಟ, ಸ್ವತಂತ್ರ ಭಾರತದ ಚಾರಿತ್ರ್ಯವನ್ನು ಅದರ ಜನರ ಧಾರ್ಮಿಕ ಸಂಯೋಜನೆಯಿಂದ ನಿರ್ಧರಿಸಬೇಕು ಎಂದು ವಾದಿಸಿತು. ಈ ಕಣ್ಣೋಟದ ಎರಡು ಆವೃತ್ತಿಗಳಿದ್ದವು–ಮುಸ್ಲಿಂ ಲೀಗ್ ಒಂದು 'ಇಸ್ಲಾಮಿಕ್ ಪ್ರಭುತ್ವ'ದ ಪ್ರತಿಪಾದನೆ ಮಾಡುತ್ತಿತ್ತು, ಮತ್ತು ಆರೆಸ್ಸೆಸ್ ತನ್ನ 'ಹಿಂದುರಾಷ್ಟ್ರ'ವನ್ನು ಪ್ರತಿಪಾದಿಸುತ್ತಿತ್ತು. ಮುಸ್ಲಿಂ ಲೀಗ್ ದೇಶದ ದುರದೃಷ್ಟಕರ ವಿಭಜನೆಯೊಂದಿಗೆ ಯಶಸ್ವಿಯಾಯಿತು. ಇದರಲ್ಲಿ ಬ್ರಿಟಿಶರ ಕಸರತ್ತುಗಳು, ನೆರವು ಮತ್ತು ಕುಮ್ಮಕ್ಕು ಚೆನ್ನಾಗಿ ಕೆಲಸ ಮಾಡಿತು. ಇದರೆಲ್ಲ ದುಷ್ಪರಿಣಾಮಗಳೊಂದಿಗೆ, ಈಗಲೂ ಇದು ಉದ್ವಿಗ್ನತೆಗಳನ್ನು ಕೆದಕುತ್ತಲೇ ಇದೆ. ಇನ್ನು, ಸ್ವಾತಂತ್ರ್ಯದ ವೇಳೆಯಲ್ಲಿ ಗುರಿ ಸಾಧಿಸುವಲ್ಲಿ ವಿಫಲವಾದ ಆರೆಸ್ಸೆಸ್, ಸ್ವತಂತ್ರ ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರ ಭಾರತವನ್ನು, ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ನಮೂನೆಯ 'ಹಿಂದುರಾಷ್ಟ್ರ'ವಾಗಿ ಪರಿವರ್ತಿಸುವ ತನ್ನ ಪರಿಯೋಜನೆಯನ್ನು ಮುಂದುವರೆಸಿತು.

ಸ್ಪಷ್ಟವಾಗಿಯೂ, ಒಂದು ರೀತಿಯಲ್ಲಿ, ಇಂದಿನ ತಾತ್ವಿಕ ಸಮರಗಳು ಮತ್ತು ರಾಜಕೀಯ ಸಂಘರ್ಷಗಳು ಈ ಮೂರು ಕಣ್ಣೋಟಗಳ ನಡುವಿನ ಮುಂದುವರಿಕೆಯೇ ಆಗಿವೆ.

### ಜಾತ್ಯತೀತ ಪ್ರಜಾಪ್ರಭುತ್ವ

ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವ ಎರಡು ಭಿನ್ನ, ಪ್ರತ್ಯೇಕ ಲಕ್ಷಣಗಳಲ್ಲ ಎಂಬ ಸಂಗತಿಯನ್ನು ಗುರುತಿಸಿರುವುದು ಒಂದು ಎಲ್ಲರನ್ನೂ ಒಳಗೊಳ್ಳುವ ಭಾರತದ ಕಮ್ಯುನಿಸ್ಟ್ ಕಣ್ಣೋಟದ ಅವಿಭಾಜ್ಯ ಭಾಗವೇ ಆಗಿದೆ. ಭಾರತದ ವಾಸ್ತವತೆಯಲ್ಲಿ, ಇವು ಸ್ವಭಾವತಃ ಅವಿಭಾಜ್ಯವಾಗಿರುವಂತವುಗಳು. ಭಾರತದ ವೈವಿಧ್ಯತೆಯ ಎಲ್ಲ ಗುಣ ವಿಶೇಷಗಳ ರಕ್ಷಣೆ ಮತ್ತು ಅವುಗಳಿಗೆ ಸಮಾನತೆ, ನಿರ್ದಿಷ್ಟವಾಗಿ, ಧಾರ್ಮಿಕ ಅಲ್ಪಸಂಖ್ಯಾತರ ರಕ್ಷಣೆ ಪ್ರಜಾಪ್ರಭುತ್ವದ ಅನಿವಾರ್ಯ ಅಂಶ. ಅದೇ ರೀತಿಯಲ್ಲಿ, ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳಿಲ್ಲದೆ ಜಾತ್ಯತೀತತೆಗೆ ತಾಳಿಕೆಯಿರದು. ನಿಜ ಹೇಳಬೇಕೆಂದರೆ, ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸಮಾನತೆಯ ಸಾಂವಿಧಾನಿಕ ಖಾತ್ರಿಯನ್ನು ಒಂದು ಚೈತನ್ಯಶೀಲ ಪ್ರಜಾಪ್ರಭುತ್ವವಿಲ್ಲದೆ ಸ್ಥಾಪಿಸಲು ಸಾಧ್ಯವಿಲ್ಲ. ಕಮ್ಯುನಿಸ್ಟರು, ಹಿಂದೆಯೂ ಭಾರತದಲ್ಲಿ ಇಂತಹ ಒಂದು ಜಾತ್ಯತೀತ ಪ್ರಜಾಪ್ರಭುತ್ವವನ್ನು ಅತ್ಯಂತ ದೃಢಚಿತ್ತದಿಂದ ಎತ್ತಿ ಹಿಡಿದಿದ್ದಾರೆ ಮತ್ತು ಇಂದೂ ಕೂಡ ಎತ್ತಿ ಹಿಡಿಯುತ್ತಿದ್ದಾರೆ.

ನಿಜ ಹೇಳಬೇಕೆಂದರೆ, 1920ರಷ್ಟು ಹಿಂದೆಯೇ, ಸಿಪಿಐ ಸ್ಥಾಪನೆಯಾದ ಕೆಲವೇ ಸಮಯದಲ್ಲಿ, ಎಂ.ಎನ್.ರಾಯ್ ಆಗ ಕೋಮು ಗಲಭೆಗಳು ಉತ್ಕಟಗೊಂಡಿದ್ದ ಹಿನ್ನೆಲೆಯಲ್ಲಿ, ಕೋಮುವಾದಿ ವಿಭಜನೆಗಳಿಗೆ ಏಕೈಕ ಪತ್ಯೌಷಧಿ ಎಲ್ಲ ಜಾತಿಗಳು ಮತ್ತು ಸಮುದಾಯಗಳಿಗೆ ಸೇರಿದ ದುಡಿಯುವ ಜನಗಳ ವರ್ಗ ಐಕ್ಯತೆ ಎಂದು ಪಕ್ಷದ ಪರವಾಗಿ ಬರೆದಿದ್ದರು. ಕಮ್ಯುನಿಸ್ಟರ ಅಸ್ತಿತ್ವದ ಈ ಇಡೀ ಶತಮಾನದಾದ್ಯಂತ, ತಮ್ಮ ಕೆಲಸದಲ್ಲಿ ಈ 'ಶ್ರಮಜೀವಿಗಳ ಐಕ್ಯತೆ'ಯನ್ನು ಬಲಪಡಿಸುವುದರ ಮೇಲೆ ಒತ್ತು ನೀಡಿದ್ದಾರೆ.

ಎಲ್ಲರಿಗೂ ತಿಳಿದಿರುವಂತೆ, 1920ರಲ್ಲಿ ಸ್ಥಾಪನೆಯಾದಂದಿನಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಪ್ರತಿಯೊಂದು ವಾರ್ಷಿಕ ಅಧಿವೇಶನದಲ್ಲಿ, ಸಿಪಿಐ ರಾಷ್ಟ್ರೀಯ ಆಂದೋಲನದ ಅಜೆಂಡಾದಲ್ಲಿ ಏನಿರಬೇಕು ಎಂದು ಒಂದು ಪ್ರಣಾಳಿಕೆಯನ್ನು ಸಲ್ಲಿಸುತ್ತಿತ್ತು (ಅಹಮದಾಬಾದ್, 1921; ಗಯಾ, 1922 ಮುಂತಾಗಿ)

ಇವುಗಳಲ್ಲಿ 1926ರ ಗುವಾಹಾಟಿ ಅಧಿವೇಶನದಲ್ಲಿ ಸಲ್ಲಿಸಿದ ಪ್ರಣಾಳಿಕೆ, ನಿರ್ದಿಷ್ಟವಾಗಿ ಆಗ ನಡೆಯುತ್ತಿದ್ದ ಕೋಮು ಘರ್ಷಣೆಗಳ ಬಗ್ಗೆ ಹೇಳಿತ್ತು. ಶ್ರಮಜೀವಿಗಳ ಐಕ್ಯತೆಯನ್ನು ಬಲಪಡಿಸಬೇಕು ಎಂದು ಕಾಂಗ್ರೆಸ್ ಅಧಿವೇಶನವನ್ನು ಆಗ್ರಹಿಸುತ್ತ ಪ್ರಣಾಳಿಕೆ ಹೀಗೆ ಹೇಳಿತ್ತು:

> "ಕಳೆದ ಕೆಲವು ವರ್ಷಗಳಿಂದ ದೇಶವನ್ನು ವಿಧ್ವಂಸಗೊಳಿಸುತ್ತಿರುವ ಕೋಮು ಘರ್ಷಣೆಗಳಿಂದ ಹಲವರು ಧೈರ್ಯಗೆಟ್ಟಿರಬಹುದು. ಖಂಡಿತವಾಗಿಯೂ ಇದು ಒಂದು ಧೈರ್ಯಗೆಡಿಸುವ ವಿದ್ಯಮಾನವೇ. ಆದರೆ ಇಲ್ಲಿಯೂ ಕೂಡ ಒಂದು ಜನತೆಯ ಪಕ್ಷ ಇತ್ಯರ್ಥ ಕಂಡುಕೊಳ್ಳುತ್ತದೆ. ಮೇಲ್ವರ್ಗಗಳು ಹಕ್ಕುಗಳು ಮತ್ತು ವಿಶೇಷ ಸೌಲಭ್ಯಗಳಿಗಾಗಿ ಹೋರಾಡುತ್ತಿದ್ದರೆ, ಎರಡೂ ಕೋಮುಗಳ ಜನಸಮುದಾಯಗಳ ನಡುವೆ ಅತ್ಯಗತ್ಯವಾದೊಂದು ಸಮಾನ ಅಂಶವಿದೆ. ಅದೆಂದರೆ ಶೋಷಣೆ. ಹಿಂದು ಮತ್ತು ಮುಸ್ಲಿಂ ಕಾರ್ಮಿಕರು ಒಂದೇ ಕಾರ್ಖಾನೆಯಲ್ಲಿ ಬೆವರು ಸುರಿಸುತ್ತಾರೆ. ಹಿಂದು ಮತ್ತು ಮುಸ್ಲಿಂ ರೈತರು ಪಕ್ಕ–ಪಕ್ಕದಲ್ಲೇ ಭೂಮಿಯ ಮೇಲೆ ಶ್ರಮಿಸುತ್ತಾರೆ, ಭೂಮಾಲಕ, ಲೇವಾದೇವಿಗಾರ, ಮತ್ತು ಸಾಮ್ರಾಜ್ಯಶಾಹಿಗಳ ಏಜೆಂಟರಿಂದ ಸಮಾನವಾಗಿ ದರೋಡೆ ಗೊಳಗಾಗುತ್ತಾರೆ. ಮುಸ್ಲಿಂ ಕಾರ್ಮಿಕನಿಗೆ ಆತನ ಧರ್ಮದವನೇ ಮಾಲಕನಾಗಿದ್ದಾಗ ಹೆಚ್ಚು ಸಂಬಳವೇನೂ ಕೊಡುವುದಿಲ್ಲ. ಅಥವ ಹಿಂದು ಭೂಮಾಲಕ ತನ್ನ ಹಿಂದು ಗೇಣಿದಾರನಿಂದ ಮುಸ್ಲಿಂ ಗೇಣಿದಾರನಿಗಿಂತ ಕಡಿಮೆ ಗೇಣಿಯನ್ನೇನೂ ವಸೂಲಿ ಮಾಡುವುದಿಲ್ಲ.
>
> "ಇದೇ ನಿಯಮ ಶೋಷಿತ ಮಧ್ಯಮ ವರ್ಗಗಳಿಗೂ(ಸಣ್ಣ ಬುದ್ಧಿ ಜೀವಿಗಳು, ಸಣ್ಣ ವ್ಯಾಪಾರಿಗಳು, ಕುಶಲಕರ್ಮಿಗಳು ಇತ್ಯಾದಿ) ಅನ್ವಯಿಸುತ್ತದೆ. ಶೋಷಣೆಯ ಸಮಾನ ಬಂಧದಿಂದ ಒಂದಾಗಿರುವ ಸಮಸ್ತ ಜನತೆಯ 98ಶೇ. ಜನಗಳಿಗೆ ಕೋಮುವಾದಿ ಘರ್ಷಣೆಗಳಲ್ಲಿ ತೊಡಗಲು ಕಾರಣಗಳೇನೂ ಇಲ್ಲ. ಅವರು ತಮ್ಮ ಆರ್ಥಿಕ ಹಿತಗಳ ಬಗ್ಗೆ ಪ್ರಜ್ಞಾಶೀಲರಾಗುವಂತೆ ಮಾಡಿ, ತಮ್ಮ ಸಮಾನ ಶತ್ರುವಿನ ವಿರುದ್ಧ, ಶೋಷಣೆಯ ಶಕ್ತಿಗಳ ವಿರುದ್ಧ ಹೋರಾಟ ನಡೆಸಲು ಧೀರ ನೇತೃತ್ವ ಕೊಡಿ. ಆಗ ಕೋಮುವಾದಿ ಘರ್ಷಣೆಯನ್ನು ಪ್ರಚೋದಿಸುವ ಕಪಟ ಧೋರಣೆಯ ಬುಡವೇ ಕಿತ್ತುಕೊಂಡು ಹೋಗುತ್ತದೆ. ನಿಜ, ಇದನ್ನು ನಾಳೆ ಬೆಳಗಾಗುವುದರ ಒಳಗೆ ಮಾಡಲು ಸಾಧ್ಯವಿಲ್ಲ. ಆದರೆ ರಾಷ್ಟೀಯ ಆಂದೋಲನದ ಜೀವ ತಿನ್ನುತ್ತಿರುವ ಕೋಮುವಾದದ ಕ್ಯಾನ್ಸರ್‌ಗೆ ಬೇರೆ ಯಾವ ಮದ್ದೂ ಇಲ್ಲ"

### ಜಾತ್ಯತೀತತೆ

ಜಾತ್ಯತೀತತೆ ಎಂದರೆ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವುದು–ಇದು ಕಮ್ಯುನಿಸ್ಟರ ನೀತಿಬದ್ಧ ನಿಲುವು. ಇದರ ಅರ್ಥ, ಪ್ರಭುತ್ವ ಒಬ್ಬ ವ್ಯಕ್ತಿಯ ನಂಬಿಕೆಯ ಸ್ವಾತಂತ್ರ್ಯವನ್ನು ದೃಢವಾಗಿ ರಕ್ಷಿಸುತ್ತದೆ, ಆದರೆ ತಾನು ಯಾವುದೇ ಧರ್ಮವನ್ನು ಪ್ರತಿಪಾದಿಸುವುದಿಲ್ಲ ಅಥವ ಆದ್ಯತೆ ನೀಡುವುದಿಲ್ಲ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇದನ್ನು ಕಾರ್ಯತಃ ಎಲ್ಲ ಧರ್ಮಗಳಿಗೆ ಸಮಾನತೆ ಎಂಬ ನಿರೂಪಣೆಗೆ ಇಳಿಸಲಾಗಿದೆ. ಇದರಲ್ಲೇ ಬಹುಸಂಖ್ಯಾತರ ಧಾರ್ಮಿಕ ನಂಬಿಕೆಗಳ ಪರವಾದ ಪಕ್ಷಪಾತ ಅಡಕಗೊಂಡಿದೆ. ನಿಜವಾಗಿ, ಇಂದು ಇದು ಕೋಮುವಾದಿ ಮತ್ತು ಮೂಲಭೂತವಾದಿ ಶಕ್ತಿಗಳ ಅಪಪ್ರಚಾರಕ್ಕೆ ಗ್ರಾಸ ಒದಗಿಸುತ್ತದೆ.

ಆದ್ದರಿಂದ ಕಮ್ಯುನಿಸ್ಟರಿಗೆ, ಜಾತ್ಯತಿತತೆಯ ಅಥವ ಜಾತ್ಯತೀತ ಪ್ರಜಾಪ್ರಭುತ್ವದ ರಕ್ಷಣೆ ಎಂಬುದು ಮಹತ್ವ ಪಡೆದಿರುವುದು ಭಾರತದ ಎಲ್ಲರನ್ನೂ ಒಳಗೊಳ್ಳುವ ರಾಷ್ಟ್ರವಾದದ ರಕ್ಷಣೆಗೆ, ಆಮೂಲಕ ಭಾರತೀಯ ಸಂವಿಧಾನದ ರಕ್ಷಣೆಗೆ ಮಾತ್ರವೇ ಅಲ್ಲ; ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸಲು ಮತ್ತು ಸಮಾನತೆಯ ಸಂವಿಧಾನಿಕ ಖಾತ್ರಿಯನ್ನು, ಪ್ರಜಾಪ್ರಭುತ್ವದ ಸಾರವನ್ನು ಈಡೇರಿಸಿಕೊಳ್ಳಲು ಮಾತ್ರವೇ ಅಲ್ಲ; ಅತ್ಯಂತ ಶೋಷಿತ ವರ್ಗಗಳ ನಡುವೆ ವರ್ಗ ಐಕ್ಯತೆಯನ್ನು ಬಲಪಡಿಸಿ, ಸಮಾಜವಾದದ ಗುರಿಸಾಧನೆಯತ್ತ ಮುನ್ನಡೆಯಲಿಕ್ಕಾಗಿಯೂ ಅಷ್ಟೇ ಮಹತ್ವಪೂರ್ಣವಾಗಿದೆ. ಕೋಮುವಾದ ಈ ಐಕ್ಯತೆಯನ್ನೇ ಛಿದ್ರಗೊಳಿಸುತ್ತದೆ ಮತ್ತು ಭಾರತದ ಚರಿತ್ರೆಯನ್ನು ಹಿಂದಕ್ಕೆ ನಡೆಯುವ, ಹಿಂದುಳಿಕೆಯ ಒಂದು ದಾರಿಯತ್ತ ಒಯ್ಯುತ್ತದೆ.


ಜಾತ್ಯತೀತತೆಯ ರಕ್ಷಣೆಯ ಹೋರಾಟದಲ್ಲಿ ಆರೆಸ್ಸೆಸ್ ಮತ್ತು ಬಿಜೆಪಿಯಿಂದ ಭಾರತದಲ್ಲಿ ಜಾತ್ಯತೀತ ಪ್ರಜಾಪ್ರಭುತ್ವಕ್ಕೆ ಬೆದರಿಕೆಯನ್ನು ವಿಶ್ಲೇಷಿಸುತ್ತ ಸಿಪಿಐ(ಎಂ) ಪಾರ್ಟಿ ಕಾರ್ಯಕ್ರಮ, 2000 ಹೀಗೆ ಹೇಳಿತ್ತು: "ಕೋಮುವಾದಿ ಮತ್ತು

ಪುಟ 6 ಕ್ಕೆ

ಸಿಪಿಐ ಸ್ತಾಪನೆಯಾದ ಕೆಲವೇ ಸಮಯದಲ್ಲಿ, ಎಂ.ಎನ್. ರಾಯ್ ಆಗ ಕೋಮು ಗಲಭೆಗಳು ಉತ್ಕಟಗೊಂಡಿದ್ದ ಹಿನ್ನೆಲೆಯಲ್ಲಿ, ಕೋಮುವಾದಿ ವಿಭಜನೆಗಳಗೆ ಏಕೈಕ ಪತ್ಯೌಷಧಿ ಎಲ್ಲ ಜಾತಿಗಳು ಮತ್ತು ಸಮುದಾಯಗಳಗೆ ಸೇರಿದ ದುಡಿಯುವ ಜನಗಳ ವರ್ಗ ಐಕ್ಯತೆ ಎಂದು ಪಕ್ಷದ ಪರವಾಗಿ ಬರೆದಿದ್ದರು. ಕಮ್ಯುನಿಸ್ಟರ ಅಸ್ತಿತ್ವದ ಈ ಇಡೀ ಶತಮಾನದಾದ್ಯಂತ, ತಮ್ಮ ಕೆಲಸದಲ್ಲಿ ಈ 'ಶ್ರಮಜೀವಿಗಳ ಐಕ್ಯತೆ'ಯನ್ನು ಬಲಪಡಿಸುವುದರ ಮೇಲೆ ಒತ್ತು ನೀಡಿದ್ದಾರೆ.

1920ರಲ್ಲಿ ಸ್ಥಾಪನೆಯಾದಂದಿನಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಪ್ರತಿಯೊಂದು ವಾರ್ಷಿಕ ಅಧಿವೇಶನದಲ್ಲಿ, ಸಿಪಿಐ./ವರ್ಕರ್ಸ್ ಅಂಡ್ ಪೆಸಂಟ್ಸ್ ಪಾರ್ಟಿ ರಾಷ್ಟ್ರೀಯ ಆಂದೋಲನದ ಅಜೆಂಡಾದಲ್ಲಿ ಏನುಬೇಕು ಎಂದು ಒಂದು ಪ್ರಣಾಳಿಕೆಯನ್ನು ಸಲ್ಲಿಸುತ್ತಿತ್ತು.

ಪಕ್ಕದಲ್ಲಿರುವುದು 1927ರ ಮದ್ರಾಸ್ ಅಧಿವೇಶನಕ್ಕೆ ಒಂದು ರಾಷ್ಟ್ರೀಯ ಸಂವಿಧಾನ ಸಭೆ, ವಯಸ್ಕ ಮತದಾನ ಮತ್ತು ಪೂರ್ಣ ಸ್ವಾತಂತ್ರ್ಯ ಕುರಿತ ಪ್ರಣಾಳಿಕೆ


MANIFESTO OF THE
WORKERS' AND PEASANTS' PARTY
TO THE
INDIAN NATIONAL CONGRESS
*Madras, December, 1927*

(Boycott the Commission)
(No Round Table Conferences)

A NATIONAL CONSTITUENT ASSEMBLY
UNIVERSAL ADULT SUFFRAGE
COMPLETE INDEPENDENC

RALLY THE PEOPLE TO MASS ACTION
General Strike and Non-Payment of Taxes
LAND TO THE PEASANT
BREAD FOR THE TOILER
EDUCATION FOR ALL

# ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ

## ಒಂದು ಸ್ಥೂಲ ಚಿತ್ರ




**ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷದ ಒಂದು ಘಟಕ ರಚನೆಗೊಂಡದ್ದು ಸುಮಾರು ಎರಡು ದಶಕಗಳ ನಂತರ, ಅಂದರೆ 1936ರಲ್ಲಿ. ಅಂದಿನಿಂದ ಇಂದು ಕರ್ನಾಟಕವೆನಿಸಿರುವ ಪ್ರದೇಶದಲ್ಲಿ ಕಮ್ಯುನಿಸ್ಟರ ಚಟುವಟಿಕೆಗಳ ಒಂದು ಸ್ಥೂಲ ನೋಟ ಈ ಲೇಖನದಲ್ಲಿದೆ. ಕರ್ನಾಟಕದ ಏಕೀಕರಣದಲ್ಲಿ ಕಮ್ಯುನಿಸ್ಟರ ಪಾತ್ರದ ಒಂದು ಚಿತ್ರವೂ ಇಲ್ಲಿದೆ.**

– **ಪ್ರಕಾಶ್ ಕೆ.**

ಸ್ವಾತಂತ್ರ್ಯ–ಪೂರ್ವ ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯು ಭೌಗೋಳಿಕವಾಗಿ ತೀವ್ರ ಮಿತಿಗಳಿಗೆ ಒಳಪಟ್ಟ ಆದರೆ ಗಮನಾರ್ಹವಾದ ಹೋರಾಟಗಳನ್ನು ರೂಪಿಸಿದ ಚಳುವಳಿಯಾಗಿದೆ. ಮಿತಿಯೇನೆಂದರೆ, ವಿಭಿನ್ನ ಆಡಳಿತ ಪ್ರದೇಶಗಳ ಕಾರಣದಿಂದ ಕಮ್ಯುನಿಸ್ಟ್ ಸಿದ್ಧಾಂತದ ಪ್ರಭಾವವು ಏಕರೂಪವಾಗಿ ಇಲ್ಲಿ ಪರಿಣಮಿಸಲಿಲ್ಲ. ಸ್ವಾತಂತ್ರ್ಯ ಹೋರಾಟವೂ ಸೇರಿದಂತೆ ಎಲ್ಲ ಹೋರಾಟಗಳೂ ಇದೇ ಸಮಸ್ಯೆಯನ್ನು ಎದುರಿಸಿವೆ. ಈ ವಿಚಾರದಲ್ಲಿ ದಕ್ಷಿಣ ಭಾರತದ ಇತರ ರಾಜ್ಯಗಳು ಸರಿಸುಮಾರು ಕರ್ನಾಟಕಕ್ಕಿಂತ ಉತ್ತಮ ಪರಿಸ್ಥಿತಿಯಲ್ಲಿದ್ದವು. ಮೈಸೂರು ಸಂಸ್ಥಾನವನ್ನು ಮತ್ತು ಕೊಡಗನ್ನು ಹೊರತುಪಡಿಸಿ ಕನ್ನಡ ಭಾಷಿಕರ ಉಳಿದ ಭಾಗಗಳು, ಅವುಗಳು ಒಳಪಟ್ಟಿದ್ದ ಪ್ರಾಂತ್ಯ ಅಥವಾ ಸಂಸ್ಥಾನಗಳ ಆಡಳಿತದಲ್ಲಿ ಪ್ರಭಾವಶಾಲಿ ವಿಭಾಗಗಳಾಗಿರಲಿಲ್ಲ. ಮದ್ರಾಸ್ ಪ್ರಾಂತ್ಯಕ್ಕೆ ಒಳಪಟ್ಟಿದ್ದ ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ಒಂದಕ್ಕೊಂದು ಸಂಬಂಧವಿಲ್ಲದ ಕನ್ನಡದ ಭೂಪ್ರದೇಶಗಳಾಗಿದ್ದವು. ಹೀಗಾಗಿ ಆ ಪ್ರಾಂತ್ಯದ ಕಮ್ಯುನಿಸ್ಟ್ ಚಳುವಳಿಯ ಜೊತೆಯಲ್ಲಿ ಸಮನ್ವಯತೆಯನ್ನು ಸಾಧಿಸಲು ಆಗಿಲ್ಲ. ದಕ್ಷಿಣ ಕನ್ನಡವು ಭೌಗೋಳಿಕವಾಗಿ ಕೇರಳದ ಮಲಬಾರಿನ ಪ್ರಭಾವಕ್ಕೆ ಒಳಗಾಗಿದೆ. ಆದರೆ ಕರ್ನಾಟಕದ ಇತರ ಭಾಗಗಳೊಂದಿಗೆ ಅದರ ಸಂಪರ್ಕಗಳು ಅಷ್ಟಾಗಿ ಕಾಣುವುದಿಲ್ಲ. ಮದ್ರಾಸ್ ಪ್ರಾಂತ್ಯಕ್ಕೇ ಸೇರಿದ ಬಳ್ಳಾರಿಯು ಆಂಧ್ರದ ಗಡಿಯ ಕಾರಣಕ್ಕೆ ತೆಲಂಗಾಣ ಮತ್ತು ಆಂಧ್ರ ಪ್ರದೇಶದ ಪ್ರಭಾವದಲ್ಲಿ ಉಳಿದುಬಿಟ್ಟಿತ್ತು. ಹೈದರಾಬಾದ್ ಕರ್ನಾಟಕದ ಪ್ರದೇಶಗಳಲ್ಲಿ ನಿಜಾಂ ನಿರಂಕುಶಾಡಳಿತ ಮತ್ತು ಪ್ರಬಲ ಪಾಳೇಗಾರಿ ವ್ಯವಸ್ಥೆಯ ಕಾರಣಕ್ಕೆ ದೀರ್ಘ ಕಾಲ ಕಮ್ಯುನಿಸ್ಟ್ ಚಳುವಳಿಯ ಪ್ರಭಾವ ಅಲ್ಲಿ ಬೀರಲಿಲ್ಲ. ತೆಲಂಗಾಣ ಸಶಸ್ತ್ರ ಹೋರಾಟದ ಪ್ರಭಾವವು ಸ್ವಾತಂತ್ರ್ಯಾ ನಂತರದಲ್ಲಷ್ಟೇ ಅಲ್ಲಿ ಉಂಟಾಯಿತು. ಬಾಂಬೆಯು ಸ್ವಾತಂತ್ರ್ಯ ಹೋರಾಟದ ಪ್ರಮುಖ ಕೇಂದ್ರವಾಗಿದ್ದರಿಂದ ಬಾಂಬೆ ಕರ್ನಾಟಕ ಪ್ರದೇಶವು ಇನ್ನೊಂದು ರೀತಿಯ ಪ್ರಭಾವಕ್ಕೆ ಒಳಗಾಗಿದೆ. ಹೀಗಾಗಿ ಸ್ವಾತಂತ್ರ್ಯ–ಪೂರ್ವ ಕರ್ನಾಟಕವು ವಿವಿಧ ಆಡಳಿತಗಳ ಕಾರಣದಿಂದ ಕಮ್ಯುನಿಸ್ಟ್ ಚಳುವಳಿಯು ಸಾಧಾರಣವಾಗಿ ಏಕೀಕೃತವಾದ ಪ್ರಭಾವ ಅಥವಾ ಪರಿಣಾಮವನ್ನು ಉಂಟು ಮಾಡಲು ಸಾಧ್ಯವಾಗಿಲ್ಲ. ಈ ಮಿತಿಗೆ ಒಳಪಟ್ಟು ಆರಂಭವಾದ ಕಮ್ಯುನಿಸ್ಟ್ ಚಳುವಳಿಯ ಆರಂಭ ಮತ್ತು ಬೆಳವಣಿಗೆಯನ್ನು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಒಂದೇ ರೂಪದಲ್ಲಿ ಮತ್ತು ಪ್ರಮಾಣದಲ್ಲಿ ಕಾಣಲು ಸಾಧ್ಯವಿಲ್ಲ.

ಮೈಸೂರು ಸಂಸ್ಥಾನದಲ್ಲಿ ಬೆಂಗಳೂರು ಕೇಂದ್ರಿತವಾಗಿ ಚಟುವಟಿಕೆಯಲ್ಲಿದ್ದ ಜನಜಾಗೃತಿ ಸಂಘವು ಕಮ್ಯುನಿಸ್ಟ್ ಪಕ್ಷದ ಬಹಿರಂಗ ರೂಪವಾಗಿತ್ತು. ಇದರ ಮೂಲಕ ಮೈಸೂರು ಸಂಸ್ಥಾನದಲ್ಲಿ ಮೊದಲಿಗೆ ಕಮ್ಯುನಿಸಂನ ಬೀಜಗಳನ್ನು ಬಿತ್ತಿದವರಲ್ಲಿ ಸಿ.ಬಿ.ಮೊಣ್ಣಯ್ಯ ಮೊದಲಿಗರಾಗಿದ್ದರು. ಇವರು ಇತರರೊಂದಿಗೆ ಸೇರಿ ಭೂಗತವಾಗಿ ಆರಂಭಿಸಿದ ಸಿಪಿಐ ಘಟಕವನ್ನು ಬ್ರಿಟಿಷರು ವಿಷೇಧ ಮಾಡಿದ್ದರಿಂದ 'ಜನ ಜಾಗೃತಿ ಸಂಘ"ದ ಹೆಸರಿನಲ್ಲಿ ಚಟುವಟಿಕೆ ಮಾಡಿದರು.

ವಿದ್ಯಾರ್ಥಿಗಳನ್ನು ಮತ್ತು ಕಾರ್ಮಿಕರನ್ನು ಕೇಂದ್ರೀಕರಿಸಿ ಹೋರಾಟ ಮತ್ತು ಪ್ರಚಾರ, ಕಾಂಗ್ರೆಸಿನೊಳಗೆ ಒತ್ತಡ ಗುಂಪಾಗಿ ಕೆಲಸ ಮಾಡುವುದು ಮತ್ತು ಕಾಂಗ್ರೆಸಿನ ಸಾಂಪ್ರದಾಯಿಕ ಶಕ್ತಿ ಮತ್ತು ಅಧಿಕಾರ ವಿಧಾನಗಳಿಗೆ ಬದಲಾಗಿ ಕಾರ್ಮಿಕ ವರ್ಗದ ಸಂಘಟನೆಗಳೊಳಗೆ ಪ್ರಜಾಪ್ರಭುತ್ವ ಪರ್ಯಾಯ ಬೆಳೆಸುವ ಉದ್ದೇಶಗಳನ್ನು ಇದರ ಚಟುವಟಿಕೆಗಳಲ್ಲಿ ಕಾಣಬಹುದು. ಈ ಪ್ರಕ್ರಿಯೆಯಲ್ಲಿ ಎನ್.ಡಿ.ಶಂಕರ್, ಎಸ್.ರಾಮಸ್ವಾಮಿ, ಕೆ.ಎಸ್. ಕುಮಾರನ್, ಎನ್.ಎನ್.ಚೆಂಡೂರ್, ಎಂ.ಎಸ್. ರಾಮರಾವ್, ಕೆ.ಶ್ರೀನಿವಾಸಮೂರ್ತಿ ಮುಂತಾದವರು ಕಮ್ಯುನಿಸ್ಟ್ ಚಿಂತನೆಗಳ ಕಡೆಗೆ ಆಕರ್ಷಿತರಾದರು. ನ್ಯಾಷನಲ್ ಯೂತ್ ಲೀಗ್, ಸಿವಿಲ್ ಲಿಬರ್ಟೀಸ್ ಯೂನಿಯನ್, ಮಲ್ಲೇಶ್ವರಂ ಲೇಬರರ್ಸ್ ಕ್ಲಬ್ ಮುಂತಾದ ಸಂಘಟನೆಗಳನ್ನು ಪ್ರಾರಂಭಿಸಿ ವಿವಿಧ ರೀತಿಯ ಚಟುವಟಿಕೆಗಳನ್ನು ನಡೆಸಿದರು.

ವಿದ್ಯಾರ್ಥಿಗಳಿಗೆ ಸಂಜೆ ಅಭ್ಯಾಸ ಗುಂಪುಗಳು, ಎಡ ಸಾಹಿತ್ಯ ಓದುವುದು, ಕಾರ್ಮಿಕರ ನಡುವೆ ಕಮ್ಯುನಿಸ್ಟ್ ಸಾಹಿತ್ಯ ಪ್ರಸಾರ, 1937 ರಲ್ಲಿ ವೈಸ್‌ರಾಯ್ ಲಿನ್‌ಲಿತ್‌ಗ್ಲೋ ಭೇಟಿ ವಿರೋಧಿಸಿ ಪ್ರತಿಭಟನೆ, ಬೆಂಗಳೂರಿಗೆ ನಾರಿಮನ್ ಭೇಟಿ ವಿರೋಧ ಹಿನ್ನೆಲೆಯಲ್ಲಿ ಮೊಣ್ಣಯ್ಯನವರ ಗಡೀಪಾರು, ಅಂಡಮಾನ್ ಜೈಲಿನ ಯೋಧರನ್ನು ಬಿಡುಗಡೆ ಮಾಡಲು ಒತ್ತಾಯಿಸಿ 'ಅಂಡಮಾನ್ ಡೇ' ಮತ್ತು ಅದೇ ದಿನ ದೇಶೀ ರಾಜರ ಸಂಸ್ಥಾನಗಳಲ್ಲಿ 'ಸ್ಟೇಟ್ಸ್ ಪೀಪಲ್ಸ್ ಡೇ' ಆಚರಣೆ ಭಾಗವಾಗಿ ವಿದ್ಯಾರ್ಥಿಗಳ ಮುಷ್ಕರ, ಪರಿಣಾಮವಾಗಿ ಮುಖಂಡರಿಗೆ ಜೈಲುವಾಸ, ಇಂತಹ ಕಾರಣಗಳಿಗಾಗಿ 1938 ರಲ್ಲಿ ಜನ ಜಾಗೃತಿ ಸಂಘವನ್ನು ಕಮ್ಯುನಿಸ್ಟ್ ಘಟಕವೆಂದು ಸರ್ಕಾರ ತೀರ್ಮಾನಿಸಿ ನಿಷೇಧಿಸಿತು, ಮಾತ್ರವಲ್ಲ, ಕಮ್ಯುನಿಸ್ಟರು ಮೈಸೂರಿನಲ್ಲಿ ಭಾಷಣ ಮಾಡುವುದನ್ನು ಸರ್ಕಾರ ನಿಷೇಧಿಸಿತು. ಈ ರೀತಿಯಾಗಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದ ಜನಜಾಗೃತಿ ಸಂಘವು ಕ್ವಿಟ್ ಇಂಡಿಯ ಚಳುವಳಿಯ ಸಂದರ್ಭದಲ್ಲಿ ದುರ್ಬಲವಾಯಿತು.

**ಕರ್ನಾಟಕದ ಮೊದಲ ಕಮ್ಯುನಿಸ್ಟ್ ಘಟಕ:**

1936 ರಲ್ಲಿ ಬೆಂಗಳೂರಲ್ಲಿ ಸಿಪಿಐನ ಘಟಕ ಆರಂಭವಾಯಿತು. ಇತರೆ ಪ್ರದೇಶಗಳ ಸಿಪಿಐನ ಆರಂಭ ಮತ್ತು ಬೆಳವಣಿಗೆಯಲ್ಲಿ ಇದರ ಪಾತ್ರವೇನೂ ಇಲ್ಲ. ಸಿಪಿಐನ್ನು ಸಂಘಟನಾತ್ಮಕವಾಗಿ ಬೆಳೆಸಲು ಇವರಿಗೆ ಯೋಜನೆಯೂ ಇರಲಿಲ್ಲವೆಂದು ಕಾಣುತ್ತದೆ. ಇದೇ ರೀತಿ ಕೆಜಿಎಫ್, ಮಂಗಳೂರು, ಕಾರವಾರ, ಮೈಸೂರು ಮುಂತಾದ ಕಡೆಗಳಲ್ಲಿ ಸಿಪಿಐನ ಘಟಕಗಳು ಆರಂಭವಾಗಿವೆ. ಇವೆಲ್ಲವೂ ಪ್ರತ್ಯೇಕವಾಗಿ ಘಟಿಸಿವೆ. ಈ ರೀತಿ ಆರಂಭವಾದ ಘಟಕಗಳಿಗೆ ಸಿಪಿಐ ಕೇಂದ್ರ ಸಮಿತಿಯ ಮಾರ್ಗದರ್ಶನ ಇದ್ದ ಬಗ್ಗೆ ಹೆಚ್ಚಿನ ಮಾಹಿತಿಗಳಿಲ್ಲ. ಅದೇನಿದ್ದರೂ ಸಿಪಿಐನ ಬಾಂಬೆ ಕೇಂದ್ರವು ಉಪಾಧ್ಯಾಯ ಸಹೋದರರನ್ನು ಬಾಂಬೆ ಕರ್ನಾಟಕ ಮತ್ತು ಬೆಂಗಳೂರು ಪ್ರದೇಶಗಳಿಗೆ ಕಳುಹಿಸಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಲು ತೀರ್ಮಾನಿಸಿದ ನಂತರ ಈ ಕಣ್ಣೋಟ ಕಾಣುತ್ತದೆ. ಆ ನಂತರವಷ್ಟೇ ಕನ್ನಡ ಭಾಷಿಕ ಪ್ರದೇಶಗಳ ನಡುವೆ ಸಮನ್ವಯತೆಯನ್ನು ಸಾಧಿಸಿ ಸಿಪಿಐ ಕಟ್ಟುವ ಪ್ರಯತ್ನಗಳು ನಡೆದಿವೆ.

ಅಮೀರ್ ಹೈದರ್ ಖಾನ್ ಅವರು 1931 ರಲ್ಲಿ ಪಿ.ಸುಂದರಯ್ಯ ಅವರನ್ನು ಬೆಂಗಳೂರಿನ ಕಬ್ಬನ್‌ಪಾರ್ಕಿನಲ್ಲಿ ಭೇಟಿ ಮಾಡಿ ಕಮ್ಯುನಿಸ್ಟರನ್ನಾಗಿಸುವ ಪ್ರಯತ್ನ ಮಾಡಿದ್ದರು. ಆದರೆ ಸುಂದರಯ್ಯ ಆಗ ಒಪ್ಪಿರಲಿಲ್ಲ. ಕಾರವಾರ ಜೈಲಿನಲ್ಲಿ ಸಿ.ಬಿ.ಮೊಣ್ಣಯ್ಯನವರ ಜೊತೆಗಾರರಾಗಿದ್ದ ಕೆ.ಶ್ರೀನಿವಾಸ ಮೂರ್ತಿ ಅವರೊಂದಿಗೆ ಅನಂತಸುಬ್ಬರಾವ್ ಮತ್ತು ಎಸ್.ವಿ.ನಾರಾಯಣಮೂರ್ತಿ ಎಂಬುವರು ಸೇರಿ 1936 ರ ನವೆಂಬರ್ ಕೊನೆಯಲ್ಲಿ ಬೆಂಗಳೂರಿನ ಮಲ್ಲೇಶ್ವರದ ರೈಲ್ವೆ ಪ್ಲಾಟ್‌ಫಾರಂನಲ್ಲಿ "ಭಾರತ ಕಮ್ಯುನಿಸ್ಟ್ ಪಕ್ಷ"ದ ಕರ್ನಾಟಕದ ಮೊದಲ ಘಟಕವನ್ನು ಭೂಗತವಾಗಿ ಆರಂಭಿಸಿದರು. ಇದರ ಮೊದಲ ಕಾರ್ಯದರ್ಶಿ ಸಿ.ಬಿ.ಮೊಣ್ಣಯ್ಯ.

ಮೈಸೂರಿನ ಹಿರಿಯ ಕಮ್ಯುನಿಸ್ಟರಾಗಿದ್ದ ಉಗ್ರಪ್ಪನವರು 1943 ರಲ್ಲಿ ಪಕ್ಷದ ಸದಸ್ಯರಾಗಿದ್ದೆಂದು ಹೇಳಿದ್ದಾರೆ. ಅಲ್ಲಿ ಅದಕ್ಕೂ ಮೊದಲೇ ಕುಣಿಗಲ್ ಶ್ರೀಧರ್, ಗೌರಮ್ಮ, ಕೇಸರಿ ಕೇಶವನ್, ನಾಮಗೊಂಡ್ಲು ಕೃಷ್ಣಮೂರ್ತಿ ಮುಂತಾದವರು ಕಮ್ಯುನಿಸ್ಟರಾಗಿದ್ದರೆಂಬ ಅಂಶವನ್ನು, ಮೈಸೂರಿನಲ್ಲಿ ಜನಜಾಗೃತಿ ಸಂಘದ ಚಟುವಟಿಕೆಗಳ ಹಿನ್ನೆಲೆಯಲ್ಲಿ ಗಮನಿಸಬಹುದು.

ಮದ್ರಾಸಿನ ಕಮ್ಯುನಿಸ್ಟ್ ಮುಖಂಡರಾಗಿದ್ದ ಪಿ.ರಾಮಮೂರ್ತಿಯವರ ಮುತುವರ್ಜಿಯಿಂದ ಕೆಜಿಎಫ್‌ಗೆ ಕಳುಹಿಸಲ್ಪಟ್ಟಿದ್ದ ವಿ.ಎಂ.ಗೋವಿಂದನ್, ಕೆ.ಎಸ್.ವಾಸನ್ ಅವರನ್ನು ಒಳಗೊಂಡು ವಜ್ರವೇಲು ಚೆಟ್ಟಿಯಾರ್ ಕಾರ್ಯದರ್ಶಿಯಾಗಿದ್ದ ಸಿಪಿಐನ ಘಟಕ 1943 ರಲ್ಲಿ ಕೆಜಿಎಫ್‌ನಲ್ಲಿ ಆರಂಭವಾಯಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಸ್.ವಿ.ಘಾಟೆಯವರು ಸ್ಥಾನಬದ್ಧತೆಯ ಕಾರಣಕ್ಕಾಗಿ ಮಂಗಳೂರಿನಲ್ಲಿದ್ದ ಸಂದರ್ಭದಲ್ಲಿ, ಸಿಂಪ್ಸನ್ ಸೋನ್ಸ್, ಎ.ಕೃಷ್ಣಶೆಟ್ಟಿ, ಬಿ.ವಿ.ಕಕ್ಕಿಲ್ಲಾಯ, ಕೇಶವ ಕಾಮತ್, ಸಿ.ಗೋವಿಂದನ್, ಮೋನಪ್ಪ ಶೆಟ್ಟಿ, ಎಸ್.ಎನ್. ಹೊಳ್ಳ ಇವರನ್ನೊಳಗೊಂಡು 1937 ರಲ್ಲಿ ಸಿಪಿಐನ ಮೊದಲ ಘಟಕ ಆರಂಭವಾಯಿತು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸೈಯದ್ ಹೈದರ್, ಅಬ್ದುಲ್ ಹಮೀದ್, ಪುರುಷೋತ್ತಮ ಜೋಗಿ ನಾಯ್ಕ ಇವರು 1937 ರಲ್ಲಿ ಎಐಕೆಎಸ್ ಆರಂಭಿಸುತ್ತಾರೆ. ಇದಕ್ಕೂ ಮೊದಲೇ ಸೈಯದ್ ಹೈದರ್ ಅವರು ಸಿಪಿಐನ ಸದಸ್ಯರಾಗಿದ್ದರೆಂದು ಹೇಳಲಾಗುತ್ತದೆ. ಬಿಜಾಪುರದಲ್ಲಿ ಎನ್.ಕೆ.ಉಪಾಧ್ಯಾಯ (1941 ರಲ್ಲಿ ನಾಸಿಕ್ ಜೈಲಿನಲ್ಲಿ ಇವರು ಸಿಪಿಐ ಸದಸ್ಯರಾದರು), ಬಾಲಸಿಂಗ್ ಮಾಸ್ತರ್ ಮತ್ತು ಎಂ.ಎಂ. ಮಕಾನ್‌ದಾರ್ ಇವರು ಸೇರಿ 1944 ರಲ್ಲಿ ಸಿಪಿಐ ಘಟಕ ಆರಂಭಿಸಿದರು.

ಗುಲ್ಬರ್ಗದಲ್ಲಿ ಗಿರಣಿ ಕಾರ್ಮಿಕರನ್ನು ಹೈದರಾಬಾದಿನ ಮೊಕ್ದುಂ ಮೊಹಿಯುದ್ದೀನ್, ರಾಜ್‌ಬಹದ್ದೂರ್ ಗೌಡ್ 1940 ರ ದಶಕದಲ್ಲಿ ಸಂಘಟಿಸಿದ್ದರು. ಜೊತೆಗೆ ತೆಲಂಗಾಣ ಹೋರಾಟದಿಂದ ಆಕರ್ಷಿತರಾದ ಶ್ರೀನಿವಾಸಗುಡಿ, ಅಬ್ದುಲ್ ಕರೀಂ, ವಿ.ಎನ್.ಪಾಟೀಲ್ ಮುಂತಾದವರು ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು.

ಇವುಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಬೆಂಗಳೂರಿನಲ್ಲಿ 1936 ರಲ್ಲಿ ಆರಂಭವಾದ ಸಿಪಿಐನ ಘಟಕವೇ **ಕರ್ನಾಟಕದ ಪ್ರಥಮ ಘಟಕ** ಎನ್ನಬಹುದು.


ಹೀಗೆ ವಿಭಿನ್ನ ಪ್ರದೇಶಗಳಲ್ಲಿ ಬೆಳೆಯುತ್ತಿದ್ದ ಚಳುವಳಿಗಳನ್ನು ಕ್ರೋಢೀಕರಿಸಲು 1946 ರಲ್ಲಿ **ಸಿಪಿಐನ ಪ್ರಥಮ ಸಮ್ಮೇಳನ** ದಾವಣಗೆರೆಯಲ್ಲಿ ನಡೆಯಿತು. ಎನ್.ಎಲ್.ಉಪಾಧ್ಯಾಯರು ಕಾರ್ಯದರ್ಶಿಯಾಗಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ಪ್ರಾಂತ ಸಮಿತಿಯಲ್ಲಿ ಎನ್.ಡಿ.ಶಂಕರ್, ಎಸ್. ಎನ್.ಹೊಳ್ಳ, ಬಾಲಸಿಂಗ್ ಮಾಸ್ತರ್, ವಿ.ಎಂ. ಗೋವಿಂದನ್ ಮುಂತಾದವರಿದ್ದರು.

ಅಖಿಲ ಭಾರತ ಮಟ್ಟದಲ್ಲಿ 1936 ರ ನಂತರ ಸಂಯುಕ್ತ ರಂಗದ ಕಾರ್ಯಾಚರಣೆ ಮತ್ತು ಸಮೂಹ ಸಂಘಟನೆಗಳ ಮೂಲಕ ವಸಾಹತು–ವಿರೋಧಿ ರಾಷ್ಟ್ರೀಯ ಚಳುವಳಿ, ಬಂಡವಾಳಶಾಹಿ ಮತ್ತು ಜಮೀನ್ದಾರಿ ಶೋಷಣೆ ವಿರುದ್ಧ ಸಿಪಿಐ ತೀವ್ರವಾದ ಚಟುವಟಿಕೆಗಳನ್ನು ನಡೆಸಿತು. ಇದರ ಪರಿಣಾಮ ಕರ್ನಾಟಕದಲ್ಲೂ ಎಐಟಿಯುಸಿ, ಎಐಕೆಎಸ್ ಮತ್ತು ಎಐಎಸ್‌ಎಫ್‌ನ ಹೋರಾಟಗಳು ವಿವಿಧ ಸ್ಥರದಲ್ಲಿ ನಡೆದಿವೆ.


**ಕಾರ್ಮಿಕ ಸಂಘಟನೆ**ಯು ಬೆಂಗಳೂರು, ಕೆಜಿಎಫ್, ಮಂಗಳೂರು, ಭದ್ರಾವತಿ ಮುಂತಾದ ಪ್ರದೇಶಗಳಲ್ಲಿ ಸಕ್ರಿಯವಾಗಿತ್ತು ಮತ್ತು ಹಲವು ಗಮನಾರ್ಹ ಹೋರಾಟಗಳನ್ನು ನಡೆಸಿತು. ಕಮ್ಯುನಿಸ್ಟರ ಪ್ರಭಾವದಿಂದ ಅತ್ಯಂತ ಕೇಂದ್ರೀಕೃತವಾದ ಕಾರ್ಮಿಕ ಚಳುವಳಿ ನಡೆದದ್ದು ಕೆ.ಜಿ.ಎಫ್.ನಲ್ಲಿ. ಕಾರ್ಮಿಕರ ಕೈಬೆರಳ ಗುರುತುಗಳನ್ನು ಪಡೆಯುವುದರ ವಿರುದ್ಧ 18 ದಿನಗಳ ಕಾಲ 18,000 ಕಾರ್ಮಿಕರು 1930 ಏಪ್ರಿಲ್‌ನಲ್ಲಿ ಮುಷ್ಕರ ಮಾಡಿದ್ದ ಚರಿತ್ರೆ ಇಲ್ಲಿತ್ತು. 1946 ರಲ್ಲಿ ವಸತಿ, ಕೂಲಿ ಹೆಚ್ಚಳಕ್ಕಾಗಿ 76 ದಿನಗಳ ಮುಷ್ಕರ ನಡೆಯಿತು. ಅದೇ ವರ್ಷ ನವೆಂಬರ್ 4 ರಂದು ಕಮ್ಯುನಿಸ್ಟರ ಮಿಲಿಟೆಂಟ್ ಹೋರಾಟವನ್ನು ಸದೆ ಬಡಿಯಲು ಬ್ರಿಟಿಷ್ ಮಾಲೀಕರು ತೀರ್ಮಾನಿಸಿದ್ದರ ಪರಿಣಾಮವಾಗಿ 6 ಕಾರ್ಮಿಕರು ಗೋಲೀಬಾರಿಗೆ ಮೃತಪಟ್ಟರು.

ಗಡೀಪಾರಿಗೆ ಒಳಗಾಗಿ ಭದ್ರಾವತಿಗೆ ಬಂದ ಎನ್.ಡಿ.ಶಂಕರ್ ಅವರು ಮೊದಲ ಬಾರಿಗೆ 1942 ಮೇ 1 ರಂದು ನಿಧಿಗೆ ಗ್ರಾಮದಲ್ಲಿ ಮೇ ದಿನವನ್ನು ಆಚರಿಸಿದ ಹಿನ್ನೆಲೆಯಲ್ಲಿ ನಡೆದ ಗಲಭೆಗಳಲ್ಲಿ ಮೂರು ಜನರನ್ನು ಪೊಲೀಸರು ಗೋಲೀಬಾರ್‌ನಿಂದ ಸಾಯಿಸಿದ ಘಟನೆ ನಡೆಯಿತು.

ಪುಟ 10 ಕ್ಕೆ



ಎನ್.ಎಲ್. ಕಕ್ಕಿಲ್ಲಾಯ



ಎನ್.ಕೆ. ಉಪಾಧ್ಯಾಯ


ಎಂ ಹೆಚ್ ಕೃಷ್ಣಪ್ಪ


ಎಸ್. ಸೂರ್ಯನಾರಾಯಣ ರಾವ್


ಎಂ.ಎಸ್ ಕೃಷ್ಣನ್


ಪಿ. ರಾಮಚಂದ್ರ ರಾವ್


ಎನ್.ಎಲ್. ಉಪಾಧ್ಯಾಯ


ಕೆ.ಎಸ್.ವಾಸನ್

# ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರವನ್ನು ನೆನೆಯುತ್ತಾ......

**1921ರಲ್ಲಿ ಕಾಂಗ್ರೆಸ್‌ನ ಅಹಮದಾಬಾದ್ ಅಧಿವೇಶನದಲ್ಲಿ ಕಮ್ಯುನಿಸ್ಟರ ನಿರ್ಣಯದ ಮೊದಲು ಎಂ.ಎನ್.ರಾಯ್ ಮತ್ತು ಅಬನಿ ಮುಖರ್ಜಿ ಒಂದು ಮುಕ್ತ ಪತ್ರ ಬರೆದು, ಕಾಂಗ್ರೆಸನ್ನು ಕೆಳಕಂಡಂತೆ ಒತ್ತಾಯಿಸಿದರು: "(ಕಾಂಗ್ರೆಸ್) ಕಾರ್ಮಿಕ ಸಂಘಟನೆಗಳ ಬೇಡಿಕೆಗಳನ್ನು ರೈತ ಸಂಘಟನೆಗಳ ಕಾರ್ಯಕ್ರಮವನ್ನು ತನ್ನದೇ ಬೇಡಿಕೆಯಾಗಿ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು. ಆಗ ಕಾಂಗ್ರೆಸನ್ನು ಯಾವ ಶಕ್ತಿಯೂ ತಡೆಯದಿರುವ ಸಮಯ ಬರುತ್ತದೆ; ತಮ್ಮ ಭೌತಿಕ ಹಿತ್ತಾಸಕಿಗಳಿಗಾಗಿ ಪ್ರಜ್ಞಾಪೂರ್ವಕವಾಗಿ ಹೋರಾಡುತ್ತಿರುವ ಇಡೀ ಜನತೆಯ ತಡೆಯಲಾಗದ ಶಕ್ತಿ ಕಾಂಗ್ರೆಸ್‌ನ ಹಿಂದಿರುತ್ತದೆ." ಈ ಕಣ್ಣೋಟದೊಂದಿಗೆ ಕಮ್ಯುನಿಸ್ಟ್ ಪಕ್ಷವು ಬ್ರಿಟಿಷ್ ಆಡಳಿತದಿಂದ ವಿಮೋಚನೆಗಾಗಿ ನಡೆಯುತ್ತಿದ್ದ ಒಟ್ಟಾರೆ ರಾಷ್ಟ್ರೀಯ ಚಳುವಳಿಯ ಭಾಗವಾಗುತ್ತಲೇ, ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿತ್ತು.**

**–ನೀಲೋತ್ಪಲ ಬಸು** **ಅನುವಾದ: ಶೃಂಶಾನಾ**



ತಾಷ್ಕೆಂಟ್‌ನಲ್ಲಿ ಅಕ್ಟೋಬರ್ 17, 1920 ರಂದು ಅಸ್ತಿತ್ವಕ್ಕೆ ಬಂದ ಭಾರತೀಯ ಕಮ್ಯುನಿಸ್ಟ್ ಪಕ್ಷದ 100ನೇ ವರ್ಷಾಚರಣೆಯು ಮುಗಿಯುತ್ತಿದೆ. ಆದರೆ ಭಾರತವನ್ನು ಒಂದು ಪ್ರಜಾಸತ್ತಾತ್ಮಕ, ಧರ್ಮ ನಿರಪೇಕ್ಷ ಜನತಾ ಗಣತಂತ್ರವಾಗಿ ರೂಪಿಸುವ ಮೂಲಕ ಎಲ್ಲ ನಾಗರಿಕರು ಯಾವುದೇ ಜಾತಿ, ಜನಾಂಗ, ಧರ್ಮ ಮತ್ತು ಆರ್ಥಿಕ ಸ್ಥಾನಮಾನಗಳ ಬೇಧವಿಲ್ಲದೆ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಸಂಭ್ರಮಿಸುವಂತಾಗಬೇಕು ಎನ್ನುವ ಭಾರತೀಯ ಕಮ್ಯುನಿಸ್ಟ್ ಪಕ್ಷದ ಸ್ಥಾಪನಾ ಆಶಯವು ಈವರೆಗೂ ಈಡೇರಿಲ್ಲ. ಜೊತೆಗೆ, ಪ್ರಮುಖವಾಗಿ ಸಂವಿಧಾನದ ಈ ಮೇಲ್ಕಾಣಿಸಿದ ಆಶಯಗಳನ್ನು ಪ್ರಶ್ನೆ ಮಾಡುತ್ತಿರುವ ಇತ್ತೀಚಿನ ವರ್ಷಗಳಲ್ಲಿ, ಇದು ಹಲವು ಗಂಭೀರ ಹಿನ್ನಡೆಯನ್ನು ಎದುರಿಸಿದೆ. ಇಂದು ನಾವು ಅತ್ಯಂತ ಹೀನ ಮಟ್ಟದ ಅಸಮಾನತೆ, ಶೋಷಣೆ ಮತ್ತು ಧರ್ಮ, ಜಾತಿ ಲಿಂಗಾಧಾರಿತ ಅಸಮಾನತೆಗಳಿಂದ ಸಂವಿಧಾನಾತ್ಮಕ ಹಕ್ಕು ಮತ್ತು ಸ್ವಾತಂತ್ರ್ಯಗಳ ತೀವ್ರ ಸವೆತಗಳನ್ನು ಅನುಭವಿಸುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಕಮ್ಯುನಿಸ್ಟರ ಪಾತ್ರವನ್ನು ನೆನೆಯುವುದು ಬಹಳ ಮುಖ್ಯ. ಇಂದು ದಾಳಿಗೊಳಗಾಗಿರುವ ಪರಿಕಲ್ಪನೆಗಳಾದ ರಾಜಕೀಯ ಸ್ವಾತಂತ್ರ್ಯ ಮತ್ತು ನಾಗರಿಕರ ಸಮಾನತೆಗಳನ್ನು ಸ್ಥಾಪಿಸುವುದೇ ಕಮ್ಯುನಿಸ್ಟರ ನಿರ್ದಿಷ್ಟ ಪಾತ್ರವಾಗಿತ್ತು.

**ಹಿನ್ನೆಲೆ**

ಬ್ರಿಟೀಷ್ ಆಡಳಿತದ ವಿವಿಧ ಆಯಾಮಗಳ ಇತಿಹಾಸ ಮತ್ತು ಇದು ನಮ್ಮ ಜನರ ಮೇಲೆ ನಡೆಸುತ್ತಿದ್ದ ಕ್ರೂರ ಶೋಷಣೆಯು ನಮ್ಮ ಸ್ವಾತಂತ್ರ್ಯ ಹೋರಾಟದ ಚಾಲಕಶಕ್ತಿಯಾಗಿತ್ತು. ಭಾರತದ ಅಗಾಧ ಮತ್ತು ವೈವಿಧ್ಯಮಯ ಪರಿಸ್ಥಿತಿಗಳಲ್ಲಿ ನಡುವೆ ಜನತೆ ನಡೆಸಿದ ಎಲ್ಲ ಅಸಂಖ್ಯ ಹೋರಾಟಗಳ ಸಂಗಮವಾಗಿ, ಸ್ವಾತಂತ್ರ್ಯ ಚಳುವಳಿಯು ಒಂದು ರಾಷ್ಟ್ರ ಮಟ್ಟದ ಅಸ್ತಿತ್ವವಾಗಿ ರೂಪುಗೊಂಡಿತು. ಬ್ರಿಟೀಷ್ ಸಾಮ್ರಾಜ್ಯವು ತನ್ನನ್ನೂ ಉಳಿಸಿಕೊಳ್ಳಲು ನಡೆಸುತ್ತಿದ್ದ ಸುಲಿಗೆ ಮತ್ತು ಲೂಟಿಯೇ ಈ ಪ್ರತಿಯೊಂದು ಹೋರಾಟಕ್ಕೂ ತಕ್ಷಣದ ಕಾರಣವಾಗಿತ್ತು ಎಂದು ಪುನರುಚ್ಚರಿಸುವುದು ಸ್ವಯಂ–ಸಿದ್ಧವಾದ ಮಾತಾಗುತ್ತದೆ.

ಬ್ರಿಟಿಷ್ ಭಾರತೀಯ ಸೇನೆಯಲ್ಲಿದ್ದ ಭಾರತೀಯ ಸೈನಿಕರ ಬಂಡಾಯು ಈ ವಸಾಹತುಶಾಹಿ ಶೋಷಣೆಯ ವಿರುದ್ಧ ನಡೆದ ಮೊದಲ ಸಂಘಟಿತ ಅಭಿವ್ಯಕ್ತಿಯಾಗಿತ್ತು. ಈ ಬಂಡಾಯ ಪ್ರಾರಂಭವಾದ ಮೇ 10, 1857 ದಿನದಿಂದ ದೆಹಲಿಯನ್ನು ಸೆಪ್ಟೆಂಬರ್ 20, 1857 ರಂದು ಮತ್ತೆ ವಶಪಡಿಸಿಕೊಳ್ಳಲು ಬ್ರಿಟಿಷ್ ಆಡಳಿತಕ್ಕೆ 4 ತಿಂಗಳುಗಳು ಬೇಕಾಯಿತು. ಆದರೆ ಈ ಬಂಡುಕೋರರನ್ನು ಸಂಪೂರ್ಣವಾಗಿ ನಿಯಂತ್ರಿಸಲು ಮತ್ತು ಬಂಡಾಯದಿಂದ ವಿಮೋಚನೆಗೊಂಡಿದ್ದ ಬಹುತೇಕ ಉತ್ತರ ಭಾರತವನ್ನು ಮತ್ತೆ ವಶಪಡಿಸಿಕೊಳ್ಳಲು ಬ್ರಿಟಿಷರಿಗೆ ಸುಮಾರು ಎರಡು ವರ್ಷಗಳೇ ಬೇಕಾಯಿತು.

ಈ ಬಂಡಾಯದ ಪ್ರಾಮುಖ್ಯತೆಯನ್ನು ನಗಣ್ಯಗೊಳಿಸಲು ಬಹುತೇಕ ವಸಾಹತುಶಾಹಿ ಇತಿಹಾಸ ಬರವಣಿಗೆಗಳು ಪ್ರಯತ್ನಿಸಿದ್ದವು. ಆದರೆ ಕೆಲವು ಬರವಣಿಗೆಗಳು ಅಂದಿದ್ದ ಸಂದರ್ಭಗಳ ಮೇಲೆ ಬೆಳಕು ಚೆಲ್ಲಿದ್ದವು. ಅಧಿಕಾರ/ಹಿಡಿತ ಕಳೆದುಕೊಂಡಿದ್ದ ಭಾರತದ ರಾಜ ಸಂಸ್ಥಾನಗಳು, ಕುಲೀನರು ಮತ್ತು ಜಮೀನ್ದಾರರ ಅಸಮಾಧಾನವು ಈ ಬಂಡಾಯಕ್ಕೆ ತಕ್ಷಣದ ಕಿಡಿಯಾಗಿತ್ತು. ಬ್ರಿಟಿಷ್ ಆಡಳಿತದಲ್ಲಿ ವಿನಾಶವನ್ನು ಎದುರಿಸುತ್ತಿದ್ದ ಭಾರತೀಯ ಸೈನಿಕರು ಮತ್ತು ಸಾಮಾನ್ಯ ದುಡಿಯುವ ಜನರ ವಿಶಾಲ ವಿಭಾಗಗಳು ಸಹ ಈ ಬಂಡಾಯದಲ್ಲಿ ಒಂದಾಗಿ ಎದ್ದು ನಿಂತವು ಎನ್ನುವುದು ಸ್ಪಷ್ಟ.


ಜನ ಸಮೂಹಗಳ ಪಾತ್ರವನ್ನು ಕಡೆಗಣಿಸಿ ಈ ರಾಷ್ಟ್ರೀಯ ಬಂಡಾಯವನ್ನು "ಸಿಪಾಯಿ ದಂಗೆ" ಎಂದು ಬ್ರಿಟಿಷ್ ಇತಿಹಾಸಕಾರರು ಕರೆದಿದ್ದನ್ನು ಪ್ರಶ್ನಿಸಿದ ಕಾರ್ಲ್ ಮಾರ್ಕ್ಸ್, ಈ ಬಂಡಾಯವನ್ನು ಹಿಂದುಗಳು ಮತ್ತು ಮುಸ್ಲಿಮರ ರಾಷ್ಟ್ರೀಯ ಬಂಡಾಯ ಎಂದು ಬಣ್ಣಿಸಿದರು ಮತ್ತು ಮುಂದುವರೆದು "ನೈಜವಾಗಿ ಈ ಮಿಲಿಟರಿ ದಂಗೆಯು ಒಂದು ರಾಷ್ಟ್ರೀಯ ಬಂಡಾಯವಾಗಿತ್ತು" ಎಂದರು.


ಈ ಬಂಡಾಯದ ಬೃಹತ್ ಪರಿಣಾಮಗಳ ಜೊತೆಯಲ್ಲಿ, ಇವನ್ನು ಮುಂದೆ ಕೊಂಡೊಯ್ಯಲಾಗದಿರುವ ವಿಫಲತೆಯ ಪಾಠವೂ ಅಷ್ಟೇ ಗಹನವಾಗಿತ್ತು. ಅನಿಶ್ಚತತೆಯನ್ನು ಎದುರಿಸುತ್ತಿದ್ದ ಹಲವು ಭಾರತೀಯ ಸಂಸ್ಥಾನಗಳ ಆಳರಸರು ಮತ್ತು ದೊಡ್ಡ ಜಮೀನ್ದಾರುಗಳು ಬ್ರಿಟೀಷರ ಪರವಾಗಿ ಸಕ್ರಿಯವಾಗಿ ನಿಂತರು. ಇದನ್ನು ಗಮನಿಸಿ ಗವರ್ನರ್ ಜನರಲ್ ಲಾರ್ಡ್ ಕ್ಯಾನ್ನಿಂಗ್, "ಈ ರಾಜರುಗಳು ನಮ್ಮನ್ನು ಒಂದು ಬೃಹತ್ ಅಲೆಯ ಮೂಲಕ ಕೊಚ್ಚಿ ಕೊಂಡು ಹೋಗಲಿದ್ದ ಪ್ರವಾಹಕ್ಕೆ ತಡೆಗೋಡೆಗಳಾಗಿ ಅಡ್ಡ ನಿಂತರು" ಎಂದು ನೇರವಾಗಿ ಹೇಳಿದ್ದರು.


ಭಾರತೀಯ ಸ್ವಾತಂತ್ರ್ಯ ಹೋರಾಟವು ಒಂದು ಪಾಳೆಯಗಾರಿ–ವಿರೋಧಿ ಹೋರಾಟವಾಗಲೇಬೇಕು ಮತ್ತು ಅಪಾರ ಪ್ರಮಾಣದ ಕೃಷಿ ಬಿಕ್ಕಟ್ಟಿನ ವಿರುದ್ಧದ ರೈತಾಪಿ ಜನರ ಪ್ರತಿರೋಧವನ್ನು ಕ್ರೋಢೀಕರಿಸದೆ, ಸ್ವಾತಂತ್ರ್ಯ ಚಳುವಳಿಯ ಸಫಲವಾಗುವುದಿಲ್ಲ ಎಂಬ ಸ್ಪಷ್ಟ ಪಾಠವನ್ನು ಬ್ರಿಟಿಷರ ಪ್ರತಿಕ್ರಿಯೆ ಒತ್ತಿ ಹೇಳಿತ್ತು.

ಬ್ರಿಟೀಷರು ಸಹ 1857 ರ ಹೋರಾಟದ ತಮ್ಮ ಪಾಠವನ್ನು ಅರಿತರು. ಹಿಂದುಗಳು, ಮುಸ್ಲಿಮರು ಮತ್ತು ಜಮೀನ್ದಾರಿ ರಾಜರುಗಳು ಒಂದೇ ಸಮಾನ ಉದ್ದೇಶಕ್ಕಾಗಿ ಒಂದುಗೂಡಲು ಅನುವು ಮಾಡಿದಲ್ಲಿ ಭಾರತದಲ್ಲಿ ಬ್ರಿಟಿಷರ್ ಆಡಳಿತವನ್ನು ಹೆಚ್ಚು ಕಾಲ ಮುಂದುವರೆಸಲು ಸಾಧ್ಯವಿಲ್ಲ. "ಗೋವನ್ನು ಸಾಯಿಸುವವರು ಮತ್ತು ಗೋವನ್ನು ಪೂಜಿಸುವವರು, ಹಂದಿಯನ್ನು ದ್ವೇಷಿಸುವವರು ಮತ್ತು ಹಂದಿಯನ್ನು ತಿನ್ನುವವರು ಒಟ್ಟಾಗಿ ಬಂಡಾಯವೆದ್ದಿದ್ದಾರೆ" ಎಂದು ಬ್ರಿಟಿಷ್ ಬರಹಗಾರ ಥಾಮಸ್ ಲೋವೆ ನುಡಿದಿದ್ದರು. ಇದರ ಪುನರಾವರ್ತನೆ ತಡೆಯಲೇಬೇಕು! ಸಹಜವಾಗಿ ಇದು 'ಒಡೆದು ಆಳುವ' ನೀತಿಯ ಆಕ್ರಮಣಕಾರಿ ಬಳಕೆಯತ್ತ ಅವರನ್ನು ಒಯ್ದಿತು.

ಕಮ್ಯುನಿಸ್ಟರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ಪಾತ್ರವನ್ನು ರೂಪಿಸಿಕೊಳ್ಳಲು ಈ ಪಾಠಗಳನ್ನು ಮನನ ಮಾಡಿಕೊಂಡರು.







**ಭಾರತೀಯ ಕಮ್ಯುನಿಸ್ಟ್ ಪಕ್ಷದ ಆರಂಭಿಕ ವರ್ಷಗಳು**

ಬ್ರಿಟೀಷರ ವಿರುದ್ಧ ಭಾರತದ ಜನತೆ ನಡೆಸಿದ ಹಲವು ಮೂಲಗಳ ಸ್ಥಳಿಯ ಹೋರಾಟಗಳ ತೊರೆಗಳನ್ನು ಒಳಗೊಳ್ಳಲು ಕಮ್ಯುನಿಸ್ಟ್ ಪಕ್ಷವು ಬದ್ಧವಾಗಿದ್ದರೂ, ಮಹಾನ್ ಅಕ್ಟೋಬರ್ ಕ್ರಾಂತಿಯ ಯಶಸ್ಸು ಪಕ್ಷಕ್ಕೆ ತಕ್ಷಣದ ಸ್ಫೂರ್ತಿಯಾಗಿದ್ದು ಸ್ಪಷ್ಟ. ತನ್ನ ವಸಾಹತುಶಾಹಿ ಪ್ರಬುಧಗಳಲ್ಲಿ ಲೆನಿನ್ ಮಾಡಿದ ಮನವಿ ಕೇವಲ ಭಾರತದಲ್ಲಿ ಮಾತ್ರವಲ್ಲ, ಬೇರೆಡೆಯಲ್ಲಿಯೂ ಆರಂಭದಲ್ಲಿ ಕ್ರಾಂತಿಕಾರಿಗಳ ಕೆಲವು ಸಣ್ಣ ಗುಂಪುಗಳು ಕಮ್ಯೂನಿಸ್ಟ್ ಪಕ್ಷದ ರಚನೆಗೆ ಎಡೆ ಮಾಡಿತು. ಯುರೋಪ್‌ನ ಹಲವು ಭಾಗಗಳಲ್ಲಿ ಮಾರ್ಕ್ಸ್‌ವಾದವನ್ನು ಅಪ್ಪಿಕೊಂಡ ರಾಜಕೀಯ ವಲಸೆಗಾರರ ಪಾತ್ರ ಇದರಲ್ಲಿ ಸಮಾನ ಅಂಶವಾಗಿದೆ. "ಭಾರತೀಯ ಕಮ್ಯೂನಿಸ್ಟ್ ಪಕ್ಷವು ವಿದೇಶದಲ್ಲಿ ಸ್ಥಾಪಿತವಾದ ಪಕ್ಷ ಸಂಘಟನೆಯ ವಿಸ್ತೃತ ಭಾಗ" ಎಂದು ಮುಜ್ಜಫರ್ ಅಹ್ಮದ್ ಗಮನಿಸುತ್ತಾರೆ. 1922–23 ರಲ್ಲಿ ಪೇಶಾವರ್ ಕಮ್ಯುನಿಸ್ಟ್ ಪಿತೂರಿ ಪ್ರಕರಣದಲ್ಲಿ ಬ್ರಿಟೀಷರು ಭಾರತೀಯ ಕಮ್ಯೂನಿಸ್ಟರನ್ನು ವಿಚಾರಣೆಗೆ ಒಳಪಡಿಸುವುದರಲ್ಲಿ ಇದು ಸ್ಪಷ್ಟವಾಗಿ ಪ್ರತಿಫಲಿತವಾಗುತ್ತದೆ. 10 ಜನ ಆರೋಪಿಗಳಲ್ಲಿ 9 ಜನ ಪಕ್ಷದ ರಾಜಕೀಯ ವಲಸಿಗರ ಘಟಕದ ಸದಸ್ಯರಾಗಿದ್ದರು. ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯಿಂದಾಗಿ ಬ್ರಿಟೀಷರು ಗಾಬರಿಗೊಂಡಿದ್ದರು ಎಂಬುದು ಆಗ ತಾನೇ ಜನ್ಮ ತಾಳಿದ್ದ ರಾಜಕೀಯ ಪಕ್ಷದ ಮೇಲೆ ಹಾಕಿದ ಹಲವು ಪಿತೂರಿ ಪ್ರಕರಣಗಳಲ್ಲಿ ತಿಳಿಯುತ್ತದೆ: ಉದಾ: ಪೇಶಾವರ್ ಪಿತೂರಿ ಪ್ರಕರಣ (1922–23) ಕಾನ್ಪುರ ಬೋಲ್ಷೆವಿಕ್ ಪಿತೂರಿ ಪ್ರಕರಣ (1924) ಮತ್ತು 31 ಪ್ರಮುಖ ಭಾರತೀಯ ಕಮ್ಯುನಿಸ್ಟ್ ಪಕ್ಷದ ನಾಯಕರುಗಳನ್ನು ಶಿಕ್ಷೆಗೆ ಒಳಪಡಿಸಲಾಗಿದ್ದ ಕುಖ್ಯಾತ ಮೀರತ್ ಪಿತೂರಿ ಪ್ರಕರಣ (1929).

ಆದರೆ, ಮುಂಬರುವ ದಮನದ ಸಾಧ್ಯತೆಗೆ ಜಗ್ಗದ ಹಿಂಜರಿಯದ ನವಜಾತ ಪಕ್ಷವು 1921 ರ ಕಾಂಗ್ರೆಸ್‌ನ ಅಹಮದಾಬಾದ್ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯವನ್ನು ಮಂಡಿಸಿತು. ಸ್ವಾತಂತ್ರ್ಯ ಚಳುವಳಿಯ ಪ್ರಮುಖ ಆಶೋತ್ತರವನ್ನು ಬಿಂಬಿಸುವ ಈ ನಿರ್ಣಯವನ್ನು ಮೌಲಾನಾ ಹಸ್ರತ್ ಮೊಹಾನ ಮತ್ತು ಸ್ವಾಮಿ ಕುಮಾರಾನಂದ್ ಪಕ್ಷದ ಪರವಾಗಿ ಮಂಡಿಸಿದರು. ಆದರೆ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯವನ್ನು ಆ ನಂತರ ಕಾಂಗ್ರೆಸ್ 1929 ರಲ್ಲಿ ಅಂಗೀಕರಿಸಿತು.

**ಜನರೊಡನೆ ಸಂಪರ್ಕ, ಕೃಷಿ ಮತ್ತು ದುಡಿಯುವ ವರ್ಗದ ಹೋರಾಟಗಳು**

ಕಾಂಗ್ರೆಸ್‌ನ ಅಹಮದಾಬಾದ್ ಅಧಿವೇಶನದಲ್ಲಿ ಕಮ್ಯುನಿಸ್ಟರ ನಿರ್ಣಯದ ಮೊದಲು ಎಂ.ಎನ್. ರಾಯ್ ಮತ್ತು ಅಬನಿ ಮುಖರ್ಜಿ ಒಂದು ಮುಕ್ತ ಪತ್ರ ಬರೆದು, ಕಾಂಗ್ರೆಸನ್ನು ಕೆಳಕಂಡಂತೆ ಒತ್ತಾಯಿಸಿದರು: "(ಕಾಂಗ್ರೆಸ್) ಕಾರ್ಮಿಕ ಸಂಘಟನೆಗಳ ಬೇಡಿಕೆಗಳನ್ನು ರೈತ ಸಂಘಟನೆಗಳ ಕಾರ್ಯಕ್ರಮವನ್ನು ತನ್ನದೇ ಬೇಡಿಕೆಯಾಗಿ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು. ಆಗ ಕಾಂಗ್ರೆಸನ್ನು ಯಾವ ಶಕ್ತಿಯೂ ತಡೆಯದಿರುವ ಸಮಯ ಬರುತ್ತದೆ; ತಮ್ಮ ಭೌತಿಕ ಹಿತ್ತಾಸಕಿಗಳಿಗಾಗಿ ಪ್ರಜ್ಞಾಪೂರ್ವಕವಾಗಿ ಹೋರಾಡುತ್ತಿರುವ ಇಡೀ ಜನತೆಯ ತಡೆಯಲಾಗದ ಶಕ್ತಿ ಕಾಂಗ್ರೆಸ್‌ನ ಹಿಂದಿರುತ್ತದೆ."

ಕಮ್ಯುನಿಸ್ಟ್ ಪಕ್ಷವು ಬ್ರಿಟಿಷ್ ಆಡಳಿತದಿಂದ ವಿಮೋಚನೆಗಾಗಿ ನಡೆಯುತ್ತಿದ್ದ ಒಟ್ಟಾರೆ ರಾಷ್ಟ್ರೀಯ ಚಳುವಳಿಯ ಭಾಗವಾಗುತ್ತಲೇ, ಮೇಲ್ಕಾಣಿಸಿದ ಕಣ್ಣೋಟದೊಂದಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿತ್ತು. ಕಾರ್ಮಿಕರು, ರೈತರು ಮತ್ತು ಸಾಮಾಜಿಕ ಬೇಧಭಾವ ಮತ್ತು ಜಾತಿ ಶ್ರೇಣೀಕರಣದಿಂದ ದಾಳಿಗೊಳಗಾಗಿದ್ದ ವಿಶಾಲವಾದ ಜನ ವಿಭಾಗಗಳನ್ನು ಅಣಿ ನೆರೆಸುವ ಉದ್ದೇಶದಿಂದ ವರ್ಗ ಸಂಘರ್ಷ ಮತ್ತು ಸಾಮಾಜಿಕ ವಿಷಯಗಳ ಮೇಲೆ ಹೋರಾಟಕ್ಕೆ ಒತ್ತು ನೀಡಲಾಗಿತ್ತು. ಕೇವಲ ಸ್ವಾತಂತ್ರ್ಯ ಮಾತ್ರವಲ್ಲದೆ, ಜನರ ಭೌತಿಕ ಸ್ಥಿತಿಯಲ್ಲಿ ಬದಲಾವಣೆ ತರುವುದು ಮತ್ತು ಅಂತಿಮವಾಗಿ ಸಮಾಜವಾದವನ್ನು ಸ್ಥಾಪಿಸುವುದು, ಈ ಹೋರಾಟದ ಉದ್ದೇಶವಾಗಿತ್ತು ಎನ್ನುವುದು ಸ್ಪಷ್ಟ. ಇದು ರಾಷ್ಟ್ರೀಯ ಚಳುವಳಿಯಲ್ಲಿ ಒಂದು ಹೊಸ ಮಾದರಿಯಾಗಿತ್ತು ಎಂಬುದು ಪ್ರಶ್ನಾತೀತವಾಗಿದೆ.

ಆರಂಭಿಕ ದಿನಗಳಿಂದಲೇ ಕಮ್ಯುನಿಸ್ಟ್ ಪಕ್ಷವು ಹಿಂದು–ಮುಸ್ಲಿಮ್ ಐಕ್ಯತೆಗಾಗಿ ಮಧ್ಯ ಪ್ರವೇಶಿಸುತ್ತಿತ್ತು ಮತ್ತು ಬ್ರಿಟೀಷರು ಹುಟ್ಟು ಹಾಕಿ ಪೋಷಿಸುತ್ತಿದ್ದ ಹಾಗೂ ಹಿಂದೂ ಮಹಾಸಭಾ ಮತ್ತು ಮುಸ್ಲಿಂ ಲೀಗ್ ಪಾಲಿಸುತ್ತಿದ್ದ ಕೋಮು ವಿಭಜನೆಯ ಕ್ರಮಗಳನ್ನು ವಿರೋಧಿಸುತ್ತಿತ್ತು.

ಕಮ್ಯುನಿಸ್ಟ್ ಪಕ್ಷವು ಜಾತಿ ದಮನದಂತಹ ಸಾಮಾಜಿಕ ವಿಷಯಗಳಲ್ಲೂ ಮಧ್ಯ ಪ್ರವೇಶಿಸಿತ್ತು. ಆಗ ಈ ವಿಷಯಗಳನ್ನು ಪಾಳೇಗಾರಿ ವಿರೋಧಿ ಮತ್ತು ವಸಾಹತುಶಾಹಿ ವಿರೋಧಿ ಅಜೆಂಡಾಗಳ ಜೊತೆ ಸೇರಿಸುವ ಪ್ರಯತ್ನಿಸಲಾಗುತ್ತಿತ್ತು. ಪಕ್ಷದ ಗುರಿಯು ಜಾತಿ ವ್ಯವಸ್ಥೆಯ ಸುಧಾರಣೆಯಾಗಿರದೆ ಜಾತಿ ನಿರ್ಮೂಲನೆಯಾಗಿತ್ತು.

ಮೊದಲಿನಲ್ಲಿ ಕಾಂಗ್ರೆಸ್ ಮೂಲಕ ಅಣಿನೆರೆಸಲ್ಪಟ್ಟಿದ್ದ ರೈತಾಪಿ ಜನ ಪಾಳೇಗಾರಿಗಳನ್ನು ವಿರೋಧಿಸದ ಕಾಂಗ್ರೆಸ್‌ನ ನಿಲುವಿನಿಂದ ಭ್ರಮನಿರಸನಗೊಂಡರು. ತಮ್ಮದೇ ಆದ ವರ್ಗ ಬೇಡಿಕೆಗಳ ಆಧಾರದಲ್ಲಿ ತಾವು ಸಂಘಟಿತರಾಗಬೇಕು ಎಂಬ ಅವರ ತಿಳುವಳಿಕೆ ಹೆಚ್ಚಾಗತೊಡಗಿತು. ಯುದ್ಧದ ನಂತರದ ಹೋರಾಟಗಳ ಉಬ್ಬರದ ಭಾಗವಾಗಿ ಸ್ಥಳೀಯ ಮತ್ತು ಪ್ರಾದೇಶಿಕ ಹೋರಾಟಗಳು ಸ್ಫೋಟಗೊಂಡು, ಹೆಚ್ಚಿನ ರಭಸ ಪಡೆದುಕೊಂಡವು. ಬಂಗಾಳದ ತೆಭಾಗಾ ಹೋರಾಟ, ಕೇರಳದ ವಿವಿಧ ಭಾಗಗಳಲ್ಲಿ ನಡೆದ ಅಸಂಖ್ಯ ರೈತ ಹೋರಾಟಗಳು, ಮಹಾರಾಷ್ಟ್ರದ

ಪುಟ 6ಕ್ಕೆ

# ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರ

ಪುಟ 5 ರಿಂದ

ವಾರಲಿ ಬುಡಕಟ್ಟು ಹೋರಾಟಗಳು, ಬಿಹಾರದ ಬಕ್ಷತ್ ಹೋರಾಟ, ಅಸ್ಸಾಂ ನ ಸುರ್ಮಾ ಕಣಿವೆ ಹೋರಾಟ, ಇತ್ಯಾದಿಗಳಲ್ಲಿ ರೈತರ ಬೃಹತ್ ಅಣಿನೆರೆಸುವಿಕೆಯಾಗಿತ್ತು. ಇವೆಲ್ಲದರಲ್ಲಿ ಅತ್ಯಂತ ದೊಡ್ಡ ಹೋರಾಟವಾಗಿದ್ದ ನಿಜಾಂಶಾಹಿ ವಿರುದ್ಧದ ಹೋರಾಟವು ತೆಲಂಗಾಣದಲ್ಲಿ ಸಶಸ್ತ್ರ ಹೋರಾಟದ ಸ್ವರೂಪ ಪಡೆಯಿತು.

ಅಂತೆಯೇ ಭಾರತದ ಪ್ರಮುಖ ನಗರಗಳಾದ ಕಲ್ಕತ್ತಾ, ಕಾನ್ಪುರ್, ಬಾಂಬೆ, ಮದ್ರಾಸ್‌ಗಳ ಪ್ರಮುಖ ಕೈಗಾರಿಕಾ ವಲಯಗಳಲ್ಲಿ ಮತ್ತು ರೈಲ್ವೆ, ಕಲ್ಲಿದ್ದಲು, ಸೆಣಬು, ಹತ್ತಿ ಟೀ ತೋಟಗಳು ಮುಂತಾದೆಡೆ ಹಲವು ಹೋರಾಟಗಳು ನಡೆದವು. ಇವುಗಳಲ್ಲಿ ಅತ್ಯಂತ ಗಮನಾರ್ಹವಾದುದು ಮತ್ತು ರಾಜಕೀಯವಾಗಿ ಮಹತ್ವದ್ದು ಬ್ರಿಟಿಷ್ ನೌಕಾಸೈನಿಕರ (ರಿನ್) ದಂಗೆಗೆ ಬೆಂಬಲ ಸೂಚಿಸಿ ಬಾಂಬೆ ಕಾರ್ಮಿಕರು ಮುಕ್ತವಾಗಿ ನಡೆಸಿದ ಹೋರಾಟ.

**ವಿವಿಧ ಎಳೆಗಳು: ಗದರ್ ಪಕ್ಷ,**
**ಕ್ರಾಂತಿಕಾರಿ ರಾಷ್ಟ್ರೀಯವಾದಿಗಳು ಮತ್ತು**
**ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷ**

ಅಕ್ಟೋಬರ್ ಕ್ರಾಂತಿಯ ಮಹತ್ವದ ಪರಿಣಾಮ ಮತ್ತು ಸೋವಿಯತ್ ಯೂನಿಯನ್ ನ ಸ್ಥಾಪನೆ ದುಡಿಯುವ ವರ್ಗದಲ್ಲಿ ಆಶಾಭಾವನೆ ಮತ್ತು ಭರವಸೆಯನ್ನು ಮೂಡಿಸಿತು. ಹಲವು ಸಮರಧೀರ ರಾಜೀರಹಿತ ವಸಾಹತುಶಾಹಿ ವಿರೋಧಿ ಚಳುವಳಿಗಳು ಮತ್ತು ರಾಜಕೀಯ ಕೂಟಗಳಿಗೂ ಇದು ಭರವಸೆ ನೀಡಿತು. ಅದರಲ್ಲಿ ಕೆನಡಾ ಮತ್ತು ಯು.ಎಸ್. ನಲ್ಲಿದ್ದ ವಲಸಿಗರ ಗದರ್ ಚಳುವಳಿಯು ಒಂದು. ಬಹುತೇಕ ಪಂಜಾಬ್‌ನಿಂದ ಬಂದಿದ್ದ ಈ ವಲಸಿಗರ ಹೋರಾಟಗಳು ಗದರ್ ಪಕ್ಷದ ಸ್ಥಾಪನೆಗೆ ಎಡೆ ಮಾಡಿತು. ಭಾರತಕ್ಕೆ ಮರಳಿ ಬಂದ ಹಲವು ಗದರ್ ಚಳುವಳಿಗಾರರನ್ನು ಕಮ್ಯುನಿಸ್ಟ್ ಪಕ್ಷದತ್ತ ಸೆಳೆಯಿತು ಮತ್ತು ಬಹುಪಾಲು ಕಿಸಾನ್ ಸಭಾ ಮೂಲಕ ಚಟುವಟಿಕೆಯಲ್ಲಿ ಪಾಲ್ಗೊಂಡರು.

ಇಂತಹುದೇ ಪ್ರಕ್ರಿಯೆಯು ಬ್ರಿಟಿಷ್ ಆಡಳಿತದ ವಿರುದ್ಧ ರಹಸ್ಯ ಗುಂಪುಗಳ ಮೂಲಕ ವ್ಯಕ್ತಿಗತ ಸಶಸ್ತ್ರ ಹೋರಾಟ ನಡೆಸುತ್ತಿದ್ದ ಕ್ರಾಂತಿಕಾರಿ ರಾಷ್ಟ್ರೀಯವಾದಿಗಳನ್ನು ಸೆಳೆಯಿತು. ನಂತರದಲ್ಲಿ ಈ ಬಹುತೇಕ ಕ್ರಾಂತಿಕಾರಿಗಳು ಕಮ್ಯುನಿಸ್ಟ್ ಪಕ್ಷದ ರಾಜೀ ರಹಿತ ವಸಾಹತುಶಾಹಿ ವಿರೋಧಿ ನಿಲುವಿಗೆ ಸೆಳೆಯಲ್ಪಟ್ಟರು. ಭಗತ್‌ಸಿಂಗ್ ಮತ್ತಿತರರ ನೇತೃತ್ವದ ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಆರ್ಮಿಯಲ್ಲಿ ವ್ಯಕ್ತವಾದ ವಾದರಿಯಲ್ಲಿ ಈ ಚಳುವಳಿಗಳಲ್ಲಿ ಹೋರಾಟದ ಹಾದಿಯ ಕುರಿತು ಒಂದು ಸೈದ್ಧಾಂತಿಕ ಘರ್ಷಣೆಯೂ ನಡೆಯಿತು. ಅಂತೆಯೇ ಬಂಗಾಳ, ಪಂಜಾಬ್ ಮತ್ತು ಉತ್ತರ ಭಾರತದ ಕೆಲ ಭಾಗಗಳ ಗುಂಪುಗಳೂ ಸಹ ಕಮ್ಯುನಿಸ್ಟ್ ಪಕ್ಷದತ್ತ ಸೆಳೆಯಲ್ಪಟ್ಟವು.

ಇನ್ನೊಂದು ಪ್ರಮುಖ ಬೆಳವಣಿಗೆಯೆಂದರೆ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದ ಸ್ಥಾಪನೆ. ರಾಷ್ಟ್ರೀಯ ಚಳುವಳಿಯಲ್ಲಿ ಸ್ಥಾಪಿತವಾದ ಒಂದು ಪ್ರಮುಖ ರಾಜಕೀಯ ಪಕ್ಷವಾಗಿ ಕಾಂಗ್ರೆಸ್ ನಾಯಕತ್ವದ ರಾಜಿ ನಡವಳಿಕೆಯಿಂದ ಕಾಂಗ್ರೆಸಿಗರ ಒಂದು ವಿಭಾಗ ಭ್ರಮ ನಿರಸನಗೊಂಡು ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷವನ್ನು ಸ್ಥಾಪಿಸಿದರು. ಇದರ ಜೊತೆಯಲ್ಲಿಯೇ, ಕಾರ್ಮಿಕ ವರ್ಗದ ನೇತೃತ್ವದಲ್ಲಿ ದುಡಿಯುವ ವರ್ಗವನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ಅಣಿನೆರೆಸುವ ಮಹತ್ವವನ್ನು ಅರಿತ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷವು ಕಮ್ಯುನಿಸ್ಟರ ಜತೆ ಸಂಪರ್ಕ ಸಾಧಿಸಿತು. ಆದರೆ ಈ ಎರಡು ಧಾರೆಗಳ ನಡೆಗಳ ನಡುವೆ ಒಂದು ಮೂಲ ವ್ಯತ್ಯಾಸವಿತ್ತು. ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷವು ಕಾಂಗ್ರೆಸ್ ನ ಒಳಗಿದ್ದುಕೊಂಡೇ ಅದನ್ನು ಒಂದು ನಿಜವಾಗಿ ವಸಾಹತುಶಾಹಿ ವಿರೋಧಿ ಚಳುವಳಿಯನ್ನಾಗಿ ಮಾರ್ಪಡಿಸುವ ಗುರಿ ಹೊಂದಿತ್ತು. ಆದರೆ ಕಮ್ಯುನಿಸ್ಟ್ ಪಕ್ಷವು ಕಾರ್ಮಿಕ ವರ್ಗದ ನೇತೃತ್ವದಲ್ಲಿ ದುಡಿತಯುವ ಜನತೆಯನ್ನು ಮುನ್ನಡೆಸಿ, ಅದನ್ನು ಕಾಂಗ್ರೆಸ್‌ನೊಡನೆ ಯಾವುದೇ ಮೂಲಭೂತ ತಿಕ್ಕಾಟವಿಲ್ಲದ ಒಂದು ಸ್ವತಂತ್ರ ರಾಜಕೀಯ ಶಕ್ತಿಯಾಗಿ ಬೆಳೆಸುವ ಉದ್ದೇಶ ಹೊಂದಿತ್ತು. ಕಮ್ಯುನಿಸ್ಟರು ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದೊಳಗೆ ಕೆಲಸ ಮಾಡುವ ಈ ಮಾದರಿ ಮುಂದುವರಿಯಿತು. ಆದರೆ ಅಂತಿಮವಾಗಿ ಪ್ರಮುಖ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದ ಪ್ರಮುಖ ನಾಯಕತ್ವ ಸಹ ಕಮ್ಯುನಿಸ್ಟ್ ಪಕ್ಷದ ಭಾಗವಾಗುವುದರೊಂದಿಗೆ ಇದು ವಿಭಜನೆಗೆ ಎಡೆ ಮಾಡಿತು.

ಕಮ್ಯುನಿಸ್ಟ್ ಪಕ್ಷವು ತನ್ನ ವಿಶಿಷ್ಟ ಗುರಿಯ ಮಹತ್ವವನ್ನು ಗುರುತಿಸಿಕೊಂಡಿದ್ದಷ್ಟೇ ಅಲ್ಲದೆ ಇನ್ನಷ್ಟು ವಿಸ್ತಾರವಾದ ದೇಶಪ್ರೇಮಿ ಜನ ವಿಭಾಗಗಳನ್ನು ಒಳಗೊಳ್ಳಲು ಅನುವಾಗುವಂತೆ ಇತರ ಸಮರಧೀರ ವಸಾಹತುಶಾಹಿ ವಿರೋಧಿ ರಾಜಕೀಯ ರಚನೆಗಳ ಜೊತೆಯಲ್ಲಿಯೂ ಕೆಲಸ ಮಾಡುತ್ತಿತ್ತು.

**ವಿಶಾಲ ತಳಹದಿಯ ಸಾಮೂಹಿಕ ಸಂಘಟನೆಗಳು**

1920 ರಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಜೊತೆಯಲ್ಲಿಯೇ ಕಾರ್ಮಿಕರ ಸಂಘಟನೆಯಾದ ಎಐಟಿಯುಸಿ ಸಹ ಅದೇ ವರ್ಷದಲ್ಲಿ ಸ್ಥಾಪಿತವಾಯಿತು. ಆರಂಭಿಕ ಹಂತಗಳಲ್ಲಿ ಕೆಲವು ಸುಧಾರಣಾವಾದಿ ಪ್ರವೃತ್ತಿಗಳು ಕಂಡು ಬಂದರೂ ಕಾರ್ಮಿಕ ಸಂಘಟನೆಯಲ್ಲಿ ಕಮ್ಯುನಿಸ್ಟರ ಭಾಗವಹಿಸುವಿಕೆಯಿಂದಾಗಿ ಒಂದು ವಿಶಾಲ ತಳಹದಿಯ ಕಾರ್ಮಿಕ ಸಂಘಟನಾ ವೇದಿಕೆ ರಚಿಸಲ್ಪಟ್ಟಿತು.

1930 ರ ದಶಕದಲ್ಲಿ ಬೆಳೆದು ಬರುತ್ತಿದ್ದ ಸಾಮೂಹಿಕ ಹೋರಾಟಗಳಿಂದಾಗಿ ವಿಶಾಲ ತಳಹದಿಯ ಒಂದು ಅಖಿಲ ಭಾರತ ಸಂಘಟನೆಯ ಅಗತ್ಯತೆ ಬಂದಿತು ಮತ್ತು ಅಖಿಲ ಭಾರತ ಕಿಸಾನ್ ಸಭಾ, ಅಖಿಲ ಭಾರತ ವಿದ್ಯಾರ್ಥಿ ಫೆಡರೇಶನ್ ಮತ್ತು ಪ್ರಗತಿಪರ ಬರಹಗಾರರ ಸಂಘಗಳು 1936 ರಲ್ಲಿ ಸ್ಥಾಪಿತಗೊಂಡವು. ಕೆಲವೇ ಸಮಯದಲ್ಲಿ ಈ ವೇದಿಕೆಗಳು ಮತ್ತು ಸಂಘಟನೆಗಳು ಆಯಾ ಜನವಿಭಾಗಗಳವರನ್ನು ಒಗ್ಗೂಡಿಸುವ ಒಂದು ಬಲಿಷ್ಠ ವಾಹನಗಳಾದವು. ಕಮ್ಯುನಿಸ್ಟರು ಇವುಗಳ ನಾಯಕತ್ವ ವಹಿಸಿದರು ಮತ್ತು ಇವುಗಳು ನಿರ್ದಿಷ್ಟ ವರ್ಗ ಮತ್ತು ಸಾಮೂಹಿಕ ವಿಷಯಗಳನ್ನು ಕೈಗೆತ್ತಿಕೊಳ್ಳಲು ಜನರನ್ನು ಅಣಿನೆರೆಸುವ ಬಲಿಷ್ಠ ವಾಹನಗಳಾದವು. ವಿಶಾಲ ಜನವಿಭಾಗಗಳನ್ನು ಅಣಿ ನೆರೆಸುವ ಮೂಲಕ ಈ ವೇದಿಕೆಗಳು/ಸಂಘಟನೆಗಳು ಸ್ವಾತಂತ್ರ್ಯ ಚಳುವಳಿಯನ್ನು ಬಲಪಡಿಸುವ ಪಾತ್ರ ಸಹ ನಿರ್ವಹಿಸಿದವು ಮತ್ತು ಬ್ರಿಟೀಷರ 'ಒಡೆದು ಆಳುವ' ನೀತಿಗಳ ವಿರುದ್ಧ ರಕ್ಷಣಾ ಕೋಟೆಗಳಾಗಿ ಕಾರ್ಯ ನಿರ್ವಹಿಸಿದವು.

**ಯುದ್ಧದ ನಂತರದ ಹೋರಾಟಗಳ ಉಬ್ಬರ**

1939–45 ಯುದ್ಧದ ಅವಧಿಯಲ್ಲಿ, ಪಕ್ಷವನ್ನು ಬಹುತೇಕ ಸಲ ನಿಷೇಧಿತವಾಗಿದ್ದರೂ, ಕಾರ್ಮಿಕರು, ರೈತರು ಮತ್ತು ಜನಸಮೂಹಗಳ ನಡುವೆ ನಡೆಸಿದ್ದ ನಿರಂತರ ಕೆಲಸದಿಂದಾಗಿ ಕೆಲವು ಪ್ರದೇಶಗಳಲ್ಲಿ ಪಕ್ಷ ಸಂಘಟನೆ ವಿಸ್ತಾರಗೊಂಡಿತು. ಯುದ್ಧದ ನಂತರದ ಸಾಮೂಹಿಕ ಹೋರಾಟಗಳಿಂದಾಗಿ ಭಾರತೀಯ ಕಮ್ಯುನಿಸ್ಟ್ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಕೈಗಾರಿಕಾ ಮುಷ್ಕರಗಳು, ಕೃಷಿ ಹೋರಾಟಗಳು ಮತ್ತು ವಿದ್ಯಾರ್ಥಿ ಪ್ರತಿಭಟನೆಗಳಲ್ಲಿ ಗಣನೀಯ ಪಾತ್ರ ವಹಿಸುವಂತಾಯಿತು. ರಿನ್ (ಬ್ರಿಟಿಷ್ ನೌಕಾಸೈನ್ಯ) ದಂಗೆಗೆ ಬೆಂಬಲವಾಗಿ ಮತ್ತು ಐ.ಎನ್.ಎ. ಕೈದಿಗಳನ್ನು ಬಿಡುಗಡೆ ಮಾಡುವಂತೆ ಮಾಡಿದ ರಾಜಕೀಯ ಮಧ್ಯಪ್ರವೇಶಗಳಲ್ಲಿ ಕಮ್ಯುನಿಸ್ಟರು ಪ್ರಮುಖ ಪಾತ್ರ ವಹಿಸಿದ್ದರು. ಇದು ಅಧಿಕಾರದ ಹಸ್ತಾಂತರ ಪ್ರಕ್ರಿಯೆಯನ್ನು ಮತ್ತು ಬ್ರಿಟೀಷರ ನಿರ್ಗಮನವನ್ನು ಚುರುಕುಗೊಳಿಸಿತು.

**ಜನರ ಐಕ್ಯತೆ ಮತ್ತು ಪ್ರಜಾಸತ್ತಾತ್ಮಕ**
**ಧರ್ಮನಿರಪೇಕ್ಷ ಗಣತಂತ್ರದ ರಕ್ಷಣೆಯತ್ತ......**

ಇಂದು ನಾವು ಎದುರಿಸುತ್ತಿರುವ ಅಪಾಯ ಹಿಂದೆದೂ ಕೇಳರಿಯದ್ದು. ಕಮ್ಯುನಿಸ್ಟರನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರ ಭಾಗವಹಿಸಲು ಹಾಗೂ ಅಮೂಲ್ಯ ತ್ಯಾಗಗಳನ್ನು ಮಾಡಲು ಸ್ಫೂರ್ತಿಯ ಚಿಲುಮೆಯಾಗಿದ್ದ ಕಣ್ಣೋಟವು, ಒಂದು ಪುರೋಗಾಮಿ ಪ್ರಜಾಸತ್ತಾತ್ಮ ಮತ್ತು ಧರ್ಮ ನಿರಪೇಕ್ಷ ಗಣತಂತ್ರವಾದ ಸ್ವತಂತ್ರ ಭಾರತವನ್ನು ನಿರ್ಮಿಸುವುದಾಗಿತ್ತು. ವಿಪರ್ಯಾಸವೆಂದರೆ, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಯಾವುದೇ ಪಾತ್ರ ನಿರ್ವಹಿಸದೆ ಇದ್ದ ಮತ್ತು ಆ ಐತಿಹಾಸಿಕ ಹೋರಾಟಗಳಲ್ಲಿ ಜನರ ಐಕ್ಯತೆ ಮುರಿಯಲು ಯತ್ನಿಸಿದ ಶಕ್ತಿಗಳು ಇಂದು ಕಮ್ಯುನಿಸ್ಟರನ್ನು ತಮ್ಮ ಸಂಚಿನ ವಿರುದ್ಧದ ರಕ್ಷಣಾ ಕೋಟೆಗಳಾಗಿ ಕಾಣುತ್ತಿವೆ. ಹೀಗಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರವನ್ನು ದೃಢವಾಗಿ ಸಮರ್ಥಿಸಿಕೊಳ್ಳುವ ಮೂಲಕ ಮತ್ತು ಈ ಧೀಮಂತ ಪರಂಪರೆಯಿಂದ ಹೊರ ಹೊಮ್ಮಿದ ಸಂವಿಧಾನಾತ್ಮಕ ಮೌಲ್ಯಗಳನ್ನು ರಕ್ಷಿಸಿಕೊಳ್ಳುವ ಮೂಲಕ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಶತಮಾನೋತ್ಸವವನ್ನು ಆಚರಿಸಿದರೆ ಮಾತ್ರ ಅದು ಅರ್ಥಪೂರ್ಣವಾಗುತ್ತದೆ. ■

# ಜಾತ್ಯತೀತ ಪ್ರಜಾಪ್ರಭುತ್ವದ ದೃಢಚಿತ್ತದ ರಕ್ಷಕರು

ಪುಟ 3 ರಿಂದ

ಫ್ಯಾಸಿಸ್ಟ್ ಮಾದರಿಯ ಆರ್.ಎಸ್.ಎಸ್. ನೇತೃತ್ವದ ಕೂಟದ ಬೆಳವಣಿಗೆಯೊಂದಿಗೆ ಮತ್ತು ಕೇಂದ್ರದಲ್ಲಿ ಅದು ಅಧಿಕಾರ ವಹಿಸುವುದರೊಂದಿಗೆ ಜಾತ್ಯತೀತತೆಯ ತಳಪಾಯಕ್ಕೆ ಆಪತ್ತು ಬಂದಿದೆ. ಪ್ರಭುತ್ವದ ಸಂಸ್ಥೆಗಳು, ಆಡಳಿತ, ಶಿಕ್ಷಣ ವ್ಯವಸ್ಥೆ ಮತ್ತು ಮಾಧ್ಯಮವನ್ನು ಕೋಮುಗ್ರಸ್ತಗೊಳಿಸಲು ವ್ಯವಸ್ಥಿತ ಪ್ರಯತ್ನಗಳು ಸಾಗಿವೆ."(ಪರಿಚ್ಛೇದ 5.7)

ಮುಂದುವರೆದು ಪಕದ್ಷ ಕಾರ್ಯಭಾರವನ್ನು ಕಾರ್ಯಕ್ರಮ ಹೀಗೆ ಗಮನಿಸುತ್ತದೆ: "ಧಾರ್ಮಿಕ ಕೋಮುವಾದದ ಆಧಾರದಲ್ಲಿ, ಫ್ಯಾಸಿಸ್ಟ್ ಪ್ರವೃತ್ತಿಗಳು ನೆಲೆ ಪಡೆದುಕೊಳ್ಳುವ ಅಪಾಯದ ವಿರುದ್ಧ ಎಲ್ಲ ಮಟ್ಟಗಳಲ್ಲೂ ದೃಢವಾಗಿ ಹೋರಾಡಬೇಕು" (ಪರಿಚ್ಛೇದ 5.8)

ಭಾರತದ ಸಂವಿಧಾನಿಕ ವ್ಯವಸ್ಥೆಗೆ ಸರಕಾರದಲ್ಲಿರುವ ಬಿಜೆಪಿ ಒಡ್ಡುವ ಗಂಭೀರ ಅಪಾಯಗಳನ್ನು ಗಮನಿಸುತ್ತ ಪಕ್ಷದ ಕಾರ್ಯಕ್ರಮ ಹೀಗೆ ಹೇಳುತ್ತದೆ: "ಭಾರತೀಯ ಜನತಾಪಕ್ಷವು ಇತರ ಧರ್ಮಗಳ ಬಗೆಗಿನ ದ್ವೇಷ, ಅಸಹನೆ ಮತ್ತು ಅತಿರಾಷ್ಟ್ರೀಯವಾದಿ ಅಂಧತ್ವದ ಮೇಲೆ ಆಧರಿಸಿದ, ಪ್ರತಿಗಾಮಿ ಹೂರಣದ ವಿಭಜಕ ಹಾಗೂ ಕೋಮುವಾದಿ ವೇದಿಕೆಯನ್ನು ಹೊಂದಿರುವ ಪ್ರತಿಗಾಮಿ ಪಕ್ಷವಾಗಿದೆ. ಫ್ಯಾಸಿಸ್ಟ್ ಸ್ವರೂಪದ ರಾಷ್ಟ್ರೀಯ ಸ್ವಯಂಸೇವಕ ಸಂಘವು ಬಿಜೆಪಿಗೆ ಮಾರ್ಗದರ್ಶನ ಮಾಡುತ್ತಾ ಅದರ ಮೇಲೆ ಪ್ರಾಬಲ್ಯ ಹೊಂದಿರುವುದರಿಂದ ಅದು ಸಾಧಾರಣ ಬಂಡವಾಳಶಾಹಿ ಪಕ್ಷವಲ್ಲ. ಬಿಜೆಪಿ ಅಧಿಕಾರದಲ್ಲಿರುವಾಗ ಆರೆಸ್ಸೆಸ್‌ಗೆ ಪ್ರಭುತ್ವಾಧಿಕಾರದ ಸಾಧನಗಳೊಂದಿಗೆ ಮತ್ತು ಪ್ರಭುತ್ವದ ಯಂತ್ರದೊಂದಿಗೆ ಸಂಪರ್ಕಾವಕಾಶ ದೊರೆಯುತ್ತದೆ. ಹಿಂದುತ್ವ ಸಿದ್ಧಾಂತವು ಪುನರುತ್ಥಾನವಾದವನ್ನು ಪ್ರೋತ್ಸಾಹಿಸುತ್ತದೆ ಮತ್ತು ಒಂದು ಹಿಂದೂರಾಷ್ಟ್ರವನ್ನು ಸ್ಥಾಪಿಸುವ ಉದ್ದೇಶದಿಂದ ಭಾರತದ ಬಹುಮುಖಿ ಸಂಸ್ಕೃತಿಯನ್ನು ತಿರಸ್ಕರಿಸುತ್ತದೆ." (ಪರಿಚ್ಛೇದ 7.14)

**ಕಾರ್ಪೊರೇಟ್–ಕೋಮುವಾದಿ ಸಖ್ಯತೆ:**

ಪ್ರಸಕ್ತ ಸಂದರ್ಭದಲ್ಲಿ, 2019ರ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶಗಳನ್ನು ವಿಶ್ಲೇಷಿಸುತ್ತ ಸಿಪಿಐ(ಎಂ) ಕೇಂದ್ರ ಸಮಿತಿ, ಭಾರತೀಯ ಆಳುವ ವರ್ಗಗಳು ಈಗ ಒಂದು ಕಾರ್ಪೊರೇಟ್ ಕೋಮುವಾಗಿ ಸಖ್ಯತೆಯನ್ನು ಗಟ್ಟಿಗೊಳಿಸಿವೆ, ಇದರಿಂದಾಗಿ ಅವು ಹೆಚ್ಚುಹೆಚ್ಚಾಗಿ ಸಾಮ್ರಾಜ್ಯಶಾಹಿಯ ಅಡಿಯಾಳು ಮಿತ್ರರಾಗುತ್ತಿವೆ ಎಂದು ಗಮನಿಸಿತ್ತು. ಇದನ್ನು ಸ್ಪಷ್ಟವಾಗಿ, ಕೇಂದ್ರ ಸಮಿತಿ ನಿರ್ಣಯಗಳಲ್ಲಿ ಗಮನಿಸಿರುವಂತೆ, ನಂತರದ ಬೆಳವಣಿಗೆಗಳು ಸಾಬೀತು ಪಡಿಸಿವೆ.

ಕೊವಿಡ್ ಮಹಾಸೋಂಕು ಮತ್ತು ಲಾಕ್‌ಡೌನ್‌ಗಳಿಂದಾಗಿ ಜನಗಳ ಚಟುವಟಿಕೆಗಳ ಮೇಲೆ ಹೇರಿದ ನಿರ್ಬಂಧಗಳನ್ನು ದುರುಪಯೋಗ ಪಡಿಸಿಕೊಂಡು ಹೇಗೆ ಈ ಆರೆಸ್ಸೆಸ್/ಬಿಜೆಪಿ/ಮೋದಿ ನೇತೃತ್ವದ ಸರಕಾರ ಭಾರತೀಯ ಸಂವಿಧಾನ ವ್ಯವಸ್ಥೆಯನ್ನು ಸಮಸ್ತವಾಗಿ ಧ್ವಂಸ ಮಾಡುವ ಗುರಿಯಿಂದ ಒಂದು ದಾಳಿಯನ್ನು ಮಾಡುತ್ತಿದೆ ಎಂಬುದನ್ನು ಪೊಲಿಟ್‌ಬ್ಯುರೊ ಮತ್ತು ಕೇಂದ್ರ ಸಮಿತಿ ವರದಿಗಳಲ್ಲಿ ಗಮನಿಸಲಾಗಿದೆ. ನವ–ಉದಾರವಾದಿ ಸುಧಾರಣೆಗಳ ಉಗ್ರ ಅನುಸರಣೆ–ದೊಡ್ಡ ಪ್ರಮಾಣದಲ್ಲಿ ಖಾಸಗೀಕರಣ, ರಾಷ್ಟ್ರೀಯ ಆಸ್ತಿಗಳ ಲೂಟಿ, ನಮ್ಮ ಕೃಷಿಯನ್ನು ಒತ್ತೆಯಿಡುವ ಹೊಸ ಕೃಷಿ ಮಸೂದೆಗಳು, ಇವುಗಳ ಜೊತೆಗೆ ಕಾರ್ಮಿಕ ವರ್ಗ, ರೈತಾಪಿಗಳು ಮತ್ತು ದುಡಿಯುವ ಜನಗಳ ಹಕ್ಕುಗಳ ಮೇಲೆ ಕ್ರೂರ ಆಕ್ರಮಣಗಳು; ಕೋಮುವಾದಿ ಧ್ರುವೀಕರಣವನ್ನು ಘೋರವಾಗಿ ತೀಕ್ಷ್ಣಗೊಳಿಸುತ್ತಿರುವುದು ಮತ್ತು ಮುಸ್ಲಿಮರ ಮೇಲೆ ಗುರಿಯಿಡುವುದು; ಭಿನ್ನಮತವನ್ನು 'ರಾಷ್ಟ್ರ–ವಿರೋಧಿ' ಎಂದು ಪರಿಗಣಿಸಿ ಕರಾಳ ಕಾನೂನುಗಳ ಅಡಿಯಲ್ಲಿ ವ್ಯಾಪಕ ಬಂಧನಗಳು, ನಾಗರಿಕ ಸ್ವಾತಂತ್ರ್ಯಗಳು, ಮಾನವ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಹಲ್ಲೆಗಳು ಇತ್ಯಾದಿ ಇತ್ಯಾದಿ. ಈ ಎಡೆಬಿಡದ ಪ್ರಹಾರಗಳನ್ನು ಜನತೆಯ ಐಕ್ಯ ಸಾಮರ್ಥ್ಯವನ್ನು ಅಣಿನೆರೆಸುವ ಮೂಲಕ ಪ್ರತಿರೋಧಿಸಬೇಕು.

ಇದಕ್ಕೆ ಕೋಮುವಾದಿ ಶಕ್ತಿಗಳು ಮತ್ತು ನವ–ಉದಾರವಾದಿ ಆರ್ಥಿಕ ಸುಧಾರಣೆಗಳ ವಿರುದ್ಧ ಹೋರಾಟಗಳು ಎರಡು ಪ್ರತ್ಯೇಕ ಭಾಗಗಳಲ್ಲ, ಬದಲಿಗೆ ದೇಶವನ್ನು ರಕ್ಷಿಸುವ ಮತ್ತು ಶ್ರಮಜೀವಿ ವರ್ಗಗಳ ಹಿತಸಾಧನೆಯ ಭಾರತೀಯ ಜನತೆಯ ಒಂದು ಸಮಗ್ರ ಹೋರಾಟದ ಭಾಗ ಎಂಬುದನ್ನು ಗುರುತಿಸಬೇಕಾಗುತ್ತದೆ. ಇಂದಿನ ಸಂದರ್ಭದಲ್ಲಿ ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವದ ರಕ್ಷಣೆಯ ಹೋರಾಟ ಭಾರತೀಯ ಸಂವಿಧಾನವನ್ನು ರಕ್ಷಿಸುವ ಮತ್ತು ಅದು ಜನತೆಗೆ ನೀಡಿರುವ ಖಾತ್ರಿಗಳನ್ನು ರಕ್ಷಿಸುವುದಷ್ಟೇ ಅಲ್ಲ, ಅವುಗಳ ಈಡೇರಿಕೆಯೂ ಆಗುವಂತೆ ಖಾತ್ರಿ ಪಡಿಸುವ ಹೋರಾಟದ ಅವಿಭಾಜ್ಯ ಅಂಗ. ಒಂದು ವರ್ಷದ ಕಾಲ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಶತಮಾನೋತ್ಸವ ಆಚರಣೆಗಳು ಭಾರತ ಮತ್ತು ಅದರ ದುಡಿಯುವ ಜನತೆಯ ರಕ್ಷಣೆಯ ಹೋರಾಟವನ್ನು ಬಲಗೊಳಿಸುವ ನಮ್ಮ ದೃಢನಿರ್ಧಾರವನ್ನು ದ್ವಿಗುಣಗೊಳಿಸಬೇಕು.

ಇದೊಂದು ದುರ್ಗಮ ಹೋರಾಟ, ಏಕೆಂದರೆ ಈ ಮೋದಿ ಸರಕಾರ ಭಾರತವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ 'ಸೇವಕಿ'ಯಾಗಿ ಪರಿವರ್ತಿಸುತ್ತಿದೆ. ಈ ಬಹುಮುಖೀ ಸವಾಲುಗಳನ್ನು ಎದುರಿಸಿ ಸೋಲಿಸುವುದು ನಿಮ್ಮ ಕ್ರಾಂತಿಕಾರಿ ಗುರಿಸಾಧನೆಯತ್ತ ಸಾಗುವಲ್ಲಿ ಸದ್ಯದ ಆವಶ್ಯಕತೆಯಾಗಿದೆ. ■

# ಕಾರ್ಮಿಕ ವರ್ಗದ ಚಳವಳಿಯ ಸಂಘಟನೆಯಲ್ಲಿ ಕಮ್ಯುನಿಸ್ಟರು

**ದೇಶದ ಆರಂಭಿಕ ಕಮ್ಯುನಿಸ್ಟರೆಲ್ಲರೂ ಕಾರ್ಮಿಕ ಸಂಘಟನೆಯಲ್ಲಿ ತೊಡಗುವುದರೊಂದಿಗೆ ತಮ್ಮ ರಾಜಕೀಯ ಜೀವನ ಆರಂಭಿಸಿದವರು. ಆ ಕಾಲದ (1920 ರ ದಶಕದ) ಹೊಸ ಕೈಗಾರಿಕಾ ಕೇಂದ್ರಗಳನ್ನು ಸಂಘಟಿತ ಕಾರ್ಮಿಕ ವರ್ಗ ಮತ್ತು ಆಗಷ್ಟೇ ಹುಟ್ಟಿಬರುತ್ತಿದ್ದ ವಿವಿಧ ಕಮ್ಯುನಿಸ್ಟ್ ಗುಂಪುಗಳಿಗೆ ಬಲವಾದ ಕೇಂದ್ರಗಳೆಂದು ಸಹ ಪರಿಗಣಿಸಲಾಗಿದೆ. ಪ್ರತಿವರ್ಷದ ಎಐಸಿಸಿ ಅಧಿವೇಶನದ ಪ್ರತಿನಿಧಿಗಳನ್ನು ಉದ್ದೇಶಿಸಿ ಕಮ್ಯುನಿಸ್ಟ್ ಪಕ್ಷ ಪ್ರಕಟಿಸಿರುವ ಪ್ರಣಾಳಿಕೆಗಳಲ್ಲಿ ಕಾರ್ಮಿಕರು, ರೈತರು ಮತ್ತು ಇತರ ದುಡಿಯುವ ಜನವಿಭಾಗಗಳ ಆಕಾಂಕ್ಷೆಗಳಿಗೆ ಹೆಚ್ಚಿನ ಒತ್ತು ಕೊಡಲಾಗುತ್ತಿತ್ತು. ಬ್ರಿಟಿಶರು ಕಮ್ಯುನಿಸ್ಟರ ಮೇಲೆ ವಿವಿಧ ಪಿತೂರಿ ಮೊಕದ್ದಮೆಗಳನ್ನು ಇವುಗಳ ಆಧಾರದಲ್ಲಿಯೇ ಹಾಕಿದ್ದರು ಎಂಬುದು ಗಮನಾರ್ಹ.**

**ಕೆ. ಹೇಮಲತಾ** **ಅನು: ಸಿ.ಆರ್ ಶಾನಬಾಗ**


ನಮ್ಮ ದೇಶದಲ್ಲಿನ ಕಮ್ಯುನಿಸ್ಟ್ ಚಳವಳಿ ಮತ್ತು ಸಂಘಟಿತ ಟ್ರೇಡ್ ಯೂನಿಯನ್ ಚಳವಳಿ ಎರಡೂ ಅವುಗಳ ರಚನೆಯ ಶತಮಾನೋತ್ಸವವನ್ನು ಆಚರಿಸುತ್ತಿರುವುದು ಕಾಕತಾಳೀಯವಲ್ಲ. ಈ ಎರಡೂ ಘಟನೆಗಳು 1917 ರಲ್ಲಿ ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ನಂತರ ರಷ್ಯಾದಲ್ಲಿ ಮೊದಲ ಕಾರ್ಮಿಕರ ಪ್ರಭುತ್ವ ಸ್ಥಾಪನೆಯಿಂದ ಪ್ರೇರಿತವಾಗಿವೆ. ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಅದರ ಸಮಾಜದ ವಿಮೋಚನೆಯ ಸಿದ್ಧಾಂತದ ಮಾರ್ಗದರ್ಶನದಲ್ಲಿ ಕಮ್ಯುನಿಸ್ಟ್ ಚಳುವಳಿಯ ಪ್ರವರ್ತಕರಾದ ಮುಜಾಫರ್ ಅಹ್ಮದ್, ಸಿಂಗಾರವೇಲು ಚೆಟ್ಟಿಯಾರ್, ಎಸ್.ಎ.ಡಾಂಗೆ, ಗುಲಾಮ್ ಹುಸೇನ್, ಮುಂತಾದವರು ಆರಂಭಿಕ ದಿನಗಳಿಂದ ಕಾರ್ಮಿಕ ವರ್ಗವನ್ನು ಸಂಘಟಿಸುವ ಕಾರ್ಯದಲ್ಲಿ ತೊಡಗಿದರು. ಕಲ್ಕತ್ತಾ, ಮದ್ರಾಸ್, ಬಾಂಬೆ, ಲಾಹೋರ್, ಕಾನ್ಪುರದಂತಹ ಆ ಕಾಲದ (1920 ರ ದಶಕದ) ಹೊಸ ಕೈಗಾರಿಕಾ ಕೇಂದ್ರಗಳನ್ನು ಸಂಘಟಿತ ಕಾರ್ಮಿಕ ವರ್ಗ ಮತ್ತು ಆಗಷ್ಟೇ ಹುಟ್ಟಿಬರುತ್ತಿದ್ದ ವಿವಿಧ ಕಮ್ಯುನಿಸ್ಟ್ ಗುಂಪುಗಳಿಗೆ ಬಲವಾದ ಕೇಂದ್ರಗಳೆಂದು ಸಹ ಪರಿಗಣಿಸಲಾಗಿದೆ ಎಂಬ ಅಂಶದಿಂದ ಈ ಎರಡೂ ಚಳುವಳಿಗಳ ಸಮಕಾಲೀನ ಬೆಳವಣಿಗೆಯನ್ನು ತಿಳಿಯಬಹುದು.


ಕಮ್ಯುನಿಸ್ಟ್ ಚಳವಳಿಯ ಸಂಸ್ಥಾಪಕರ ಮುತುವರ್ಜಿಯಿಂದಲೇ ಮೇ ದಿನವನ್ನು ನಮ್ಮ ದೇಶದಲ್ಲಿ ಮೊದಲ ಬಾರಿಗೆ ಆಚರಿಸಲಾಯಿತು. ಸಿಂಗಾರವೆಲು ಚೆಟ್ಟಿಯಾರ್ 1923 ರಲ್ಲಿ ಮದ್ರಾಸ್‌ನಲ್ಲಿ ಕೆಂಬಾವುಟವನ್ನು ಮೇ ಮೊದಲ ದಿನದಂದು ಹಾರಿಸಿದರು ಮತ್ತು ಲೇಬರ್ ಕಿಸಾನ್ ಪಕ್ಷವನ್ನೂ ಪ್ರಾರಂಭಿಸಿದರು. ಗಾಂಧೀಜಿಗೆ ಬರೆದ ಪತ್ರದಲ್ಲಿ ಚೆಟ್ಟಿಯಾರ್ ತಮ್ಮ ಕಮ್ಯುನಿಸ್ಟ್ ನಂಬಿಕೆಗಳನ್ನು ಬಹಿರಂಗವಾಗಿ ವ್ಯಕ್ತಪಡಿಸಿದರು, ಭೂಮಿ ಮತ್ತು ಪ್ರಮುಖ ಕೈಗಾರಿಕೆಗಳನ್ನು ಸಾರ್ವಜನಿಕ ಒಡೆತನದಲ್ಲಿ ನಡೆಸಬೇಕು ಮತ್ತು ದೇಶದ ಎಲ್ಲ ದುಡಿಯುವ ಜನರ ಸಾಮಾನ್ಯ ಲಾಭಕ್ಕಾಗಿ ಬಳಸಬೇಕು ಎಂದು ಹೇಳಿದ್ದರು. ಇದು ಸ್ವಾತಂತ್ರ್ಯದ ನಿಜವಾದ ಅರ್ಥವಾಗಿರಬೇಕು ಎಂದೂ ಅವರು ಹೇಳಿದ್ದರು. ಆರ್ಥಿಕ ಸ್ವಾಸ್ಥ್ಯ ಮತ್ತು ಕಾರ್ಮಿಕ ವರ್ಗದ ಹಕ್ಕುಗಳ ರಕ್ಷಣೆಯನ್ನು ನಮ್ಮ ಸ್ವಾತಂತ್ರ್ಯ ಹೋರಾಟದ ಪ್ರಮುಖ ಅಂಶವಾಗಿ ಜೋಡಿಸುವ ಕಲ್ಪನೆಯು ಕಮ್ಯುನಿಸ್ಟ್ ಚಳವಳಿಯ ಕೊಡುಗೆಯಾಗಿದೆ. ಕಮ್ಯುನಿಸ್ಟರು ವಿವಿಧ ಪತ್ರಿಕೆಗಳು ಮತ್ತು ನಿಯತಕಾಲಿಕಗಳನ್ನು ಪ್ರಾರಂಭಿಸಿದರು, ಇವು ಕಾರ್ಮಿಕ ವರ್ಗ ಎದುರಿಸುತಿದ್ದ ಸಮಸ್ಯೆಗಳ ವರದಿಗಾರಿಕೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದವು ಮತ್ತು ಆರ್ಥಿಕ ಮತ್ತು ರಾಜಕೀಯ ವಿಮೋಚನೆಯ ಕಲ್ಪನೆಯನ್ನು ಪ್ರಚಾರ ಮಾಡಿದವು.


ಕಮ್ಯುನಿಸ್ಟರು ಕಾರ್ಮಿಕರ ಐಕ್ಯತೆ ಮತ್ತು ವರ್ಗ ಹೋರಾಟವನ್ನು ಪ್ರತಿಪಾದಿಸುತ್ತಿದ್ದರೆ, ಗಾಂಧೀಜಿಯವರು, ಕಾರ್ಮಿಕರ ಕುಂದುಕೊರತೆಗಳ ಪರಿಹಾರಕ್ಕಾಗಿ ಅವರ ಮತ್ತು ಕೈಗಾರಿಕೋದ್ಯಮಿಗಳ (ಅವರ ಪ್ರಕಾರ ಟ್ರಸ್ಟಿಗಳು) ನಡುವಿನ ಮಧ್ಯಸ್ಥಿಕೆಯ ಬಗ್ಗೆ ಮಾತನಾಡುತ್ತಿದ್ದರು. ಕಾರ್ಮಿಕರನ್ನು ಮತ್ತು ಮಾಲೀಕರನ್ನು 'ಪಾಲುದಾರರು' ಎಂದು ಪರಿಗಣಿಸಿದ್ದರಿಂದ ಬೂರ್ಜ್ವಾ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಗಾಂಧೀಜಿ ವರ್ಗ-ಹೋರಾಟದಲ್ಲಿ ನಂಬಿಕೆಯಿಡಲಿಲ್ಲ. ಕಾರ್ಮಿಕ ಸಂಘಗಳು ಮುಷ್ಕರಗಳನ್ನು ಸಂಘಟಿಸಬಾರದು ಅಥವಾ ಹೋರಾಟಗಳನ್ನು ನಡೆಸಬಾರದು, ಬದಲಾಗಿ ತಮ್ಮನ್ನು 'ರಚನಾತ್ಮಕ ಕೆಲಸ'ದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅವರು ಬಯಸಿದರು. ಈ ಕಾರಣಕ್ಕಾಗಿಯೇ ಅವರು ಕಾರ್ಮಿಕ ಸಂಘಗಳ ಅಖಿಲ ಭಾರತ ಸಂಘಟನೆಯನ್ನು ರಚಿಸುವುದನ್ನು ವಿರೋಧಿಸಿದರು. ಬೂರ್ಜ್ವಾ ವರ್ಗದಿಂದ ಬಂದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಹೆಚ್ಚಿನ ನಾಯಕರು ಸ್ವಾಭಾವಿಕವಾಗಿ ಈ ಅಭಿಪ್ರಾಯಗಳನ್ನು ಹಂಚಿಕೊಂಡರು ಮತ್ತು ಅದರಿಂದಾಗಿ ವಿವಿಧ ಕಾರ್ಮಿಕ ಸಂಘಗಳಲ್ಲಿ ಭಾಗಿಯಾಗಿದ್ದರೂ ಕಾರ್ಮಿಕ ವರ್ಗವನ್ನು ಕ್ರಾಂತಿಕಾರಿಗೊಳಿಸುವಲ್ಲಿ ತೊಡಗಿಸಿಕೊಳ್ಳಲಿಲ್ಲ.

ಈ ಸುಧಾರಣಾವಾದಿ ಪದ್ಧತಿಗಳಿಗೆ ವ್ಯತಿರಿಕ್ತವಾಗಿ, ಕಮ್ಯುನಿಸ್ಟ್ ಪಕ್ಷವು ತನ್ನ ಅಭಿಪ್ರಾಯಗಳನ್ನು ವಿವಿಧ ಕಾಂಗ್ರೆಸ್ ಅಧಿವೇಶನಗಳ ಪ್ರತಿನಿಧಿಗಳನ್ನು ಉದ್ದೇಶಿಸಿದ ತನ್ನ ಪ್ರಣಾಳಿಕೆಗಳ ಮೂಲಕ ದೃಢವಾಗಿ ಮಂಡಿಸಿತು. ಉದಾಹರಣೆಗೆ, ಕಾಂಗ್ರೆಸ್ಸಿನ 1921 ರ ಅಹಮದಾಬಾದ್ ಅಧಿವೇಶನಕ್ಕೆ ನೀಡಿದ ಪ್ರಣಾಳಿಕೆ "ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಅಥವಾ ಗದ್ದೆಗಳಲ್ಲಿ ದುಡಿಯುತ್ತಿರುವ ಮನುಷ್ಯನಿಗೆ ರಾಷ್ಟ್ರೀಯ ಸ್ವಾತಂತ್ರ್ಯವು ತನ್ನ ಕಷ್ಟಗಳನ್ನು ಕೊನೆಗೊಳಿಸುತ್ತದೆ ಎಂದು ಮನವರಿಕೆ ಮಾಡುವುದು ಹೇಗೆ? .ಅವರು ಹೋರಾಟಕ್ಕೆ ಮುಂದಾಗಬೇಕಾದರೆ, ಸ್ವಾತಂತ್ರ್ಯವು ಅವರ ಭೌತಿಕ ಪರಿಸ್ಥಿತಿಗಳ ಸುಧಾರಣೆಗಾಗಿರಬೇಕು. ನಗರಗಳಲ್ಲಿನ ಕಾರ್ಮಿಕರು ಹೆಚ್ಚಿನ ವೇತನ, ಕಡಿಮೆ ಕೆಲಸದ ಅವಧಿ, ಉತ್ತಮ ಜೀವನ ಪರಿಸ್ಥಿತಿಗಳನ್ನು ಬಯಸುತ್ತಾರೆ. ಅವರು ಸಾಮಾಜಿಕ ಮತ್ತು ಆರ್ಥಿಕ ಶೋಷಣೆಯ ವಿರುದ್ಧ ದಂಗೆ ಏಳುತ್ತಾರೆ; ಶೋಷಕನು ಯಾವ ರಾಷ್ಟ್ರೀಯತೆಗೆ ಸೇರಿದವನು ಎಂಬುದು ಅವರಿಗೆ ಯಾವುದೇ ವ್ಯತ್ಯಾಸವನ್ನುಂಟು ಮಾಡುವುದಿಲ್ಲ.. " ಎಂದು ಹೇಳಿತು:

ಕಾಂಗ್ರೆಸ್ಸಿನ ಗಯಾ ಅಧಿವೇಶನಕ್ಕೆ (1922) ಉದ್ದೇಶಿಸಿದ್ದ ಪ್ರಣಾಳಿಕೆ 'ರಾಷ್ಟ್ರೀಯ ವಿಮೋಚನೆ ಮತ್ತು ಪುನರ್ನಿರ್ಮಾಣದ ಕಾರ್ಯಕ್ರಮ'ದಲ್ಲಿ, ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ತನ್ನ ಬೇಡಿಕೆಯನ್ನು ಕಮ್ಯುನಸ್ಟ್ ಪಕ್ಷವು ವಿವರವಾಗಿ ಮಂಡಿಸಿತು: ಸಂಘಟಿಸುವ ಮತ್ತು ಮುಷ್ಕರ ಮಾಡುವ ಹಕ್ಕನ್ನು ಒಳಗೊಂಡಂತೆ ಕಾರ್ಮಿಕ ವರ್ಗಕ್ಕೆ ವಿವಿಧ ಹಕ್ಕುಗಳೊಂದಿಗೆ ಪ್ರಭುತ್ವದ ನೆರವಿನಿಂದ ಆಧುನಿಕ ಕೈಗಾರಿಕೆಗಳನ್ನು ಸ್ಥಾಪಿಸುವದನ್ನು ಅದು ಪ್ರತಿಪಾದಿಸಿತು. ಪಕ್ಷವು ತನ್ನ ಕಾರ್ಯಯೋಜನೆಯಲ್ಲಿ, ಕಾರ್ಮಿಕ ಸಂಘಗಳಿಗೆ ಮಾನ್ಯತೆ, ಕಾರ್ಮಿಕರ ಮುಷ್ಕರ ಹಕ್ಕು, ಎಂಟು ಗಂಟೆಗಳ ಕೆಲಸದ ದಿನ, ಕನಿಷ್ಠ ವೇತನ ಮತ್ತು ಉತ್ತಮ ವಸತಿಗಾಗಿ ಹೋರಾಟಗಳಿಗೆ ಕರೆ ನೀಡಿತು. ಕಾನ್ಪುರ್ ಬೊಲ್ಶೆವಿಕ್ ಪಿತೂರಿ ಪ್ರಕರಣದಲ್ಲಿ (1924) ಕಮ್ಯುನಿಸ್ಟ್ ಪಕ್ಷದ ನಾಯಕರ ವಿರುದ್ಧದ ಪ್ರಮುಖ ಸಾಕ್ಷ್ಯವೆಂದು ಬ್ರಿಟಿಶ್ ಪೊಲೀಸರು ಗಯಾ ಕಾಂಗ್ರೆಸ್ ಅಧಿವೇಶನಕ್ಕೆ ಮಂಡಿಸಿದ ಈ ಪ್ರಣಾಳಿಕೆಯನ್ನು ಉಲ್ಲೇಖಿಸಿದ್ದರು.


ಸಿಂಗಾರವೇಲು ಚೆಟ್ಟಿಯಾರ್


ಎಸ್ ಎ ಡಾಂಗೆ.


ಎಸ್ ವಿ ಘಾಟೆ

ಪಕ್ಷದ ಕಾರ್ಮಿಕ ವರ್ಗದ ಸ್ವರೂಪವನ್ನು ಒತ್ತಿಹೇಳುತ್ತಾ, ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಲು ಬಯಸುವವರು, "ಪಕ್ಷದ ತಕ್ಷಣದ ಉದ್ದೇಶವನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಸಾಮೂಹಿಕ ಒಡೆತನದ ಭೂಮಿ, ಗಣಿಗಳು, ಕಾರ್ಖಾನೆಗಳು, ವಸತಿಗಳು, ಟೆಲಿಗ್ರಾಫ್ ಮತ್ತು ದೂರವಾಣಿಗಳು, ರೈಲ್ವೆಗಳು ಮತ್ತಿತರ ಅಗತ್ಯವಿರುವ ಸಾರ್ವಜನಿಕ ಉಪಯುಕ್ತತೆಗಳ, ಸಾರ್ವಜನಿಕ ಸೇವೆಗಳ ರಾಷ್ಟ್ರೀಕರಣದ ಮೂಲಕ ಕಾರ್ಮಿಕರು ಮತ್ತು ರೈತರಿಗೆ ಜೀವನಯೋಗ್ಯ ವೇತನವನ್ನು ಖಾತರಿ ಪಡಿಸಬಹುದು." ಎಂದು ಹೇಳುವ ಒಂದು ಘೋಷಣೆಗೆ (1925) ಸಹಿ ಹಾಕಬೇಕೆಂದು ಪ್ರತಿಪಾದಿಸಲಾಯಿತು.

ಕಾರ್ಮಿಕರನ್ನು ಸಂಘಟಿಸುವಲ್ಲಿ ಕಮ್ಯುನಿಸ್ಟರು ವಹಿಸಿದ ಸಕ್ರಿಯ ಪಾತ್ರದಿಂದಾಗಿ, ಎಸ್.ವಿ. ಘಾಟೆ ಎ.ಐ.ಟಿ.ಯು.ಸಿ. ಪದಾಧಿಕಾರಿಗಳಾಗಿ ಆಯ್ಕೆಯಾದ ಮೊದಲ ಕಮ್ಯುನಿಸ್ಟ್ ಎನಿಸಿಕೊಂಡರು. ಅಂದಿನಿಂದ, ಎ.ಐ.ಟಿ.ಯು.ಸಿ.ಯ ಯಾವುದೇ ಸಮ್ಮೇಳನವು ಕಮ್ಯುನಿಸ್ಟರನ್ನು ತನ್ನ ಪ್ರಮುಖ ಪದಾಧಿಕಾರಿಗಳಲ್ಲಿ ಆಯ್ಕೆ ಮಾಡದಿರಲಿಲ್ಲ. ಮುಜಾಫರ್ ಅಹ್ಮದ್ 1927 ರಲ್ಲಿ ಎಐಟಿಯುಸಿಯ ಉಪಾಧ್ಯಕ್ಷರಾಗಿ ಆಯ್ಕೆಯಾದರು ಮತ್ತು 1943 ರಲ್ಲಿ ಎಸ್‌ಎ ಡಾಂಗೆ ಅದರ ಅಧ್ಯಕ್ಷರಾಗಿ ಆಯ್ಕೆಯಾದರು, ಇದು ಕಾರ್ಮಿಕ ವರ್ಗದ ನಡುವೆ ಕಮ್ಯುನಿಸ್ಟರು ಮಾಡಿದ ಕಾರ್ಯದ ಪ್ರತಿಬಿಂಬವಾಗಿದೆ. ಬ್ರಿಟಿಶ್ ಸರ್ಕಾರ ಕೂಡ ಕಾರ್ಮಿಕ ವರ್ಗವನ್ನು ಸಂಘಟಿಸುವಲ್ಲಿ ಕಮ್ಯುನಿಸ್ಟರು ವಹಿಸಿದ ಪಾತ್ರವನ್ನು 'ಗುರುತಿಸಿತು'. ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು, ಮೀರತ್ ಪಿತೂರಿ ಪ್ರಕರಣದಲ್ಲಿ (1929) ನೀಡಿದ ತೀರ್ಪಿನಲ್ಲಿ, ಆರೋಪಿಗಳ 'ಮುಖ್ಯ ಸಾಧನೆಗಳು' 'ಕಾರ್ಮಿಕರು ಮತ್ತು ರೈತರ ಪಕ್ಷಗಳ ಸ್ಥಾಪನೆ' ಮತ್ತು ಬಾಂಬೆಯಲ್ಲಿ 1928 ರ ಮುಷ್ಕರದಲ್ಲಿ ಅವರು ನಿರ್ವಹಿಸಿದ ನಿಯಂತ್ರಣದ ವ್ಯಾಪ್ತಿ ಮತ್ತು ಮುಷ್ಕರ ಮುಗಿದ ನಂತರ ಗಿರಣಿ ಕಾಮಗಾರ್ ಯೂನಿಯನಿನಲ್ಲಿ ಸಂಪೂರ್ಣ ಕ್ರಾಂತಿಕಾರಿ ನಿಲುವನ್ನು ಮುಂದಿಡುವಲ್ಲಿ ಅವರು ಸಾಧಿಸಿದ್ದ ಯಶಸ್ಸಿನಿಂದಾಗಿ ವ್ಯಕ್ತವಾದ ಮುಂಬಯಿಯ ಜವಳಿ ಉದ್ಯಮದ ಕಾರ್ಮಿಕರ ಮೇಲೆ ಅವರ ಹಿಡಿತ ' ಎಂದು ಹೇಳಿತ್ತು.

ಕಾರ್ಮಿಕ ವರ್ಗದ ನಡುವೆ ಕಮ್ಯುನಿಸ್ಟರ ಸಕ್ರಿಯ ಮಧ್ಯಪ್ರವೇಶ ಮತ್ತು ಕ್ರಾಂತಿಕಾರಿ ವಿಚಾರಗಳ ಪ್ರಚಾರ, ಕಾರ್ಮಿಕ ಸಂಘಗಳ ಮೇಲಿನ ಸುಧಾರಣಾವಾದಿಗಳ ಹಿಡಿತವನ್ನು ದುರ್ಬಲಗೊಳಿಸಿತು. ಒಂದು ಉದ್ಯಮದೊಳಗೆ ಒಂದೇ ಸಂಘವನ್ನು ಹೊಂದುವ ಕಮ್ಯುನಿಸ್ಟರ ನಂಬಿಕೆಯ ಹೊರತಾಗಿಯೂ, ಸುಧಾರಣಾವಾದ ಮತ್ತು ಕ್ರಾಂತಿಕಾರಿ ನೀತಿಯ ನಡುವಿನ ಹೋರಾಟವು ಟ್ರೇಡ್ ಯೂನಿಯನ್ ಚಳವಳಿಯಲ್ಲಿ ವಿವಿಧ ಒಡಕುಗಳಿಗೆ ಕಾರಣವಾಯಿತು. ಸುಧಾರಣಾವಾದಿ ನಾಯಕತ್ವ, ವರ್ಗ ಹೋರಾಟಗಳನ್ನು ತೀಕ್ಷ್ಣಗೊಳಿಸುವ ಮತ್ತು ನಮ್ಮ ಸಮಾಜದ ಕ್ರಾಂತಿಕಾರಿ ಪರಿವರ್ತನೆಯನ್ನು ತರುವ ಕೆಲಸ ಮಾಡುವ ಬದಲು ವರ್ಗ ಸಹಯೋಗಿ ನಿಲುವುಗಳನ್ನು ಪ್ರತಿಪಾದಿಸಿತು. ಬೂರ್ಜ್ವಾವರ್ಗದ ನಾಯಕತ್ವವನ್ನು ಒಪ್ಪಿಕೊಂಡ ಅವರು ಕಾರ್ಮಿಕ ವರ್ಗದ ಚಳವಳಿಯನ್ನು ಆಳುವ ವರ್ಗಗಳ ರಾಜಕೀಯ ಮತ್ತು ನೀತಿಗಳಿಗೆ ತಕ್ಕಂತೆ ಹೊಂದಾಣಿಕೆ ಮಾಡಲು ಪ್ರಯತ್ನಿಸಿದರು ಮತ್ತು ಅದರಿಂದಾಗಿ ಕಾರ್ಮಿಕ ವರ್ಗದ ಐಕ್ಯತೆಯನ್ನು ಬಲಪಡಿಸಲು ಆಸಕ್ತಿ ಹೊಂದಿರಲಿಲ್ಲ.

ಬಿ.ಟಿ. ರಣದಿವೆ, ಕಾರ್ಮಿಕ ವರ್ಗದ ಚಳವಳಿಯಲ್ಲಿ ಇಂತಹ ಸುಧಾರಣಾವಾದಿ ಪ್ರವೃತ್ತಿಗಳ ವಿರುದ್ಧ ಹೋರಾಡುವ ಮತ್ತು ಕಾರ್ಮಿಕ ವರ್ಗದ ಗರಿಷ್ಠ ಐಕ್ಯತೆಗಾಗಿ ಶ್ರಮಿಸುವ ಅಗತ್ಯವನ್ನು ವಿವರಿಸುತ್ತಾ "ಕಾರ್ಮಿಕ ವರ್ಗದ ಐಕ್ಯತೆ, ಕಾರ್ಮಿಕ ವರ್ಗದ ಹೋರಾಟ ಮತ್ತು ದೈನಂದಿನ ಹೋರಾಟದಲ್ಲಿ ಸುಧಾರಣಾವಾದಿ ವಿಧ್ವಂಸಕತೆಯ ವಿರುದ್ಧ ಹೋರಾಟಗಳು ಜೊತೆಜೊತೆಯಲ್ಲಿ ಸಾಗಬೇಕು . ಕಾರ್ಮಿಕ ಸಂಘಗಳಲ್ಲಿನ ಸುಧಾರಣಾವಾದಿ ಅಭ್ಯಾಸದ ವಿರುದ್ಧದ ಹೋರಾಟವನ್ನು ಕಾರ್ಮಿಕ ವರ್ಗದ ಚಟುವಟಿಕೆಯಲ್ಲಿ ಏಕತೆಗಾಗಿ ಬೆಳೆಯುತ್ತಿರುವ ಹೋರಾಟದೊಂದಿಗೆ ಸಂಯೋಜಿಸಬೇಕಾಗಿದೆ, ಎರಡನ್ನೂ ಬೇರ್ಪಡಿಸಲು ಸಾಧ್ಯವಿಲ್ಲ. ಇವು ಬೇರ್ಪಟ್ಟರೆ, ನೀವು ಖಾಲಿಯಾದಂತೆ. "ಎಂದು ಹೇಳಿದರು.

ಕಾರ್ಮಿಕ ವರ್ಗದ ಹೋರಾಟಗಳಲ್ಲಿ ಕಮ್ಯುನಿಸ್ಟರ ಭಾಗವಹಿಸುವಿಕೆಯು ಕಾರ್ಮಿಕ ಸಂಘಗಳ ದೃಷ್ಟಿಕೋನವನ್ನು ವಿಸ್ತರಿಸಿತು ಮತ್ತು ಅವರನ್ನು ಸಾಮಾಜಿಕ ಸಮಸ್ಯೆಗಳತ್ತ ಸಹ ಗಮನಹರಿಸುವಂತೆ ಮಾಡಿತು. ಕಮ್ಯುನಿಸ್ಟರ ಪ್ರಯತ್ನದಿಂದಾಗಿ ದಲಿತ ಮತ್ತು ದಲಿತೇತರ ಕಾರ್ಮಿಕರು, ಮುಸ್ಲಿಮರು ಮತ್ತು ಹಿಂದೂಗಳು ತಮ್ಮ ಜಾತಿ ಮತ್ತು ಧಾರ್ಮಿಕ ಅಡೆತಡೆಗಳನ್ನು ಮರೆತು ತಮ್ಮ ಹಕ್ಕುಗಳಿಗಾಗಿ ಒಗ್ಗಟ್ಟಿನಿಂದ ಹೋರಾಡಿದರು. ಇಂತಹ ಹೋರಾಟಗಳ ಮೂಲಕವೇ ಅನೇಕ ದಲಿತರು ಸ್ಫೂರ್ತಿ ಪಡೆದು ಕಮ್ಯುನಿಸ್ಟ್ ಚಳವಳಿಗೆ ಸೇರಿದರು.

ಕಮ್ಯುನಿಸ್ಟರು ಮಹಿಳಾ ಕಾರ್ಮಿಕರ ಹಕ್ಕುಗಳನ್ನು ಪ್ರತಿಪಾದಿಸಿದರು ಮತ್ತು ಅವರ ಸಮಾನತೆಯನ್ನು ಸಮರ್ಥಿಸಿದರು. ಮೀರತ್ ಪಿತೂರಿ ಪ್ರಕರಣದಲ್ಲಿ ಆರೋಪಿಗಳಾದ ಕಮ್ಯುನಿಸ್ಟರ ಸಾಮೂಹಿಕ ಹೇಳಿಕೆಯಲ್ಲಿ, ಅವರು ಸ್ಪಷ್ಟವಾಗಿ "ಮಹಿಳೆಯರನ್ನು ಅಧೀನಗೊಳಿಸುವುದು ಮತ್ತು ಶೋಷಣೆ ಮಾಡುವುದು ಅಧೀನತೆ ಮತ್ತು ಶೋಷಣೆಯ ಒಂದು ಅಂಶವಾಗಿದೆ ಮಾತ್ರ . ಇದನ್ನು ವರ್ಗಾಧಾರದಲ್ಲಿ ಪರಿಹರಿಸಬೇಕು, ಲಿಂಗ ಆಧಾರದಲ್ಲಲ್ಲ..."ಹೇಳಲಾಗಿತ್ತು. ಸಮಾನ ಕೆಲಸಕ್ಕೆ ಸಮಾನ ವೇತನ, ನಾಲ್ಕು ತಿಂಗಳವರೆಗೆ ಸಂಪೂರ್ಣ ವೇತನದೊಂದಿಗೆ ಮಾತೃತ್ವ ರಜೆ ಒದಗಿಸುವುದು, ಕೆಲಸದ ಸ್ಥಳಗಳಲ್ಲಿ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸುವುದು ಮತ್ತು ಬಾಣಂತಿ ತಾಯಂದಿರಿಗೆ ಕೆಲಸದ ದಿನದ ಅವಧಿಯನ್ನು ಕಡಿಮೆ ಮಾಡಲು ಮೊದಲಿಗೆ ಬೇಡಿಕೆ ಇಟ್ಟಿದ್ದು ಕಮ್ಯುನಿಸ್ಟರು.

ಕಮ್ಯುನಿಸ್ಟ್ ಪಕ್ಷವು ಕಡ್ಡಾಯ ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ಮತ್ತು ಮಧ್ಯವರ್ತಿ ವ್ಯಕ್ತಿಗಳ ಮೂಲಕ ಕೆಲಸಗಾರರನ್ನು ನೇಮಿಸಿಕೊಳ್ಳುವ ವ್ಯವಸ್ಥೆಯನ್ನು ಸಂಪೂರ್ಣವಾಗಿ ರದ್ದುಪಡಿಸಬೇಕೆಂದು ಒತ್ತಾಯಿಸಿತು. ಕಾರ್ಮಿಕರ ನೇಮಕಾತಿ ಮತ್ತು ವಜಾಗೊಳಿಸುವಿಕೆಯನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ನಿಯಂತ್ರಿಸಬೇಕು ಮತ್ತು ಕಾರ್ಮಿಕ ಸಂಘಗಳ ಮೇಲ್ವಿಚಾರಣೆಯಲ್ಲಿ ನಡೆಸಬೇಕು ಎಂದು ಅದು ಒತ್ತಾಯಿಸಿತು. 'ಕಾರ್ಯಾಚರಣೆಯ ವೇದಿಕೆ'ಯ ಕಾರ್ಯಕ್ರಮದ ಕರಡು (ಡ್ರಾಫ್ಟ್ ಪ್ಲಾಟ್‌ಫಾರ್ಮ್ ಆಫ್ ಆಕ್ಷನ್) (1931) ನಂದಲೇ, ಕಮ್ಯುನಿಸ್ಟ್ ಪಕ್ಷವು ನಿರಂತರವಾಗಿ 'ವಾಕ್-ಸ್ವಾತಂತ್ರ್ಯ, ಆತ್ಮಸಾಕ್ಷಿಯ-ಸ್ವಾತಂತ್ರ್ಯ,, ಪತ್ರಿಕಾ, ಸಭೆಗಳು, ಮುಷ್ಕರಗಳು ಮತ್ತು ದುಡಿಯುವ ಜನರಿಗೆ ಸಂಘಗಳನ್ನು ರಚಿಸುವ ಸ್ವಾತಂತ್ರ್ಯಕ್ಕಾಗಿ ಮತ್ತು ಎಲ್ಲಾ ಜನ-ವಿರೋಧಿ ಮತ್ತು ಕಾರ್ಮಿಕ ವಿರೋಧಿ ಕಾನೂನುಗಳನ್ನು (ಕೈಗಾರಿಕೆ ವಿವಾದ ಕಾಯ್ದೆ, ಪಿಕೆಟಿಂಗ್ ನಿಷೇಧ, ಕ್ರಾಂತಿಕಾರಿ ಕಾರ್ಮಿಕರನ್ನು ಗಡೀಪಾರು ಮಾಡುವ ನಿಯಮಗಳು, ಪತ್ರಿಕಾ ಕಾಯ್ದೆಗಳು ಇತ್ಯಾದಿ) ರದ್ದುಗೊಳಿಸುವಂತೆ ಒತ್ತಾಯಿಸಿತು.

ಕಾರ್ಮಿಕ ವರ್ಗದ ಹೋರಾಟಗಳ ಒತ್ತಡಕ್ಕೆ ಮಣಿದು, ಕಾಂಗ್ರೆಸ್ ಪಕ್ಷವು 1930 ರ ದಶಕದಿಂದ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಈ ಮೇಲಿನ ಹಲವು ಬೇಡಿಕೆಗಳನ್ನು ಸೇರಿಸಬೇಕಾಗಿ ಬಂತು.

ಪುಟ 11 ನೋಡಿ

# ಸಾಮಾಜಿಕ ನ್ಯಾಯಕ್ಕಾಗಿ ಹೋರಾಟದಲ್ಲಿ ಕಮ್ಯೂನಿಸ್ಟರು

**ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಜಾತಿ ತಾರತಮ್ಯ ಮತ್ತು ಸಾಮಾಜಿಕ ದಬ್ಬಾಳಿಕೆಯ ಪ್ರಶ್ನೆ ಕುರಿತಂತೆ, ರಾಜಕೀಯ ಶಕ್ತಿಗಳಲ್ಲಿ ನಾಲ್ಕು ಮುಖ್ಯ ದೃಷ್ಟಿಕೋನಗಳು ಇದ್ದವು. .. .. ಕಮ್ಯೂನಿಸ್ಟ್ ಪಕ್ಷ ಮಾತ್ರ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವುದನ್ನು ತನ್ನ ಉದ್ದೇಶವೆಂದು ಘೋಷಿಸಿದ್ದು ಮಾತ್ರವಲ್ಲದೆ, ಅದರ ಸಾಧನೆಗೆ ಸರಿಯಾದ ಮಾರ್ಗವನ್ನು ತೋರಿಸಿತು.. .. ತಕ್ಷಣದ ಪರಿಹಾರಕ್ಕಾಗಿ ಹೋರಾಟದ ಜೊತೆಗೆ ಜಾತಿಯ ವಿರುದ್ಧದ ಮತ್ತು ಜಾತಿ ತಾರತಮ್ಯ ಮತ್ತು ದಬ್ಬಾಳಿಕೆಯ ಸ್ವರೂಪಗಳ ವಿರುದ್ಧ ಸೈದ್ಧಾಂತಿಕ ಹೋರಾಟಗಳನ್ನು ಏಕಕಾಲದಲ್ಲಿ ನಡೆಸಬೇಕು ಎಂದು ಕಮ್ಯೂನಿಸ್ಟ್ ಪಕ್ಷ ಅಭಿಪ್ರಾಯಪಟ್ಟಿದೆ. ಆದಾಗ್ಯೂ, ಈ ಹೋರಾಟಗಳು ಸಾಕಾಗುವುದಿಲ್ಲ, ಇದರೊಂದಿಗೆ ಭೂಮಾಲೀಕರು ಮತ್ತು ಮೇಲ್ಜಾತಿಗಳ ಊಳಿಗಮಾನ್ಯ ಶೋಷಣೆ ಮತ್ತು ಈ ಸಾಮರ್ಥ್ಯದ ಮೂಲವಾದ ಭೂಒಡೆತನದ ಸಾಂದ್ರತೆಯ ವಿರುದ್ಧದ ಹೋರಾಟದೊಂದಿಗೆ ಇದನ್ನು ಸಂಯೋಜಿಸಬೇಕು ಎಂದು ಪಕ್ಷವು ಘೋಷಿಸಿತ್ತು, ಕಮ್ಯೂನಿಸ್ಟ್ ಚಳವಳಿಯ ಇತಿಹಾಸವನ್ನು ಅಧ್ಯಯನ ಮಾಡುವ ಮೂಲಕ ಕಮ್ಯೂನಿಸ್ಟರು ಈ ಮೂಲ ಉದ್ದೇಶಗಳನ್ನು ಸಾಕಾರಗೊಳಿಸಲು ಎಷ್ಟು ಶ್ರಮಿಸಿದರು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬಹುದು.**

**ಬಿ.ವಿ.ರಾಘವುಲು (ಕನ್ನಡಕ್ಕೆ : ನಾಗರಾಜ ನಂಜುಂಡಯ್ಯ)**

ಸಾಮಾಜಿಕ ನ್ಯಾಯಕ್ಕಾಗಿ ಹೋರಾಟವು, ಆರಂಭಿಕ ದಿನಗಳಿಂದ ಯಾವಾಗಲೂ ಕಮ್ಯೂನಿಸ್ಟರ ಕ್ರಾಂತಿಕಾರಿ ಹೋರಾಟದ ಅವಿಭಾಜ್ಯ ಅಂಗವಾಗಿತ್ತು. ಕಮ್ಯೂನಿಸ್ಟ್ ಚಳವಳಿಯ ಕಳೆದ ನೂರು ವರ್ಷಗಳ ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದಾಗ, ಕಮ್ಯೂನಿಸ್ಟ್ ಚಳುವಳಿಯ ನೀತಿ ಮತ್ತು ಆಚರಣೆ ಎರಡೂ ಈ ಅಂಶವನ್ನು ಸಮರ್ಥಿಸುತ್ತದೆ. ಸೈದ್ಧಾಂತಿಕ ವಿಚಲನಗಳು ಮತ್ತು, ಆಳುವ ವರ್ಗಗಳ ದಬ್ಬಾಳಿಕೆ ಕಮ್ಯೂನಿಸ್ಟ್ ಚಳವಳಿಯ ಕಮ್ಯುನಿಸ್ಟರ ಕೆಲಸಗಳಲ್ಲಿ ಹಲವು ಏರಿಳಿತಗಳಿಗೆ ಕಾರಣವಾಯಿತು. ಅದೇ ರೀತಿಯಲ್ಲಿ ಸಾಮಾಜಿಕ ನ್ಯಾಯದ ಹೋರಾಟದಲ್ಲಿ ಸಹಾ ಅನೇಕ ಏರಿಳಿತಗಳು ಕಂಡು ಬಂದವು.

ಈ ಎಲ್ಲಾ ಅಂಶಗಳ ಹೊರತಾಗಿಯೂ, ಸಾಮಾಜಿಕ ದಬ್ಬಾಳಿಕೆಯ ವಿರುದ್ಧದ ಹೋರಾಟದಲ್ಲಿ ಕಮ್ಯೂನಿಸ್ಟರ ಪಾಲ್ಗೊಳ್ಳುವಿಕೆಯನ್ನು ಕಡಿಮೆ ಎಂದು ಭಾವಿಸಲಾಗದು ಮತ್ತು ಅದು ಬೇರೆಯವರಿಗಿಂತ ಕಡಿಮೆ ಸಾಧನೆಯೇನಲ್ಲ ಎಂದು ಸಮರ್ಥನೀಯವಾಗಿ ದಾಖಲಿಸಬಹುದು. ಈ ಕುರಿತು ಇಎಂಎಸ್ ನಂಬೂದಿರಿಪಾಡ್ ಹೀಗೆ ಹೇಳಿದ್ದಾರೆ: "ಸಮಾಜವಾದಿ ಕಮ್ಯೂನಿಸ್ಟ್ ಚಳವಳಿಯ ಆರಂಭಿಕ ದಿನಗಳಲ್ಲಿ (ಕೇರಳದಲ್ಲಿ), ಸಮಾಜವಾದಿಗಳು ಮತ್ತು ಕಮ್ಯೂನಿಸ್ಟರು ಸವರ್ಣೀಯ ಹಿಂದೂಗಳ ವಿರುದ್ಧ ತುಳಿತಕ್ಕೆ ಒಳಗಾದ ಹಿಂದೂ ಜಾತಿಗಳು ಮತ್ತು ಮುಸ್ಲಿಂ ಮತ್ತು ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಪ್ರಜಾಪ್ರಭುತ್ವದ ಆಕಾಂಕ್ಷೆಗಳನ್ನು ಎತ್ತಿ ಹಿಡಿಯಲು ಹೋರಾಡಿದರು. ಎಡಪಂಥೀಯರನ್ನು, ಜಾತಿ ಮತ್ತು ಕೋಮು ವಿಭಜನೆಯ ವಿರುದ್ಧದ ದೃಡನಿಶ್ಚಯದ ಹೋರಾಟಗಾರರು ಮತ್ತು ಪ್ರಜಾಸತ್ತಾತ್ಮಕ ಚಳವಳಿಯ ಮಜಬೂತಾದ ಆಸ್ತಿ ಎಂದು ಕಾಣಲಾಯಿತು."

ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಜಾತಿ ತಾರತಮ್ಯ ಮತ್ತು ಸಾಮಾಜಿಕ ದಬ್ಬಾಳಿಕೆಯ ಪ್ರಶ್ನೆ ಕುರಿತಂತೆ, ರಾಜಕೀಯ ಶಕ್ತಿಗಳಲ್ಲಿ ನಾಲ್ಕು ಮುಖ್ಯ ದೃಷ್ಟಿಕೋನಗಳು ಇದ್ದವು. ಆರ್.ಎಸ್.ಎಸ್ ಕಟುವಾದ ಊಳಿಗಮಾನ್ಯ ಪ್ರತಿಕ್ರಿಯೆಯ ಪ್ರತಿನಿಧಿಯಾಗಿತ್ತು. ಮನು ಧರ್ಮಶಾಸ್ತ್ರವು ಅದರ ಮಾರ್ಗದರ್ಶಿ ತತ್ವಶಾಸ್ತ್ರವಾಗಿತ್ತು. ಜಾತಿ ವ್ಯವಸ್ಥೆಯನ್ನು 'ಪ್ರಾಚೀನ ಭಾರತದ ಸುವರ್ಣಯುಗ'ದಿಂದ ಮುಂದುವರೆದಿರುವ ಒಂದು ಮಹತ್ತಾದ ಸಾಮಾಜಿಕ ವ್ಯವಸ್ಥೆ ಎಂದು ಆರ್.ಎಸ್.ಎಸ್ ಪರಿಗಣಿಸಿತ್ತು. ಆದ್ದರಿಂದ, ಸಾಮಾಜಿಕ ಸುಧಾರಣೆಯ ಯಾವುದೇ ಹೋರಾಟಕ್ಕೆ ಆರ್.ಎಸ್.ಎಸ್ ವಿರುದ್ಧವಾಗಿತ್ತು ಸ್ವಾತಂತ್ರ್ಯದ ನಂತರವೂ, ಆರ್.ಎಸ್.ಎಸ್ ಮತ್ತು ಅದರ ರಾಜಕೀಯ ಅಂಗಗಳು, ಹಿಂದಿನ ಜನ ಸಂಘ ಮತ್ತು ನಂತರದ, ಈಗಿನ ಬಿಜೆಪಿ, ಮೂಲಭೂತವಾಗಿ ಅದೇ ಮನು ಧರ್ಮವನ್ನು, ಅದರ ಉದ್ದೇಶಗಳಿಗೆ ಅನುಗುಣವಾಗಿ ಸಾಮಾಜಿಕ ಎಂಜಿನಿಯರಿಂಗ್ ಜೊತೆಗೆ, ಅನುಸರಿಸುತ್ತಿದೆ.

ರಾಷ್ಟ್ರೀಯ ಚಳವಳಿಯ ಮುಖ್ಯವಾಹಿನಿಯ ಮುಖ್ಯಸ್ಥರಾದ ಗಾಂಧೀಜಿಯವರು ನಾಲ್ಕು ವರ್ಣಗಳ ವ್ಯವಸ್ಥೆ (ಚಾತುರ್ವರ್ಣ ವ್ಯವಸ್ಥೆ) ಯನ್ನು ಮೆಚ್ಚಿಕೊಂಡಿದ್ದರು. ಆದಾಗ್ಯೂ, ಅವರು ಅಸ್ಪೃಶ್ಯತೆ ಮತ್ತು ಅಂತಹ ಇತರ ಪ್ರತಿಗಾಮಿ ಲಕ್ಷಣಗಳಿಗೆ ವಿರುದ್ಧವಾಗಿದ್ದರು. ಅಸ್ಪೃಶ್ಯತೆಯ ನಿರ್ಮೂಲನಕ್ಕೆ ರಚನಾತ್ಮಕ ಚಟುವಟಿಕೆಯನ್ನು ಸ್ವಾತಂತ್ರ್ಯ ಹೋರಾಟದೊಂದಿಗೆ ಜೋಡಿಸಲು ಅವರು ಶ್ರಮಿಸಿದರು. ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಹಂಬಲಕ್ಕಿಂತ ಹೆಚ್ಚಾಗಿ, ಕೆಳಜಾತಿಯ ಜನರನ್ನು ಸ್ವಾತಂತ್ರ್ಯ ಹೋರಾಟದ ಭಾಗವಾಗಿಸುವ ಬಯಕೆ ಕಾಂಗ್ರೆಸ್ ತಿಳುವಳಿಕೆಯ ಭಾಗವಾಗಿತ್ತು. ಸ್ವಾತಂತ್ರ್ಯದ ನಂತರವೂ ಕೂಡಾ, ಆಳುವ ವರ್ಗಗಳಲ್ಲಿ ಇಂತಹದ್ದೇ ತಿಳುವಳಿಕೆ ಇನ್ನೂ ಚಾಲ್ತಿಯಲ್ಲಿದೆ. ಆದ್ದರಿಂದ, ಜಾತಿ ದಬ್ಬಾಳಿಕೆಯನ್ನು ತೊಡೆದು ಹಾಕುವ ಬದಲು, ಈ ಜಾತಿಗಳಿಗೆ ಮೀಸಲಾತಿ ಮತ್ತು ಪ್ರಾತಿನಿಧ್ಯವನ್ನು ಮಾತ್ರ ಕೊಡುವುದಾಗಿ ಹೇಳುತ್ತಾ, ಈ ಜಾತಿಗಳಲ್ಲೂ ಮಧ್ಯಮ ವರ್ಗವನ್ನು ಸೃಷ್ಟಿಸುವಲ್ಲಿ ನಿರತರಾಗಿದ್ದಾರೆ.

ಡಾ. ಬಾಬಾಸಾಹೇಬ್ ಬಿ ಆರ್ ಅಂಬೇಡ್ಕರ್ ಅವರು ಈ ನಿಟ್ಟಿನಲ್ಲಿ ಅತ್ಯಂತ ಆಮೂಲಾಗ್ರ ಬದಲಾವಣೆಯ ಪ್ರವೃತ್ತಿಯನ್ನು ಪ್ರತಿನಿಧಿಸಿದರು. ಜಾತಿ ವ್ಯವಸ್ಥೆಯಲ್ಲಿನ ಸಮಾಜದಲ್ಲಿ, ಸ್ವಾತಂತ್ರ್ಯ ಮತ್ತು ಸಮಾನತೆಗಳು ಸಾಧ್ಯವಿಲ್ಲ ಎಂದು ಅವರು ಒತ್ತಿ ಹೇಳಿದ್ದಾರೆ. ಆದ್ದರಿಂದಲೇ, ಜಾತಿವಿನಾಶವೇ ಅವರ ಘೋಷಿತ ಉದ್ದೇಶವಾಗಿತ್ತು. ಹೀಗಾಗಿಯೇ, ಅವರು ದಲಿತರ ಮೇಲೆ ನಡೆಯುವ ಅಸ್ಪೃಶ್ಯತೆಯ ವಿರುದ್ಧದ ಹೋರಾಟವನ್ನು ಪ್ರಾರಂಭಿಸಿದರು. ಅವರ ಉದ್ದೇಶಗಳು ಬಹಳ ಆಮೂಲಾಗ್ರವಾಗಿದ್ದವು. ಆದರೆ, ಅವರು ಆಯ್ಕೆ ಮಾಡಿದ ಮಾರ್ಗ ಮಾತ್ರ – ಮೀಸಲಾತಿ, ಪ್ರಾತಿನಿಧ್ಯ ಮತ್ತು ಮತಾಂತರಗಳಿಗೆ – ಸೀಮಿತಗೊಂಡವು. ಜಾತಿವಿನಾಶದಲ್ಲಿ ಇವೆಲ್ಲಾ ಮಾರ್ಗಗಳು ಸಂಪೂರ್ಣ ವಿಫಲವಾಗಿವೆ ಎಂಬುದು ಇದುವರೆಗಿನ ವಾಸ್ತವತೆ. ಅವರ ಪರಂಪರೆಯನ್ನು ಮುಂದಕ್ಕೊಯ್ಯುವ ಅನುಯಾಯಿಗಳೆಂದು ಹೇಳಿಕೊಳ್ಳುವ ಅನೇಕರು, ಅಂಬೇಡ್ಕರ್ ಅವರ ಆಮೂಲಾಗ್ರ ಬದಲಾವಣೆಯ ಪ್ರವೃತ್ತಿಯನ್ನು ಮುಂದಕ್ಕೆ ಕೊಂಡೊಯ್ಯುತ್ತಿಲ್ಲ. ಬದಲಿಗೆ, ಆಳುವ ವರ್ಗದ ಪಕ್ಷಗಳು ಪ್ರಸ್ತಾಪಿಸಿದ ಉದಾರವಾದಿ ಪರಿಹಾರಗಳಿಗೆ ಮಾತ್ರ ತಮ್ಮನ್ನು ಇವರುಗಳು ಸೀಮಿತಗೊಳಿಸಿಕೊಂಡಿದ್ದಾರೆ.

ಕಮ್ಯೂನಿಸ್ಟ್ ಪಕ್ಷ ಮಾತ್ರ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವುದನ್ನು ತನ್ನ ಉದ್ದೇಶವೆಂದು ಘೋಷಿಸಿದ್ದು ಮಾತ್ರವಲ್ಲದೆ, ಅದರ ಸಾಧನೆಗೆ ಸರಿಯಾದ ಮಾರ್ಗವನ್ನು ತೋರಿಸಿತು. ಈ ನೂರು ವರ್ಷಗಳಲ್ಲಿ, ಈ ಉದ್ದೇಶವನ್ನು ಸಾಧಿಸಲು ಕಮ್ಯೂನಿಸ್ಟರು ತಮ್ಮ ಅತ್ಯುತ್ತಮ ಗರಿಷ್ಠ ಪ್ರಯತ್ನಗಳನ್ನು ಮಾಡಿದರು. ತಕ್ಷಣದ ಪರಿಹಾರಕ್ಕಾಗಿ ಹೋರಾಟದ ಜೊತೆಗೆ ಜಾತಿಯ ವಿರುದ್ಧದ ಮತ್ತು ಜಾತಿ ತಾರತಮ್ಯ ಮತ್ತು ದಬ್ಬಾಳಿಕೆಯ ಸ್ವರೂಪಗಳ ವಿರುದ್ಧ ಸೈದ್ಧಾಂತಿಕ ಹೋರಾಟಗಳನ್ನು ಏಕಕಾಲದಲ್ಲಿ ನಡೆಸಬೇಕು ಎಂದು ಕಮ್ಯೂನಿಸ್ಟ್ ಪಕ್ಷ ಅಭಿಪ್ರಾಯಪಟ್ಟಿದೆ. ಆದಾಗ್ಯೂ, ಈ ಹೋರಾಟಗಳು ಸಾಕಾಗುವುದಿಲ್ಲ, ಇದರೊಂದಿಗೆ ಭೂಮಾಲೀಕರು ಮತ್ತು ಮೇಲ್ಜಾತಿಗಳ ಊಳಿಗಮಾನ್ಯ ಶೋಷಣೆ ಮತ್ತು ಈ ಸಾಮಾರ್ಥ್ಯದ ಮೂಲವಾದ ಭೂಒಡೆತನದ ಸಾಂದ್ರತೆಯ ವಿರುದ್ಧದ ಹೋರಾಟದೊಂದಿಗೆ ಇದನ್ನು ಸಂಯೋಜಿಸಬೇಕು ಎಂದು ಪಕ್ಷವು ಘೋಷಿಸಿತ್ತು, ಕಮ್ಯೂನಿಸ್ಟ್ ಚಳವಳಿಯ ಇತಿಹಾಸವನ್ನು ಅಧ್ಯಯನ ಮಾಡುವ ಮೂಲಕ ಕಮ್ಯೂನಿಸ್ಟರು ಈ ಮೂಲ ಉದ್ದೇಶಗಳನ್ನು ಸಾಕಾರಗೊಳಿಸಲು ಎಷ್ಟು ಶ್ರಮಿಸಿದರು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬಹುದು.

ಕಮ್ಯೂನಿಸ್ಟ್ ಪಕ್ಷದ ಮೊದಲ ಕಾರ್ಯಕ್ರಮವೆಂದು ಪರಿಗಣಿಸಲಾದ 'ಕಾರ್ಯಾಚರಣೆಯ ಮೊದಲ ಕರಡು' (1930) ರಲ್ಲಿ "ಭಾರತದ ಕಮ್ಯೂನಿಸ್ಟ್ ಪಕ್ಷವು, ಗುಲಾಮಗಿರಿ, ಜಾತಿ ವ್ಯವಸ್ಥೆ ಮತ್ತು ಜಾತಿ ಅಸಮಾನತೆಯನ್ನು ಅದರ ಎಲ್ಲ (ಸಾಮಾಜಿಕ, ಸಾಂಸ್ಕೃತಿಕ, ಇತ್ಯಾದಿ). ರೂಪಗಳಲ್ಲಿ ಸಂಪೂರ್ಣವಾಗಿ ರದ್ದುಗೊಳಿಸಲು ಹೋರಾಡುತ್ತದ: ಭಾರತದ ಕಮ್ಯೂನಿಸ್ಟ್ ಪಕ್ಷವು, ದುಡಿಯುವ ಅಸ್ಪೃಶ್ಯರು ಮತ್ತು ನಮ್ಮ ದೇಶದ ಎಲ್ಲಾ ಶ್ರಮಿಕರ ಸಂಪೂರ್ಣ ಸಮಾನತೆಗಾಗಿ ಹೋರಾಡುತ್ತದೆ" ಎಂದು ಸ್ಪಷ್ಟವಾಗಿ ಪ್ರಸ್ತಾಪಿಸಿದೆ.

ಮೀರತ್ ಪಿತೂರಿ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಕಮ್ಯೂನಸ್ಟರನ್ನು. ಕೋರ್ಟಿಗೆ ಸಲ್ಲಿಸಿದ ತಮ್ಮ ಸಾಮಾನ್ಯ ಹೇಳಿಕೆಯಲ್ಲಿ ಜಾತಿ ವ್ಯವಸ್ಥೆಯನ್ನು ಖಂಡಿಸಿದ್ದರು. ನಮ್ಮ ಹಳ್ಳಿಗಳಲ್ಲಿ ಜಾತಿ ವ್ಯವಸ್ಥೆಯು ತನ್ನ ಪ್ರಾಬಲ್ಯವನ್ನು ಹೇಗೆ ಸ್ಥಾಪಿಸಿದೆ ಎಂದು ಅವರು ವಿವರಿಸಿದರು. ಜಾತಿ ನಮೂರ್ಲನೆಗೆ ಕಾರ್ಷಕ ಕ್ರಾಂತಿಯ ಅವಶ್ಯಕತೆಯ ಬಗ್ಗೆ ಅವರು ಮಾತನಾಡಿದರು. ಆಗಲೇ ಸಮಾಜವಾದ ಮತ್ತು ಕಮ್ಯೂನಿಸಂ ಕಡೆಗೆ ಆಕರ್ಷಿತರಾಗಿದ್ದ ಭಗತ್ ಸಿಂಗ್ ಅವರು ಅಸ್ಪೃಶ್ಯತೆ ಮತ್ತು ಜಾತಿ ವ್ಯವಸ್ಥೆಯನ್ನು ನಮೂರ್ಲನೆ ಮಾಡುವ ಅಗತ್ಯತೆಯ ಬಗ್ಗೆ 1929 ರಲ್ಲಿ ಪ್ರಬಂಧ ಬರೆದಿದ್ದಾರೆ. ಆ ಅವಧಿಯಲ್ಲಿ ಚರ್ಚೆಯಾಗುತ್ತಿದ್ದ ದಲಿತರಿಗಾಗಿ ಪ್ರತ್ಯೇಕ ಕ್ಷೇತ್ರಗಳ ಪ್ರಸ್ತಾವವನ್ನು ಅವರು ಬೆಂಬಲಿಸಿದರು.

ಸಾಮಾಜಿಕ ಸುಧಾರಣಾ ಚಳುವಳಿಗಳು ಯಾವಾಗಲೂ ಕಮ್ಯೂನಿಸ್ಟರ ದೈನಂದಿನ ಚಟುವಟಿಕೆಗಳ ಭಾಗವಾಗಿತ್ತು. ಜಾತಿ ಮತ್ತು ಲಿಂಗ ತಾರತಮ್ಯದ ವಿರುದ್ಧದ ಹೋರಾಟವು ಅವರ ಎಲ್ಲಾ ಹೋರಾಟಗಳ ಭಾಗವಾಗಿತ್ತು. ಆಂಧ್ರಪ್ರದೇಶದ ಕಾಮ್ರೇಡ್ಸ್ ಪಿ ಸುಂದರಯ್ಯ, ಮತ್ತು ಕೇರಳದ ಎಕೆ ಗೋಪಾಲನ್, ಕೃಷ್ಣಪಿಳ್ಳೈ ಮತ್ತು ಇಎಂಎಸ್ ನಂಬೂದಿರಿಪಾಡ್, ತಮಿಳನಾಡಿನ ಪಿ ರಾಮಮೂರ್ತಿ, ಜೀವಾನಂದಮ್ ಮತ್ತು ಶ್ರೀನವಾಸ ರಾವ್, ಹಾಗೆಯೇ ಮಹಾರಾಷ್ಟ್ರ ದ ಎಸ್.ವಿ.ಪರುಲೇಕರ್, ಬಿ.ಟಿ.ರಣದಿವೆ ಮತ್ತು ಆರ್.ಸಿ.ಮೋರೆ, ಈ ನಾಯಕರು ಮಾತ್ರವಲ್ಲ, ಈ ಅವಧಿಯ ಬಹುತೇಕ ಎಲ್ಲ ಕಮ್ಯೂನಿಸ್ಟರ ಜೀವನವು ಜಾತಿ ತಾರತಮ್ಯ ಮತ್ತು ಸಾಮಾಜಿಕ ಅಸಮಾನತೆಯ ವಿರುದ್ಧದ ಅಗ್ರಗಣ್ಯ ಹೋರಾಟದೊಂದಿಗೆ ಹೆಣೆದುಕೊಂಡಿದೆ. ಮಹಿಳೆಯರ ತಾರತಮ್ಯ, ಜಾತಿ ವ್ಯವಸ್ಥೆಗಳ ವಿರುದ್ಧ ಮತ್ತು ಸಾಮಾಜಿಕ ಸುಧಾರಣೆಯ ಹೋರಾಟದಿಂದ ಪ್ರಾರಂಭವಾದ ಅವರ ರಾಜಕೀಯ ಪ್ರಯಾಣದ ಹಾದಿಯಲ್ಲಿ, ಅವರು ಅಂತಹ ಹೋರಾಟಗಳ ಮಿತಿಗಳನ್ನು ಅರ್ಥಮಾಡಿಕೊಂಡು ಸಮಾಜವಾದದ ಕಡೆಗೆ ತಿರುಗಿ ಇವರೆಲ್ಲರು ಕಮ್ಯುನಿಸ್ಟರಾದವರು ಎಂದು ಗಮನಸಬೇಕು.

ಕಮ್ಯೂನಸ್ಟ್ ಪಕ್ಷವು ತನ್ನ ವಿವಿಧ ಕಾಂಗ್ರೆಸ್ ಅಧಿವೇಶನಗಳಲ್ಲಿ ಅಂಗೀಕರಿಸಿದ ವಿವಿಧ ನರ್ಣಯಗಳ ಆಯ್ದ ಭಾಗಗಳು ಸಾಮಾಜಿಕ ಸುಧಾರಣೆಗೆ ಕಮ್ಯೂನಿಸ್ಟರು ಎಷ್ಟು ವಿಸ್ತೃತವಾಗಿ ಮತ್ತು ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂಬುದನ್ನು ತೋರಿಸುತ್ತದೆ.


ಆಂಧ್ರ ಪ್ರದೇಶದಲ್ಲಿ ಕಮ್ಯೂನಿಸ್ಟರು ಮಾಡಿದ ಕೆಲಸವನ್ನು ಪರಿಶೀಲಿಸಿದಾಗ, ಆ ಅವಧಿಯ ವರದಿಯು ಹೀಗೆ ಹೇಳುತ್ತದೆ: "ಇದು (ಕಮ್ಯುನಿಸ್ಟ್ ಪಕ್ಷ) ಅಸ್ಪೃಶ್ಯತೆಯ ದೆವ್ವದ ವಿರುದ್ಧ ಹೋರಾಡಿತ್ತು. ಪಕ್ಷದ ಸದಸ್ಯರು ಅಸ್ಪೃಶ್ಯರೊಂದಿಗೆ ಆಹಾರವನ್ನು ಹಂಚಿಕೊಂಡರು, ಅವರೊಂದಿಗೆ ವಾಸಿಸುತ್ತಿದ್ದರು ಮತ್ತು ಅವರ ದುಃಖ ಮತ್ತು ಸಂತೋಷಗಳನ್ನು ಹಂಚಿ ಕೊಂಡರು. ಇದಲ್ಲದೆ, ವರ್ಗ ಹೋರಾಟದ ಸ್ವರೂಪವು ಸ್ಪೃಶ್ಯ ಮತ್ತು ಅಸ್ಪೃಶ್ಯ ದುಡಿಯುವ ಜನರನ್ನು ಒಂದೇ ಸಂಘಟನೆಯ ಅಡಿಯಲ್ಲಿ ಏಕೀಕರಿಸಿದೆ. ಮದುವೆ ಸಮಾರಂಭಗಳನ್ನು ಸರಳೀಕರಿಸಲಾಯಿತು. ಅಂತರ್ಜಾತಿ ವಿವಾಹಗಳು ವ್ಯಾಪಕವಾಗಿ ಜನಪ್ರಿಯವಾಗಿದ್ದವು ಮತ್ತು ಇದರಲ್ಲಿ ಪಕ್ಷದ ಸದಸ್ಯರು ಯಾವಾಗಲೂ ಮುಂಚೂಣಿಯಲ್ಲಿದ್ದರು." ಆ ಅವಧಿಯಲ್ಲಿ ದೇಶಾದ್ಯಂತ ಇಂತಹ ರೀತಿಯ ಹಲವಾರು ಚಟುವಟಿಕೆಗಳನ್ನು ನಡೆಸಲಾಯಿತು.

ಜಾತಿ ಅಡೆತಡೆಗಳನ್ನು ನಿವಾರಿಸುವುದು ಮತ್ತು ಏಕತೆಯನ್ನು ಸ್ಥಾಪಿಸುವುದು ಆ ಅವಧಿಯಲ್ಲಿ ನಡೆಸಿದ ಎಲ್ಲಾ ಹೋರಾಟಗಳಲ್ಲಿ, ವಿಶೇಷವಾಗಿ ಕೃಷಿ ಹೋರಾಟಗಳಲ್ಲಿ ಒಂದು ಪ್ರಮುಖ ಅಂಶವಾಗಿತ್ತು. ಈ ಹೋರಾಟಗಳ ಅವಧಿಯಲ್ಲಿ ಉತ್ಪತ್ತಿಯಾದ ಸಾಹಿತ್ಯ, ಹಾಡುಗಳು ಮತ್ತು ಇತರ ಸಾಂಸ್ಕೃತಿಕ ಪ್ರಕಾರಗಳನ್ನು ವಿಶ್ಲೇಷಿಸಿದರೆ, ಜನರಲ್ಲಿ ಜಾತಿ ವಿರೋಧಿ ಪ್ರಜ್ಞೆಯನ್ನು ಹೇಗೆ ಸೃಷ್ಟಿಸಲಾಗಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬಹುದು.

ಅದ್ಭುತವಾದ ತೆಲಂಗಾಣ ಸಶಸ್ತ್ರ ಹೋರಾಟ, ಹಾಗೂ ಪುನ್ನಪ್ರ –ವಯಾಲಾರ್, ತೆಭಾಗ ಮುಂತಾದ ಕೃಷಿ ಹೋರಾಟಗಳ ಸಂದರ್ಭದಲ್ಲಿ ಜನರು ತಮ್ಮ ಜಾತಿಗಳನ್ನು ಲೆಕ್ಕಿಸದೆ ಒಗ್ಗೂಡಿ ಒಟ್ಟಾಗಿ ಹೋರಾಡಿದರು. ತೆಲಂಗಾಣ ಸಶಸ್ತ್ರ ಹೋರಾಟದ ಅನುಭವವು ಹೀಗೆ ತೋರಿಸುತ್ತದೆ: "ಜಾತಿ ತಾರತಮ್ಯ ಗಳು ಹಳ್ಳಿಗಳಲ್ಲಿ ಆಳವಾಗಿ ಬೇರೂರಿದ್ದವು. ಸರ್ಕಾರದ ವಿರುದ್ಧದ ಹೋರಾಟದಲ್ಲಿ, ಎಲ್ಲಾ ಜನರು ಜಾತಿ ಮತ್ತು ಧರ್ಮದ ಭೇದವಿಲ್ಲದೆ ಒಟ್ಟಾಗಿ ಕೆಲಸ ಮಾಡಲು ಮತ್ತು ಹೋರಾಡಲು ಒತ್ತಡವಿತ್ತು. ಇದರ ನಂತರ, ಅಸ್ಪೃಶ್ಯತೆಯ ಕೇಡಿನ ವಿರುದ್ಧ ಹೋರಾಡುವುದು ಸುಲಭವಾಯಿತು. ಗೆರಿಲ್ಲಾ ತಂಡಗಳಲ್ಲಿ, ಸಮಾನತೆ ಮತು ಪರಸರ

ಪುಟ 11 ನೋಡಿ

ತಮಿಳುನಾಡಿನ ಉತ್ತಂಪುರಂನಲ್ಲಿ 'ಅಸ್ಪೃಶ್ಯತಾ ಗೋಡೆ'ಯ ಬಳಿ ಪ್ರಕಾಶ ಕಾರಟ್ ಮತ್ತು ಸಿಪಿಐ(ಎಂ) ರಾಜ್ಯ ಮುಖಂಡರುಗಳು






ಮೀರತ್ ಕಮ್ಯುನಿಸ್ಟ್ ಪಿತೂರಿಗಾರರು!




ಹಸಿವಿನ ಜಾಥಾದಲ್ಲಿ ಜ್ಯೋತಿ ಬಸು – 1959, ಕಲ್ಕತ್ತಾ



7 ನೇ ಮಹಾಧಿವೇಶನದಲ್ಲಿ ಪಿ ಸುಂದರಯ್ಯ



ಜ್ಯೋತಿ ಬಸು, ಪ್ರಮೋದೆ ದಾಸಗುಪ್ತಾ, ಬಸವಪುನ್ನಯ್ಯ ಸಭೆಯೊಂದರಲ್ಲಿ




ಮಹಿಳಾ ಕಮ್ಯುನಿಸ್ಟ್ ನಾಯಕರು






ಸಿಐಟಿಯು ಮಹಾಪಡಾವ್



ರಾಜಸ್ತಾನದ ರೈತ ಮಹಿಳೆಯರು ಹೋರಾಟದಲ್ಲಿ



ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ನೇತಾಜಿಯೊಂದಿಗೆ



ಎಡ ಪಕ್ಷಗಳ ಬ್ರಿಗೇಡ್ ರ್ಯಾಲಿ – 2019

# ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ

## ಒಂದು ಸ್ಥೂಲ ಚಿತ್ರ

ಮಂಗಳೂರಿನಲ್ಲಿ 1935–36 ರಲ್ಲೇ ಕಾರ್ಮಿಕ ಚಳುವಳಿ ಆರಂಭವಾಗಿತ್ತು. ವಿವಿಧ ವಿಭಾಗದ ಕಾರ್ಮಿಕರ ಚಳುವಳಿಗಳನ್ನು ಒಗ್ಗೂಡಿಸಲು 1944 ರಲ್ಲಿ ದ.ಕ.ಜಿಲ್ಲಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಆರಂಭಿಸಲಾಯಿತು. 1945 ರಲ್ಲಿ ಬೋನಸ್ ಬೇಡಿಕೆಗಾಗಿ ಹೆಂಚಿನ ಕಾರ್ಮಿಕರ ಮುಷ್ಕರ ನಡೆಯಿತು. ಎರಡನೆ ಮುಷ್ಕರ 1947 ರಲ್ಲಿ 42 ದಿನಗಳ ಕಾಲ ನಡೆಯಿತು. 1946 ರಲ್ಲಿ 52 ದಿನಗಳ ಬೀಡಿ ಕಾರ್ಮಿಕರ ಜಂಟಿ ಮುಷ್ಕರ ನಡೆಯಿತು.

ಬಿಜಾಪುರದಲ್ಲಿ 1944 ರಲ್ಲಿ ಬೀಡಿ ಸಂಘಟನೆ ಆರಂಭವಾಯಿತು. 1948 ರಲ್ಲಿ ಮುನಿಸಿಪಲ್ ಕಾರ್ಮಿಕರು ನಡೆಸಿದ ಹೋರಾಟಕ್ಕೆ ಕಮ್ಯುನಿಸ್ಟರು ನಾಯಕತ್ವ ಕೊಟ್ಟರೆಂಬ ಕಾರಣಕ್ಕೆ ಭಾರತ ಸರ್ಕಾರ 200 ಜನರನ್ನು ಬಂಧಿಸಿ 23 ದಿನಗಳು ಜೈಲಿನಲ್ಲಿಟ್ಟಿತ್ತು. ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ವೇತನ ಹೆಚ್ಚಳ, ಸಾಮಾಜಿಕ ಭದ್ರತೆ, ಕೆಲಸದಲ್ಲಿ ಗೌರವ ಮತ್ತು ಕಾರ್ಮಿಕ ಸಂಘಗಳನ್ನು ಮಾನ್ಯ ಮಾಡುವ ಕಾನೂನು ಇಂತಹ ಪ್ರಶ್ನೆಗಳು ಮುಖ್ಯವಾಗಿದ್ದವು.

1936 ರಲ್ಲಿ ನಡೆದ **ಎಐಕೆಎಸ್** ಮೊದಲ ಸಮ್ಮೇಳನಕ್ಕೆ ಕರ್ನಾಟಕವನ್ನು ಪ್ರತಿನಿಧಿಸಿ ಕಾಂಗ್ರೆಸ್ ಸಮಾಜವಾದಿಗಳಾದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ನಾ.ಸು.ಹರ್ಡೀಕರ್ ಭಾಗವಹಿಸಿದ್ದರು. ಆದರೆ ಕರ್ನಾಟಕದಲ್ಲಿ ಇವರು ಕಿಸಾನ್ ಸಭಾವನ್ನು ಸಂಘಟಿಸಿದ್ದರ ಬಗ್ಗೆ ಮಾಹಿತಿಯಿಲ್ಲ.

ಕಿಸಾನ್ ಸಭಾ ಹೋರಾಟಗಳು ದಕ್ಷಿಣ ಕನ್ನಡ ಮತ್ತು ಬಾಂಬೆ ಕರ್ನಾಟಕದ ಹೆಚ್ಚಿನ ಜಿಲ್ಲೆಗಳಲ್ಲಿ ನಡೆದವು. ಉಲ್ಲೇಖಾರ್ಹ ಹೋರಾಟಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದವು. ಗೇಣಿ, ಗೇಣಿ ದರಗಳು, ಜಮೀನ್ದಾರರ ದೌರ್ಜನ್ಯಗಳು, ಕಿರುಕುಳಗಳು ಮತ್ತು ಸ್ವಲ್ಪ ಮಟ್ಟಿಗೆ ಭೂಮಿ ಪ್ರಶ್ನೆ ಅಂದಿನ ಪ್ರಮುಖ ಬೇಡಿಕೆಗಳಾಗಿದ್ದವು. ಕರ್ನಾಟಕದ **"ಮೊದಲ ಎಐಕೆಎಸ್ ಘಟಕ"**ವನ್ನು ಕಾರವಾರದ ಹಳಗಾ ಮತ್ತು ಉಳಗಾ ಗ್ರಾಮಗಳಲ್ಲಿ 1937 ರಲ್ಲಿ ಆರಂಭಿಸಲಾಯಿತು. ಕಮ್ಯುನಿಸ್ಟ್ ಪಕ್ಷದ ಸಂಘಟನಾ ತತ್ವವಾಗಿ 'ರೈತ–ಕಾರ್ಮಿಕ' ಸಖ್ಯತೆ ಪ್ರಶ್ನೆಯು ಸಣ್ಣ ಪ್ರಮಾಣದಲ್ಲಿ ಕೋಲಾರ ಜಿಲ್ಲೆ, ದಕ್ಷಿಣ ಕನ್ನಡ ಮತ್ತು ಬಿಜಾಪುರಗಳಲ್ಲಿ ಜಾರಿಗೊಂಡಿದ್ದನ್ನು ಕಾಣಬಹುದು.

ವಿದ್ಯಾರ್ಥಿ ಸಂಘಟನೆ ಎಐಎಸ್ಎಫ್ ಬಹುತೇಕ ಬೆಂಗಳೂರು, ಮೈಸೂರು ಮತ್ತು ಮಂಗಳೂರಿಗೆ ಸೀಮಿತವಾಗಿತ್ತು. 1939 ರಲ್ಲಿ **ಎಐಎಸ್ಎಫ್** ಮಂಗಳೂರಿನಲ್ಲಿ ಆರಂಭವಾಗಿತ್ತು. ಡಾ.ಬಿ.ಕೆ.ಕೃಷ್ಣ ಎಐಎಸ್ಎಫ್ ಕಟ್ಟಲು ಶ್ರಮಿಸುತ್ತಿದ್ದರು. ಎ.ರಾಘವನ್ ಮಂಗಳೂರು ಘಟಕದ ಕಾರ್ಯದರ್ಶಿಯಾಗಿದ್ದರು. ನಂತರ ಬಿ.ವಿ.ಕಕ್ಕಿಲ್ಲಾಯರು ಕಾರ್ಯದರ್ಶಿಯಾದರು. ಬ್ರಿಟಿಷ್ ಸಾಮ್ರಾಜ್ಯವಾದ, ಫ್ಯಾಸಿಸಂ ವಿರುದ್ಧ ಚಳುವಳಿಗಳನ್ನು ನಡೆಸಲಾಗುತ್ತಿತ್ತು.

ಕ್ವಿಟ್ ಇಂಡಿಯಾ, ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಎಐಎಸ್ಎಫ್ ಕ್ರಿಯಾಶೀಲವಾಗಿದ್ದನ್ನು ಗಮನಿಸಬಹುದು. ಮೈಸೂರು ಸಂಸ್ಥಾನದಲ್ಲಿ ಎಐಎಸ್ಎಫ್‌ಗೆ ಸೇರಿದ್ದ ಮೈಸೂರು ಸ್ಟೇಟ್ ಸ್ಟೂಡೆಂಟ್ಸ್ ಫೆಡರೇಷನ್ ಅಸ್ತಿತ್ವದಲ್ಲಿತ್ತು. ಸವಾಯ್ ಅಶ್ವಥ್ ರಾವ್ ಮೊದಲಿಗೆ ಇದರ ಕಾರ್ಯದರ್ಶಿಯಾಗಿದ್ದರು. ನಂತರ ಎಂ.ಎಸ್. ಕೃಷ್ಣನ್ ಕಾರ್ಯದರ್ಶಿಯಾಗಿದ್ದರು. ಇವರ ಗೆಳೆಯರಾದ ಎಸ್.ಸೂರ್ಯನಾರಾಯಣ ರಾವ್ ನಂತರ ಬೆಂಗಳೂರು ವಿದ್ಯಾರ್ಥಿ ಫೆಡರೇಷನ್ ಕಾರ್ಯದರ್ಶಿಯಾಗಿದ್ದರು. ಬ್ರಿಟಿಷರ ವಿರುದ್ಧ ವಿದ್ಯಾರ್ಥಿಗಳ ಅಣಿನೆರೆಸುವಿಕೆ, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯ ಪಾತ್ರ, ಜವಾಬ್ದಾರಿ ಸರ್ಕಾರಕ್ಕಾಗಿನ ಹೋರಾಟ, ರಾಷ್ಟ್ರೀಯ ನಾಯಕರ ಬಂಧನ ವಿರೋಧಿಸಿ ಪ್ರತಿಭಟನೆಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಿದ್ದವು.

**ಪ್ರಗತಿಪರ ಬರಹಗಾರರ ಸಂಘಟನೆ**ಯು ಪ್ರಭಾವಶಾಲಿಯಾಗಿ ಇರದಿದ್ದರೂ 1944 ರಲ್ಲಿ ಮ್ಯಾಕ್ಸಿಂ ಗಾರ್ಕಿ ಕುರಿತ ಬರಹಗಳು ಪ್ರಕಟವಾದವು ಮತ್ತು ಸಮಾಜವಾದಿ ಚಿಂತನೆಗಳು ಪ್ರಕಟಗೊಳ್ಳಲು ಆರಂಭಿಸಿದವು. ಮೈಸೂರು ಮತ್ತು ಬೆಂಗಳೂರಿನಲ್ಲಿ ಇಪ್ಟಾದ ಚಟುವಟಿಕೆಗಳು ನಡೆದವು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಿಪಿಐನ ಬದಲಾದ ನಿಲುವು ಅಲ್ಪ ಪ್ರಮಾಣದ ಅತೃಪ್ತಿಯನ್ನು ಉಂಟು ಮಾಡಿದ್ದು ನಿಜವಾದರೂ, ಜನಸಮೂಹಗಳ ನಡುವೆ ಕಮ್ಯುನಿಸ್ಟರು ಕ್ರಿಯಾಶೀಲರಾಗಿದ್ದರು. ಜಾಗತಿಕ ಪರಿಸ್ಥಿತಿಗಳ ಕಾರಣಕ್ಕೆ ಕೇಂದ್ರ ಮಟ್ಟದಲ್ಲಿ ತೆಗೆದುಕೊಂಡ ಭಿನ್ನ ಸೈದ್ಧಾಂತಿಕ ನಿಲುವು ಕರ್ನಾಟಕದ ಹೆಚ್ಚಿನ ಪ್ರದೇಶಗಳಲ್ಲಿ ಅದೇ ರೀತಿಯಲ್ಲಿ ಜಾರಿಗೊಂಡಿತು ಎಂದು ಹೇಳಲು ಸಾಧ್ಯವಿಲ್ಲ. ಹೀಗೆ ಒಟ್ಟಾರೆಯಾಗಿ ಗಮನಿಸಿದಾಗ ಚದುರಿದ ರೀತಿಯ ಕಮ್ಯುನಿಸ್ಟ್ ಕ್ರಿಯಾಶೀಲತೆ ಮತ್ತು ವಿಸ್ತರಣೆ ಈ ಅವಧಿಯ ಲಕ್ಷಣವಾಗಿ ಕಂಡುಬರುತ್ತದೆ.

**ಸ್ವಾತಂತ್ರ್ಯಾನಂತರದಲ್ಲಿ:**

ಬ್ರಿಟಿಷರಿಂದ ಹಸ್ತಾಂತರಗೊಂಡ ಸ್ವಾತಂತ್ರ್ಯವು ಭಾರತದಲ್ಲಿರುವ ಅವರ ಏಜೆಂಟರಿಗೆ ವರ್ಗಾವಣೆಗೊಂಡ ರಾಜಕೀಯ ಸ್ವಾತಂತ್ರ್ಯವೆಂದು ಸಿಪಿಐ ಮಾಡಿದ ಅಂದಾಜು, ಮತ್ತೆ ಅದನ್ನು ಬಿಕ್ಕಟ್ಟಿಗೆ ನೂಕುವುದರೊಂದಿಗೆ ಸ್ವಾತಂತ್ರೋತ್ತರ ಕಾಲಘಟ್ಟವು ಆರಂಭವಾಯಿತು. ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷ, ವ್ಯಾಪಕತೆಯಲ್ಲಿ ಸೀಮಿತವಾದರೂ, ರೂಪುಗೊಂಡಿದ್ದೇ ಅಖಿಲ ಭಾರತ ಮಟ್ಟದಲ್ಲಿ ಸಿಪಿಐ ಪ್ರಾರಂಭವಾದ ಸುಮಾರು ಎರಡು ದಶಕಗಳ ನಂತರ. ವಿಭಿನ್ನ ಪ್ರದೇಶಗಳ ಕೆಲವು ಕೇಂದ್ರಗಳಿಗೆ ಮಾತ್ರ ಸೀಮಿತವಾಗಿದ್ದ ಸಂಘಟನಾ ಜಾಲವನ್ನು ಅದು ಹೊಂದಿತ್ತು. ಅಂತಹ ಕೇಂದ್ರಗಳಲ್ಲಿ ಸ್ವಾತಂತ್ರ್ಯಾ ನಂತರ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಕಾಂಗ್ರೆಸ್ ನಂತರದ ಎರಡನೇ ಸ್ಥಾನ ಪಡೆದದ್ದು ರಾಜ್ಯದಲ್ಲಿ ಉತ್ಸಾಹವನ್ನು ಮೂಡಿಸಿತ್ತು. ಹೀಗಾಗಿ ಸಿಪಿಐನ ಕೇಂದ್ರ ಸಮಿತಿಯೊಳಗೆ ನಡೆಯುತ್ತಿದ್ದ ಸೈದ್ಧಾಂತಿಕ ಚರ್ಚೆಗಳು ಮತ್ತು ಅದರ ತೀವ್ರತೆ ಅದೇ ಪ್ರಮಾಣದಲ್ಲಿ ಕರ್ನಾಟಕದಲ್ಲಿ ನಡೆಯಲಿಲ್ಲ. ಆದರೆ ಸ್ವಾತಂತ್ರ್ಯಾ ನಂತರದ ಕರ್ನಾಟಕದ ಕಮ್ಯುನಿಸ್ಟ್ ಪಕ್ಷದ ಆರಂಭಿಕ ಹಂತವನ್ನು ಏರುಮುಖ ಚಟುವಟಿಕೆಗಳ ಮತ್ತು ಹೋರಾಟಗಳ ಬೆಳವಣಿಗೆಯಾಗಿಯೇ ನೋಡಬಹುದು.

ದಕ್ಷಿಣ ಕನ್ನಡದಲ್ಲಿ ಹಲವು ಸಂಘಟನೆಗಳು ಆರಂಭಗೊಂಡವು ಮತ್ತು ನಿರಂತರವಾದ ಚಳುವಳಿಗಳು ಬೆಳೆದವು. ಎಸ್.ಎನ್.ಹೊಳ್ಳರನ್ನು ಡಿಐಆರ್'ನಡಿ ಬಂಧಿಸಿ ಕಣ್ಣಾನೂರು ಜೈಲಿಗೆ ರೈಲಿನಲ್ಲಿ ಕರೆದುಕೊಂಡು ಹೋಗುವಾಗ ಅವರನ್ನು ಎಂ.ಹೆಚ್.ಕೃಷ್ಣಪ್ಪನವರ ಪಾತ್ರದಿಂದ ಸಿನಿಮೀಯ ಶೈಲಿಯಲ್ಲಿ ಜಿಗಿಸಿ ಪಾರು ಮಾಡಿದ ಘಟನೆಯ ನಂತರ ಅಪಾರ ದಾಳಿಗಳನ್ನು ಎದುರಿಸಬೇಕಾಯಿತು. ಕೋಲಾರ ಜಿಲ್ಲೆಯಾದ್ಯಂತ ಕಮ್ಯುನಿಸ್ಟ್ ಚಳುವಳಿ ವಿಸ್ತರಣೆಯಾಗಿ ಸವರಿದಾಸ್, ಬೈರಾರೆಡ್ಡಿ, ಆರ್. ವೆಂಕಟರಾಮಯ್ಯ, ಎಸ್.ಲಕ್ಷ್ಮಯ್ಯ, ಹೆಚ್.ಎಸ್. ರಾಮರಾವ್, ಅಬ್ದುಲ್ ಮಜೀದ್, ಟಿ.ಕೆ.ಗಂಗಿರೆಡ್ಡಿ, ಅಪ್ಪಸ್ವಾಮಿರೆಡ್ಡಿ ಮುಂತಾದವರನ್ನು ಒಳಗೊಂಡು 1952 ರಲ್ಲಿ ಸಿಪಿಐನ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು. ಆರ್.ವೆಂಕಟರಾಮಯ್ಯ ಮೊದಲ ಕಾರ್ಯದರ್ಶಿಯಾಗಿದ್ದರು. ಶಿವಮೊಗ್ಗದಲ್ಲಿ ಮೊದಲಿಗೆ ಎನ್.ಡಿ.ಶಂಕರ್ ಮೂಲಕ ಆರಂಭವಾಗಿ ನಂತರ ಚಂದು ಕುಟ್ಟಿ ಕಾರ್ಮಿಕರ ನಡುವೆ ಕೆಲಸ ಮಾಡಿದರೆ, ಅಪ್ಪಣ್ಣ ಹೆಗಡೆ, ಕೆ.ಎಂ.ಶ್ರೀನಿವಾಸ್, ಜಿ.ಎಸ್.ನಾಗರಾಜ್ ಮುಂತಾದವರು ಸೇರಿ ತೀರ್ಥಹಳ್ಳಿಯಲ್ಲಿ ಗೇಣಿದಾರರ ವ್ಯಾಪಕ ಚಳುವಳಿಗಳನ್ನು ರೂಪಿಸಿದರು. ತುಮಕೂರಿನಲ್ಲಿ ಮಹಮದ್ ದಸ್ತಗೀರ್ ಕುಣಿಗಲ್‌ನಲ್ಲಿ ಕೆ.ವಿ.ಕೃಷ್ಣಸ್ವಾಮಿಯವರ ಸಂಪರ್ಕದಿಂದ ಕಮ್ಯುನಿಸ್ಟ್

ಪುಟ 4 ರಿಂದ

ಪಕ್ಷ ಆರಂಭಿಸಿದರು. ಕುಣಿಗಲ್ ಸ್ಟಡ್ ಫಾರ್ಮ್ ಕಾರ್ಮಿಕರು, ಮುನಿಸಿಪಲ್ ಕಾರ್ಮಿಕರನ್ನು ಸಂಘಟಿಸುತ್ತಲೇ ತಾವು ಮಾಡುತ್ತಿದ್ದ ಟೈಲರ್ ವೃತ್ತಿಯ ಸಂಪರ್ಕಗಳನ್ನು ಬಳಸಿ ಕಿಸಾನ್ ಸಭಾವನ್ನು ಸಂಘಟಿಸಿದರು. ದಾವಣಗೆರೆಯಲ್ಲಿ ಕಾಟನ್ ಮಿಲ್ ಕೆಲಸಗಾರರನ್ನು ಸಂಘಟಿಸಲು ಮಂಗಳೂರಿನಿಂದ ಶಿವಶಂಕರ್ ರಾವ್‌ರನ್ನು ಕಳಿಸಲಾಗಿತ್ತು. ಇವರೊಂದಿಗೆ ಸಿಂಪ್ಸನ್ ಸೋನ್ಸ್, ಎಂ.ಸಿ.ನರಸಿಂಹನ್, ಪಂಪಾಪತಿ ಮುಂತಾದವರು ಸಾಕಷ್ಟು ದಾಳಿಗಳನ್ನು ಎದುರಿಸಿ ಕಮ್ಯುನಿಸ್ಟ್ ಚಳುವಳಿಯ ಪ್ರಬಲ ಕೇಂದ್ರವಾಗಿ ರೂಪಿಸಿದರು. ಮೈಸೂರು ವಿಲೀನಕ್ಕಾಗಿ ಮತ್ತು ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಹೋರಾಟದಲ್ಲಿ ಸಿಪಿಐ ಸಕ್ರಿಯವಾಗಿ ಭಾಗವಹಿಸಿತು. ಕುಣಿಗಲ್ ಶ್ರೀಧರ್, ಬಿ.ಎಸ್.ಕೇಶವನ್, ಉಗ್ರಪ್ಪ, ಎನ್.ಪಿ.ಶಂಕರನಾರಾಯಣರಾವ್, ಸೋಮಸುಂದರ ಶರ್ಮ, ಬೆಳ್ಳಿಯಪ್ಪ, ತಿಮ್ಮೇಗೌಡ ಮುಂತಾದವರು ರೈಲ್ವೆ, ಬೀಡಿ, ರೇಷ್ಮೆ, ಹೋಟೆಲ್, ಲಾರಿ, ಮುನಿಸಿಪಲ್, ವಿವಿಧ ಕ್ಷೇತ್ರದ ಕಾರ್ಮಿಕರನ್ನು ಸಂಘಟಿಸಿದರು. ಕೊಡಗಿನಲ್ಲಿ ಬಿ.ಎನ್.ಕುಟ್ಟಪ್ಪ, ಡಾ.ನಂಜುಂಡೇಶ್ವರ, ಬಿ.ಎನ್.ವೆಂಕಟರಮಣ, ವೈ.ಟಿ.ಗಣಪತಿ, ವಾಂಚೀರ ಕಾವೇರಪ್ಪ, ಡಾ.ಐ.ಆರ್. ಅಸ್ರಣ್ಣ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಲು ಶ್ರಮಿಸಿದರು. ಬೆಳಗಾವಿಯಲ್ಲಿ ಕೃಷ್ಣ ಮೆಣಸಿ, ರಾಮದಾಸ್ ಗೂಳಿಕೇರಿ, ಬಿ.ಎನ್.ಧಾರವಾಡಕರ್, ಶಾಂತಾರಾಂ ನಾಯ್ಕ, ಗಾಂವ್‌ಕರ್ ಸದಸ್ಯರಾಗಿದ್ದ ಸಿಪಿಐನ ನಗರ ಸಮಿತಿ ನೇತೃತ್ವದಲ್ಲಿ ಚಟುವಟಿಕೆಗಳು ನಡೆಯುತ್ತಿದ್ದವು. ಆದಿವಾಸಿಗಳು, ಮುನಿಸಿಪಲ್, ಮುಂತಾದ ಕಾರ್ಮಿಕರನ್ನು ಸಂಘಟಿಸುವಾಗಲೇ "ವೇಶ್ಯೆಯರ ಸಂಘಟನೆ"ಯನ್ನು ಆಗಾಗಲೇ ಮಾಡಿದ್ದರು. ಇಲ್ಲಿನ ಪಕ್ಷವು ಗೋವಾ ವಿಮೋಚನಾ ಚಳುವಳಿಯಲ್ಲಿ ಅತ್ಯಂತ ಸಕ್ರಿಯವಾಗಿ ಭಾಗವಹಿಸಿತು. ಬಿಜಾಪುರದಲ್ಲಿ ಮುನಿಸಿಪಲ್, ಪವರ್‌ಲೂಮ್, ಸಿಮೆಂಟ್ ಗುತ್ತಿಗೆ ಮತ್ತು ಹಮಾಲಿ ಕಾರ್ಮಿಕರು ಸಂಘಟನೆಗಳು ಬೆಳೆದವು. ಇದರ ಪ್ರಭಾವ ಗುಲ್ಬರ್ಗಾ ಮತ್ತು ಧಾರವಾಡ ಜಿಲ್ಲೆಗಳಲ್ಲಿ ವಿವಿಧ ಸಂಘಟನೆಗಳ ಬೆಳವಣಿಗೆಗೆ ಸಹಾಯವಾಯಿತು. ಬಿಜಾಪುರದಲ್ಲಿ ನಡೆದ ಕೃಷ್ಣಾ ಮೇಲ್ದಂಡೆ ಹೋರಾಟ ಗಮನಾರ್ಹವಾದುದು. ಗುಲ್ಬರ್ಗಾದಲ್ಲಿ ರಜಾಕಾರರ ವಿರುದ್ಧದ ಹೋರಾಟದಲ್ಲಿ ಸಿಪಿಐನ ಕೇಶವರಾವ್ ತಿರಗುಳ, ಗಂಗಾಧರ್ ನಮೋಶಿ, ಕಾದಂಬರಿ ಜಹಗೀರದಾರ, ಶ್ರೀನಿವಾಸ ಗುಡಿ, ಅಬ್ದುಲ್ ಕರೀಂ ಮುಂತಾದವರು ಕೆಲಸ ಮಾಡಿದರು.

**ಕರ್ನಾಟಕ ಏಕೀಕರಣ ಚಳುವಳಿ**ಯಲ್ಲಿ ಅಕರಾನಿ ಪರಿಷತ್ತಿನ ಮೂಲಕ ಕನ್ನಡ ಪ್ರದೇಶಗಳನ್ನು ಒಟ್ಟುಗೂಡಿಸಲು ಸಿಪಿಐ ಪ್ರಯತ್ನಿಸಿತು. ಇಡೀ ದೇಶದಲ್ಲಿ ಭಾಷಾವಾರು ರಾಜ್ಯಗಳನ್ನು ರಚನೆ ಮಾಡುವಲ್ಲಿ ಕಮ್ಯುನಿಸ್ಟ್ ಪಕ್ಷದ ಪಾತ್ರ ಮಹತ್ತರವಾದುದು. 1951 ರಲ್ಲಿ ಉಳ್ಳಾಲದಲ್ಲಿ ನಡೆದ ಸಿಪಿಐ ರಾಜ್ಯ ಸಮ್ಮೇಳನದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಚಳುವಳಿ ನಡೆಸಲು ನಿರ್ಣಯ ಅಂಗೀಕರಿಸಲಾಯಿತು. 1953 ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಕೆಪಿಸಿಸಿ ಸಭೆ ಸಂದರ್ಭದಲ್ಲಿ ಏಕೀಕರಣಕ್ಕಾಗಿ ಕಾಂಗ್ರೆಸ್ ನಾಯಕರು ರಾಜೀನಾಮೆ ಕೊಡಬೇಕೆಂದು 25 ಸಾವಿರ ಜನರು ಮುತ್ತಿಗೆ ಹಾಕಿದರು. ಗೋಲಿಬಾರ್, ಬಂಧನಗಳು ನಡೆದವು. "ಹುಬ್ಬಳ್ಳಿ ಗಲಭೆ" ಎಂದು ಪ್ರಸಿದ್ಧವಾದ ಈ ಪ್ರಕರಣದಲ್ಲಿ ಬಂಧಿತರಾದವರ ಪೈಕಿ ಎನ್.ಕೆ.ಉಪಾಧ್ಯಾಯ, ಎ.ಜೆ.ಮುಧೋಳ, ಬಿ.ಎನ್.ಧಾರವಾಡಕರ್, ಸಿದ್ದಪ್ಪ ಕಮ್ಮಾರ್, ಮುಲ್ಲಾ, ಬಿ.ಎನ್.ಮುನವಳ್ಳಿ ಮುಂತಾದ 13 ಮಂದಿ ಕಮ್ಯುನಿಸ್ಟ್ ನಾಯಕರಿದ್ದರು. ಹೋರಾಟಕ್ಕೆ ಒಂದು ಸಂಘಟಿತ ರೂಪ ಕೊಡಲು 1953 ರ ಮೇ ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ ಸರ್ವಪಕ್ಷ ಸಮ್ಮೇಳನ ನಡೆದು "ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು" ಸ್ಥಾಪನೆಯಾಯ್ತು. ರಾಜ್ಯದ ಎಲ್ಲಾ ಭಾಗಗಳಿಂದ ಕಮ್ಯುನಿಸ್ಟ್ ನಾಯಕರು ಇದರಲ್ಲಿ ಭಾಗವಹಿಸಿದ್ದರು. ಅದರ ಕಾರ್ಯದರ್ಶಿಯಾಗಿ ಬಿ.ವಿ.ಕಕ್ಕಿಲ್ಲಾಯರು ಆಯ್ಕೆಯಾದರು. ಅಂತಿಮವಾಗಿ 1956 ರಲ್ಲಿ ಮೈಸೂರು ರಾಜ್ಯ ಪುನರ್ವಿಂಗಡಣೆ ಆದಾಗ ಕಮ್ಯುನಿಸ್ಟ್ ಪಕ್ಷ ಪ್ರತಿಪಾದಿಸಿದ "ಗ್ರಾಮವನ್ನು ಘಟಕವನ್ನಾಗಿ ಪರಿಗಣಿಸಬೇಕು" ಮತ್ತು ಇಂತಹ ಪ್ರಮುಖ ತತ್ವಗಳನ್ನು ಕೇಂದ್ರ ಸರ್ಕಾರ ಕೈಬಿಟ್ಟಿದ್ದರಿಂದ ಹಲವಾರು ಭಾಗಗಳಲ್ಲಿ ಗಡಿ ಸಮಸ್ಯೆಗಳು ಇಂದಿಗೂ ಮುಂದುವರಿದಿವೆ.

ಸಿಪಿಐ ತನ್ನ ಸಾಮ್ರಾಜ್ಯಶಾಹಿ ವಿರೋಧಿ ನಿಲುವಿನ ಸ್ಪಷ್ಟತೆಯೊಂದಿಗೆ **ಗೋವಾ ವಿಮೋಚನೆ ಹೋರಾಟ**ದಲ್ಲಿ ತೊಡಗಿಸಿಕೊಂಡಿತು. ಗೋವಾ ಗಡಿ ಪ್ರವೇಶ ಮಾಡಬೇಕೆಂಬ ಸತ್ಯಾಗ್ರಹ ಸಮಿತಿಯ ತೀರ್ಮಾನಕ್ಕೆ ಪೂರಕವಾಗಿ, ಅದಕ್ಕೆ ಬೇಕಾದ ತುಕಡಿಗಳನ್ನು ಕಮ್ಯುನಿಸ್ಟ್ ಪಕ್ಷವು ರೂಪಿಸಿತು. ಕಮ್ಯುನಿಸ್ಟ್ ಸತ್ಯಾಗ್ರಹಿಗಳ ಪಟ್ಟಿಯನ್ನು ಸಿದ್ದಪಡಿಸಿತು. ಹಣಕಾಸಿನ ನೆರವನ್ನು ಮುಂಬೈನ ಕಾರ್ಮಿಕರಿಂದ ಸಂಗ್ರಹ ಮಾಡುವ ಭರವಸೆಯನ್ನು ಕಮ್ಯುನಿಸ್ಟ್ ಪಕ್ಷ ನೀಡಿತು. ಜನರಲ್ಲಿ ಜಾಗೃತಿ ಮೂಡಿಸಲು ಕಲಾತಂಡಗಳನ್ನು ರೂಪಿಸಿತು. 1955 ಜುಲೈ 30 ರಂದು ಮಂಗಳೂರಿನಿಂದ ಹೊರಟ ಎ.ಕೃಷ್ಣಶೆಟ್ಟಿಯವರ ನೇತೃತ್ವದ ಐದು ಜನರ ಮೊದಲ ತಂಡ ಜುಲೈ 31 ರಂದು ಸಾವಂತವಾಡಿ ತಲುಪಿತ್ತು. ಗಡಿ ನುಗ್ಗುವ ತಂಡಕ್ಕೆ ಬಾಬುರಾವ್ ಥೋರಟ್ ನಾಯಕರಾಗಿ ಮತ್ತು ಎ.ಕೃಷ್ಣಶೆಟ್ಟರು ಉಪನಾಯಕರಾಗಿ ಆಯ್ಕೆಯಾಗಿದ್ದರು. ಈ ಹೋರಾಟದಲ್ಲಿ ಪಶ್ಚಿಮ ಬಂಗಾಳದ ನಿತ್ಯಾನಂದ ಸಾಹಾ ಮತ್ತು ಮಹಾರಾಷ್ಟ್ರದ ಬಾಬುರಾವ್ ಥೋರಟ್ ಅವರು ಪೋರ್ಚುಗೀಸ್ ಪೊಲೀಸರ ಗುಂಡಿಗೆ ಬಲಿಯಾದರು. ಇಬ್ಬರೂ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದರು.

ಮಂಗಳೂರಿನಿಂದ ಬಿ.ವಿ.ಕಕ್ಕಿಲ್ಲಾಯರ ನೇತೃತ್ವದ ಎರಡನೇ ತಂಡದ ಜೊತೆ ಹುಬ್ಬಳ್ಳಿಯಿಂದ ಎ.ಜೆ. ಮುಧೋಳರ ತಂಡ, ಮತ್ತೊಂದು ಕಡೆ ಬಿಜಾಪುರ ಜಿಲ್ಲೆಯಿಂದ ಎನ್.ಕೆ.ಉಪಾಧ್ಯಾಯರ ನೇತೃತ್ವದ ತಂಡಕ್ಕೆ ಬಾಗಲಕೋಟೆಯಲ್ಲಿ ಡಿ.ಎಂ.ಕಲಾಸಿ ನೇತೃತ್ವದ ತಂಡ ಸೇರಿಕೊಂಡಿತು. ಆಗಸ್ಟ್ 14 ರಂದು ಇವರೆಲ್ಲಾ ಬೆಳಗಾವಿಗೆ ಬರುವಷ್ಟರಲ್ಲಿ ಎಸ್.ಎ.ಡಾಂಗೆ, ಎಸ್.ಜಿ.ಸರ್ದೇಸಾಯಿ, ಸುಶೀಲಾ ಗೋಪಾಲನ್, ಎನ್.ಎಲ್.ಉಪಾಧ್ಯಾಯ ಮುಂತಾದ ಕಮ್ಯುನಿಸ್ಟ್ ಪಕ್ಷದ ಹಿರಿಯ ಮುಖಂಡರೆಲ್ಲಾ ಅಲ್ಲಿ ನೆರೆದಿದ್ದರು. 1955 ರ ಆಗಸ್ಟ್ ಎರಡನೇ ವಾರದಲ್ಲಿ ಬೆಂಗಳೂರು ಮತ್ತು ಮೈಸೂರಿನಿಂದ ಸತ್ಯಾಗ್ರಹಿಗಳು ಬೆಳಗಾವಿಯಲ್ಲಿ ಸೇರಿಕೊಂಡರು. ಗೋವಾ ಗಡಿಯನ್ನು ದಾಟುತ್ತಿದಂತೆ ಪೋರ್ಚುಗೀಸ್ ಸೈನಿಕರು ನಡೆಸಿದ ಗೋಲೀಬಾರಿಗೆ ಕಮ್ಯುನಿಸ್ಟ್ ಮುಖಂಡರಾದ ವಿಷ್ಣುಪಂತ್ ಚಿತಳೆ, ಕರ್ನಲ್ ಸಿಂಗ್ ಹಾಗೂ ಶೇಖ್ ಸನಾವುಲ್ಲಾ ಹುತಾತ್ಮರಾದರು. ಅಂತಿಮವಾಗಿ ಭಾರತ ಸರ್ಕಾರದ ಸೈನಿಕ ಕಾರ್ಯಾಚರಣೆಯಿಂದ ಗೋವಾ ವಿಮೋಚನೆಯಾಯಿತು.

**ಕಮ್ಯುನಿಸ್ಟ್ ಪಕ್ಷದ ವಿಭಜನೆ:**

ಭಾರತದ ಕ್ರಾಂತಿಯ ದಾರಿಯ ಕುರಿತು ಚರ್ಚೆಗಳು ನಡೆಯುತ್ತಿದ್ದ ಕಾಲಕ್ಕೆ ಭಾರತ – ಚೀನಾ ಯುದ್ಧವು ಸಿಪಿಐನೊಳಗೆ ತೀವ್ರವಾದ ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸಿತು. ಇದು ಅಂತಿಮವಾಗಿ 1964 ರಲ್ಲಿ ಸಿಪಿಐ ವಿಭಜನೆಯಲ್ಲಿ ಪರ್ಯವಸಾನವಾಗಿ ಸಿಪಿಐ(ಎಂ) ರಚನೆಗೆ ಕಾರಣವಾಯಿತು. ಸೈದ್ಧಾಂತಿಕ ನೆಲೆಯಲ್ಲಿ ವಿಭಜನೆಯಾದರೂ, ಕರ್ನಾಟಕದಲ್ಲಿ ಎಲ್ಲ ಕಡೆಗಳಲ್ಲೂ ಅದೇ ಕಾರಣಕ್ಕಾಗಿ ಆಯಿತೆಂದು ಹೇಳಲು ಸಾಧ್ಯವಿಲ್ಲ. ಕರ್ನಾಟಕದಲ್ಲಿ ಇದರ ಪರಿಣಾಮವು ತೀವ್ರವಾಗಿ ಆಯಿತು. ಒಟ್ಟೊಟ್ಟಿಗೆ ಕೆಲಸ ಮಾಡುತ್ತಿದ್ದ ಮುಖಂಡರು ಮತ್ತು ಕಾರ್ಯಾಕರ್ತರು ಈಗ ತಾವೆಲ್ಲಿ ಹೋಗಬೇಕು, ಯಾರ ಜೊತೆ ಗುರುತಿಸಿಕೊಳ್ಳಬೇಕು, ಯಾವ ಕಮ್ಯುನಿಸ್ಟ್ ಪಕ್ಷ ಸರಿ, ಯಾವುದು ತಪ್ಪು ಎಂಬ ಚರ್ಚೆಗಳು ಮತ್ತು ಸೈದ್ಧಾಂತಿಕ ಸಂಘರ್ಷಗಳಲ್ಲಿ ತೊಡಗುವಂತಾಯಿತು. ಪರಸ್ಪರ ಜೊತೆಯಾಗಿ ಕೆಲಸ ಮಾಡುತ್ತಿದ್ದವರು ಬೇರೆ ಬೇರೆಯಾಗಿ ಕೆಲಸ ಮಾಡುವ ಅನಿವಾರ್ಯತೆಗೆ ಒಳಗಾದರು. ಇದು ಕೇವಲ ವ್ಯಕ್ತಿಗಳಾಗಿ ಬೇರೆಯಾದರು ಎಂಬುದಕ್ಕಿಂತ, ಇಡೀ ಸಂಘಟನೆಗಳು, ಚಳುವಳಿಗಳು, ಹೋರಾಟಗಳು

ಪುಟ 11 ಕ್ಕೆ

# ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ

ಪುಟ 10 ರಿಂದ

ವಿಭಜನೆಯಾದವು. ರಾಜ್ಯದಲ್ಲಿ ಕಮ್ಯುನಿಸ್ಟ್ ಪಕ್ಷದ ಐಕ್ಯತೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಎನ್.ಎಲ್.ಉಪಾಧ್ಯಾಯ ಮತ್ತು ಬಿ.ವಿ.ಕಕ್ಕಿಲ್ಲಾಯರು ಹಲವಾರು ಜಿಲ್ಲೆಗಳಿಗೆ ಪ್ರವಾಸ ಮಾಡಿ ಪರಿಸ್ಥಿತಿಯನ್ನು ವಿವರಿಸುವ ಕೆಲಸ ಮಾಡಿದರು. ಕಕ್ಕಿಲ್ಲಾಯರು ರಾಷ್ಟ್ರೀಯ ಪ್ರಜಾಪ್ರಭುತ್ವದ ನಿಲುವನ್ನು ಪ್ರತಿಪಾದಿಸಿದರೆ, ಉಪಾಧ್ಯಾಯರು ಜನತಾ ಪ್ರಜಾಪ್ರಭುತ್ವದ ನಿಲುವನ್ನು ಪ್ರತಿಪಾದಿಸುತ್ತಿದ್ದರು. ಎಲ್ಲಿಯೂ ಐಕ್ಯತೆಯ ಪ್ರಶ್ನೆ ಮೂಡಲಿಲ್ಲ. ಹೀಗಾಗಿ ಕರ್ನಾಟಕದಲ್ಲೂ ಸಿಪಿಐ ಎರಡು ಹೋಳಾಯಿತು.

ಇದರ ಹೊಡೆತವನ್ನು ತಾಳಿಕೊಳ್ಳುತ್ತಿರುವಾಗಲೇ ದೇಶ ಮಟ್ಟದಲ್ಲಿ ಮತ್ತೊಂದ ಎಡ–ತೀವ್ರವಾದಿ ವಿಭಜನೆ ಸಂಭವಿಸಿತು. ಇದು ಕರ್ನಾಟಕದಲ್ಲಿ ಒಂದು ದಶಕ ತಡವಾಗಿ 1978 ರಲ್ಲಿ ಸಂಭವಿಸಿತು. ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿಯಾಗಿದ್ದ ಎಂ.ಹೆಚ್.ಕೃಷ್ಣಪ್ಪನವರು ಅದರಿಂದ ಉಚ್ಚಾಟನೆಗೊಂಡ ಬಳಿಕ ತಮ್ಮ ಕೆಲವು ಆಪ್ತರೊಂದಿಗೆ ಸೇರಿ 1978 ರ ನವೆಂಬರ್ 12–13 ರಂದು ಬೆಂಗಳೂರಿನಲ್ಲಿ ಸಮಾವೇಶವನ್ನು ನಡೆಸಿ **ಇಂಡಿಯನ್ ಕಮ್ಯುನಿಸ್ಟ್ ಪಾರ್ಟಿ** ಸ್ಥಾಪನೆ ಮಾಡಿದರು. ನಂತರ ಇವರು ವಿವಿಧ ನಕ್ಸಲ್ ಗುಂಪುಗಳೊಡನೆ ಸಂಪರ್ಕವನ್ನು ಬೆಳೆಸಿದರು. ಆದರೆ ರಾಜ್ಯದಲ್ಲಿ ಅದು ನೆಲೆ ಕಾಣಲಿಲ್ಲ. ಆದರೂ ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ ಮತ್ತು ಕೋಲಾರ ಜಿಲ್ಲೆಗಳಲ್ಲಿ ಗಣನೀಯವಾಗಿ ಚಳುವಳಿಗೆ ತೊಂದರೆ ಉಂಟಾಯಿತು.

ವಿಭಜನೆಯ ನಂತರದ ನಾಲ್ಕೈದು ವರ್ಷಗಳು ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯಲ್ಲಿ ಸಂಧಿಗ್ಧ ಕಾಲ. ವಿಭಜನೆಯ ನಿರಾಶೆ, ಅತೃಪ್ತಿ, ಬೇಸರುಗಳು ಕಾರ್ಯಕರ್ತರಲ್ಲಿ ಮನೆ ಮಾಡಿದವು. ಹೋರಾಟಗಳನ್ನು ನಡೆಸಬೇಕಾದ ಕಾಲಘಟ್ಟದಲ್ಲಿ ಒಂದು ರೀತಿಯ ಸೂತಕ ಕಮ್ಯುನಿಸ್ಟ್ ಪಕ್ಷಗಳ ಮನೆ ಹೊಕ್ಕಿತ್ತು. ಈ ನಡುವೆ ಕಾಂಗ್ರೆಸಿನ ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲೂ ಕಮ್ಯುನಿಸ್ಟ್ ಪಕ್ಷಗಳು ಭಿನ್ನ ನಿಲುವುಗಳನ್ನು ತೆಗೆದುಕೊಂಡವು. ನಕ್ಸಲ್ ಚಳುವಳಿಯೆಂದು ಕರೆಯಲಾಗುವ ದುಸ್ಸಾಹಸವಾದಿ ತತ್ವವು ಕರ್ನಾಟಕದಲ್ಲಿ 1980 ರ ಮಧ್ಯಭಾಗದಿಂದ ಆರಂಭವಾಯಿತು. ಇವೆಲ್ಲವೂ ಒಂದು ಕ್ರೋಢೀಕೃತ ಮತ್ತು ಸಂಘಟಿತ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಲು ತಡೆಯೊಡ್ಡಿತು. ಕರ್ನಾಟಕದಲ್ಲಿ ಸಿಪಿಐ ಮತ್ತು ಸಿಪಿಐ(ಎಂ) ಪಕ್ಷಗಳು ಎರಡು ಭಿನ್ನ ಧೃವಗಳಾಗಿಯೇ ಬೆಳೆದರೂ, ತುರ್ತು ಪರಿಸ್ಥಿತಿಯ ನಂತರದ ಕಾಲಘಟ್ಟದಲ್ಲಿ ಕಾಂಗ್ರೆಸ್ ವಿರೋಧಿ ನೆಲೆಯ ಮೂಲಕ ಒಟ್ಟಿಗೆ ಕೆಲಸ ಮಾಡಲು ಆರಂಭಿಸಿವೆ.

ಅಪಾರವಾದ ಏರುಪೇರುಗಳನ್ನು ಕಂಡ ಕಮ್ಯುನಿಸ್ಟ್ ಪಕ್ಷಗಳು ಬಹಳ ದೀರ್ಘ ಕಾಲ ಭಾರತದ ಕ್ರಾಂತಿಯ ಕುರಿತು ಸ್ಪಷ್ಟತೆಯನ್ನು ಹೊಂದಿರಲಿಲ್ಲ ಎಂಬುದನ್ನು ಗಮನಿಸಬೇಕಾಗಿದೆ. ಇದಾಗಿಯೂ, ಕಮ್ಯುನಿಸ್ಟ್ ಪಕ್ಷಗಳು ರೈತರು, ಕಾರ್ಮಿಕರು ಮತ್ತು ವಿದ್ಯಾರ್ಥಿಗಳ ನಡುವೆ ಸಮೂಹ ಸಂಘಟನೆಗಳ ಮೂಲಕ ಕ್ರಿಯಾಶೀಲವಾಗಿದ್ದುದನ್ನು ಕಾಣಬಹುದಾಗಿದೆ. ಮೈಕೋ ಹೋರಾಟ, ಸಾರ್ವಜನಿಕ ಉದ್ದಿಮೆಗಳ ಹೋರಾಟ, ನರಗುಂದ ರೈತರ ಹೋರಾಟ ಮುಂತಾದ ಹೋರಾಟಗಳನ್ನು ನಡೆಸುವ ಮೂಲಕ ಕರ್ನಾಟಕದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರ ಬರುವುದರಲ್ಲಿ ಕಮ್ಯುನಿಸ್ಟ್ ಪಕ್ಷಗಳು ಪ್ರಮುಖ ಪಾತ್ರ ವಹಿಸಿವೆ. ಸಿಪಿಐ ವಿಭಜನೆಯ ನಂತರದಲ್ಲಿ ಸಮೂಹ ಸಂಘಟನೆಗಳೂ ವಿಭಜನೆಯಾದ್ದರಿಂದ ಸುಮಾರು ಎರಡು ದಶಕಗಳ ಕಾಲ ಅವುಗಳ ಹೋರಾಟಗಳಲ್ಲಿ ಮೊನಚು ಕಡಿಮೆಯಾಗಿದ್ದನ್ನು ಗುರುತಿಸಬಹುದು. ತುರ್ತು ಪರಿಸ್ಥಿತಿ ನಂತರದಲ್ಲಿ ಕರ್ನಾಟಕದಲ್ಲಿ ಎದ್ದು ಬಂದ ಬಂಡಾಯ, ದಲಿತ ಚಳುವಳಿಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು ಸಕ್ರಿಯವಾದ ಪಾತ್ರ ವಹಿಸಿದವು. ಸಮುದಾಯ ಸಾಂಸ್ಕೃತಿಕ ಚಳುವಳಿಯನ್ನು ಆರಂಭಿಸಿತು. ಇದರಿಂದಾಗಿ ರಾಜ್ಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಹೊಸ ಚೈತನ್ಯವನ್ನು ಸೃಷ್ಟಿಸಿತು. 1964 ರ ನಂತರ ಕರ್ನಾಟಕದಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಒಂದು ಸ್ಥಾನವನ್ನೂ ಗೆಲ್ಲಲಾಗದ ಪರಿಸ್ಥಿತಿ ಎರಡೂ ಕಮ್ಯುನಿಸ್ಟ್ ಪಕ್ಷಗಳಲ್ಲಿತ್ತು. ಆದರೆ ತುರ್ತುಪರಿಸ್ಥಿತಿಯ ನಂತರ ಮೈಕೊಡವಿ ಎದ್ದಂತೆ ಎದ್ದ ಕಮ್ಯುನಿಸ್ಟ್ ಚಳುವಳಿಗಳ ಪರಿಣಾಮವಾಗಿ 1983 ರಲ್ಲಿ ಸಿಪಿಐ ಮತ್ತು ಸಿಪಿಐ(ಎಂ) ಎರಡೂ ಪಕ್ಷಗಳು ವಿಧಾನಸಭೆಗೆ ಪ್ರವೇಶವನ್ನು ಪಡೆದುಕೊಂಡವು.

ಜಾಗತಿಕವಾಗಿ ಸಮಾಜವಾದಕ್ಕೆ ಹಿನ್ನಡೆಯಾದ ಹಿನ್ನೆಲೆಯಲ್ಲಿ 1990 ರ ನಂತರದಲ್ಲಿ ಕರ್ನಾಟಕದಲ್ಲೂ ಕಮ್ಯುನಿಸ್ಟ್ ಚಳುವಳಿಯು ಸವಾಲುಗಳನ್ನು ಎದುರಿಸುತ್ತಿದೆ. ವಿವಿಧ ಸಮೂಹ ಸಂಘಟನೆಗಳ ಮೂಲಕ ಏನೆಲ್ಲಾ ಪ್ರಯತ್ನಗಳನ್ನು ಕಮ್ಯುನಿಸ್ಟ್ ಪಕ್ಷಗಳು ಮಾಡುತ್ತಿದ್ದರೂ, ಬೆಳವಣಿಗೆಯ ಸಮಸ್ಯೆಯನ್ನು ಅವು ಎದುರಿಸುತ್ತಿವೆ. ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ ಕಮ್ಯುನಿಸ್ಟ್ ಪಕ್ಷಗಳು, ತಾವು ಪ್ರತಿಪಾದಿಸುವ ಸಾಮಾಜಿಕ ಕ್ರಾಂತಿಯನ್ನು ಸಾಧಿಸುವಲ್ಲಿ ಇನ್ನೂ ಯಶಸ್ವಿಯಾಗದಿದ್ದರೂ, ಕರ್ನಾಟಕದ ಪ್ರಜಾಪ್ರಭುತ್ವ, ಸಮಾನತೆ, ಸ್ವಾತಂತ್ರ್ಯವನ್ನು ಕಾಪಾಡುವುದರಲ್ಲಿ ಮತ್ತು ಜನತೆಯ ಹಕ್ಕುಗಳನ್ನು ರಕ್ಷಿಸುವುದರಲ್ಲಿ, ಕೋಮು ಸಾಮರಸ್ಯವನ್ನು ಕಾಪಾಡುವಲ್ಲಿ ಮಹತ್ವದ ಕಾಣಿಕೆಯನ್ನು ನೀಡಿವೆ. ನರೇಂದ್ರ ಮೋದಿ ಸರ್ಕಾರ ಬಂದ ನಂತರದಲ್ಲಿ ದುಡಿಯುವ ಜನಸಮೂಹಗಳ ಮೇಲೆ ಅದು ನಡೆಸುತ್ತಿರುವ ಅವ್ಯಾಹತ ದಾಳಿಗಳ ಪರಿಣಾಮಗಳು ಜನತೆಯಲ್ಲಿ ಅಪಾರವಾದ ಅತೃಪ್ತಿಯನ್ನು ಸೃಷ್ಟಿಸುತ್ತಿದೆ. ಕಮ್ಯುನಿಸ್ಟ್ ಚಳುವಳಿಯನ್ನು ಸ್ಪಷ್ಟ ಸೈದ್ಧಾಂತಿಕ ಮತ್ತು ರಾಜಕೀಯ ಕಣ್ಣೋಟದೊಂದಿಗೆ ಮತ್ತು ಸಂಘಟನಾ ಶಿಸ್ತಿನೊಂದಿಗೆ ಕಟ್ಟಿಬೆಳೆಸಲು ಇದು ಸುಸಂದರ್ಭವಾಗಿದೆ. ಸವಾಲುಗಳೂ ಇವೆ ಅವಕಾಶಗಳೂ ಇವೆ. ●

# ಸಾಮಾಜಿಕ ನ್ಯಾಯಕ್ಕಾಗಿ ಹೋರಾಟದಲ್ಲಿ

ಪುಟ 8 ರಿಂದ

ಗೌರವವನ್ನು ಕಟ್ಟುನಿಟ್ಟಾಗಿ ಆಚರಿಸಲಾಯಿತು. ಹೀಗೆ ನಡೆಸಿದಆಚರಣೆಗಳು ಜನರ ಆಲೋಚನೆಗಳನ್ನು ಬದಲಾಯಿಸಿತದವು. ".

ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯದ ವಿರುದ್ಧದ ಹೋರಾಟದಿಂದ ಪಡೆದ ಅನುಭವಗಳಿಂದ ಕಲಿಯುತ್ತಾ, ಪಕ್ಷದ ಎರಡನೇ ಕಾಂಗ್ರೆಸ್ ಅಧಿವೇಶನದಲ್ಲಿ (1948) ಹೀಗೆ ಒತ್ತಿ ಹೇಳಲಾಯಿತು: "ಅಸ್ಪೃಶ್ಯರ ವಿರುದ್ಧದ ಪ್ರತಿಯೊಂದು ತಾರತಮ್ಯವನ್ನು ಜನಸಮೂಹಗಳನ್ನು ವಿಭಜಿಸುವ ಒಂದು ಬೂರ್ಜ್ವಾ ಪ್ರಯತ್ನವೆಂದು ಖಂಡಿಸಬೇಕು ಮತ್ತು ಅವರ ಪ್ರತಿಯೊಂದು ಬೇಡಿಕೆಯನ್ನು ಎಲ್ಲ ಜನರ ಹಕ್ಕುಗಳಿಗಾಗಿ ನಡೆಯುವ ಸಾಮಾನ್ಯ ಹೋರಾಟದ ಭಾಗವಾಗಿ ಹೋರಾಡಬೇಕು".

ಸ್ವಾತಂತ್ರ್ಯ ಪಡೆದ ನಂತರವೂ, ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಹೋರಾಟದಲ್ಲಿ ಕಮ್ಯುನಿಸ್ಟ್ ಚಳವಳಿಯ ಮೂಲ ಉದ್ದೇಶದಲ್ಲಿ ಯಾವುದೇ ಬದಲಾವಣೆಗಳಾಗಲಿಲ್ಲ. ಆರಂಭದಲ್ಲಿ ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾ ಸಮಸ್ಯೆಗಳು, ಅದರ ನಿರ್ಣಯಗಳು ಮತ್ತು ನೀತಿಗಳ ಅನುಷ್ಠಾನದಲ್ಲಿ ಪರಿಣಾಮ ಬೀರಿದರೂ, ಬೇಗನೇ ಜಾತಿ ವಿರೋಧಿ ಮತ್ತು ಇತರ ಸಾಮಾಜಿಕ ಸುಧಾರಣಾ ಚಟುವಟಿಕೆಗಳಿಗೆ ಮರಳಿ ಮಹತ್ವ ನೀಡಲಾಯಿತು.

ಪಕ್ಷದ 7ನೇ ಮಹಾಧಿವೇಶನದಲ್ಲಿ (1964) ಅಂಗೀಕರಿಸಿದ ಕಾರ್ಯಕ್ರಮವು ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಹೋರಾಟದ ಒಂದು ಭಾಗವಾಗಿ, ಅಸ್ಪೃಶ್ಯತೆ, ಜಾತಿತಾರತಮ್ಯ,ಮಹಿಳೆಯರ ಅಸಮಾನತೆ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ಅಸಮರ್ಪಕ ರಕ್ಷಣೆ ಇತ್ಯಾದಿಗಳ ವಿರುದ್ಧ ಹೋರಾಡುವ ಮಹತ್ವವನ್ನು ಒತ್ತಿ ಹೇಳಿತು.

ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ ಮತ್ತು ಕೆಲವು ಹಿಂದಿ ಮಾತನಾಡುವ ರಾಜ್ಯಗಳಲ್ಲಿ, ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯದ ವಿರುದ್ಧದ ಚಟುವಟಿಕೆಗಳು ಮತ್ತು ಹೋರಾಟಗಳು ಈ ಉದ್ದೇಶದ ಬಗ್ಗೆ ಕಮ್ಯೂನಿಸ್ಟರ ಬದ್ಧತೆಯನ್ನು ಎತ್ತಿ ತೋರಿಸುತ್ತವೆ. ಭೂ ಸುಧಾರಣೆಗಳ ಅನುಷ್ಠಾನಕ್ಕಾಗಿ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರದ ಕಮ್ಯೂನಿಸ್ಟ್ ಸರ್ಕಾರಗಳು ಕೈಗೊಂಡ ಕ್ರಮಗಳು, ಊಳಿಗಮಾನ್ಯ ದಬ್ಬಾಳಿಕೆಯನ್ನು ತಳ ಮಟ್ಟದಲ್ಲಿ ಹೊಡೆದು ಹಾಕಿದವು. ಇದರಿಂದ, ತಮ್ಮ ಸ್ವಾಭಿಮಾನವನ್ನು ಖಾತ್ರಿ ಪಡಿಸಿಕೊಂಡು, ಮೇಲ್ಜಾತಿಯ ಯಜಮಾನಿಕೆಯ ಪ್ರಾಬಲ್ಯವನ್ನು ಮೆಟ್ಟಿ ನಿಲ್ಲಲು ದಲಿತರು ಮತ್ತು ಇತರ ಹಿಂದುಳಿದ ಜಾತಿಗಳಿಗೆ ಕಮ್ಯೂನಿಸ್ಟರು ಸಾಮರ್ಥ್ಯವನ್ನು ನೀಡಿದರು.

ಅಸ್ಪೃಶ್ಯತೆಯ ವಿರುದ್ಧ ಮತ್ತು ಸ್ವಾಭಿಮಾನಕ್ಕಾಗಿ ಅನೇಕ ಹೋರಾಟಗಳ ನಡುವೆಯೂ, ಈ ನೂರು ವರ್ಷಗಳಲ್ಲಿ ಸಮಾಜದಲ್ಲಿ ಹಿಂದುಳಿದ ವರ್ಗಗಳಲ್ಲಿ, ಜಾತಿ ವ್ಯವಸ್ಥೆಯ ಬುಡವನ್ನು ಕಿತ್ತು ಹಾಕುವ ಕೆಲಸ ಇನ್ನೂ ಬಾಕಿ ಉಳಿದಿದೆ. ಹಳೆಯ ಊಳಿಗಮಾನ್ಯ ಸಂಬಂಧಗಳು ದುರ್ಬಲವಾಗುತ್ತಿದ್ದರೂ, ಅಭಿವೃದ್ಧಿ ಹೊಂದುತ್ತಿರುವ ಬಂಡವಾಳಶಾಹಿ ವರ್ಗಗಳು ಇನ್ನೂ ಜಾತಿ ವ್ಯವಸ್ಥೆಯ ಮುಂದುವರಿಕೆಯನ್ನು ಬಯಸುತ್ತವೆ. ಅವರ ಶೋಷಣೆಯನ್ನು ಹೆಚ್ಚಿಸಲು, ಜನರನ್ನು ವಿಭಜಿಸಲು ಮತ್ತು ಅವರ ಮತ–ಬ್ಯಾಂಕ್ ರಾಜಕೀಯವನ್ನು ಮುಂದುವರಿಸಲು ಅವರಿಗೆ ಜಾತಿ ಎಂಬ ಅಸ್ತ್ರ ಬೇಕೇ ಬೇಕು. ಈ ಕಾರಣಕ್ಕಾಗಿಯೇ ಇಂದು, ಜಾತಿಯನ್ನು ನಿರ್ಮೂಲನೆ ಮಾಡುವ ಹೋರಾಟವು ಇಡೀ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧದ ಹೋರಾಟದೊಂದಿಗೆ ಅಂತರ್ಗತವಾಗಿ ಸಂಬಂಧ ಹೊಂದಿದೆ. ಈ ಕಾರಣಕ್ಕಾಗಿ, ಸಾಮಾಜಿಕ ಸುಧಾರಣೆಗಳು, ಮೀಸಲಾತಿ, ಪ್ರಾತಿನಿಧ್ಯ ಮತ್ತು ಕಲ್ಯಾಣ ಮುಂತಾದ ಜಾತಿ ದಬ್ಬಾಳಿಕೆಯ ವಿರುದ್ಧದ ತಾತ್ಕಾಲಿಕ ಪರಿಹಾರ ಕ್ರಮಗಳಿಗಾಗಿ, ನಮ್ಮ ಹೋರಾಟದ ಜೊತೆಗೆ, ಮತ್ತು ಜಾತಿ ವ್ಯವಸ್ಥೆಯನ್ನು ಕಾಪಿಡುವ ಭೂಒಡೆತನದಲ್ಲಿ ಸಾಂದ್ರತೆಯನ್ನು ಮುರಿಯುವ ಮತ್ತು ಬಂಡವಾಳಶಾಹಿ ಶಕ್ತಿಗಳ ಸೋಲನ್ನು ಖಾತರಿ ಪಡಿಸಲು ನಾವು ಹೋರಾಡಬೇಕಾಗಿದೆ.

ಕಮ್ಯೂನಿಸ್ಟ್ ಚಳುವಳಿ ಪ್ರಾರಂಭದಿಂದಲೂ ತೋರಿಸಿದ ಮಾರ್ಗವು ಇನ್ನೂ ಪ್ರಸ್ತುತವಾಗಿದೆ. ತಾತ್ಕಾಲಿಕ ಪರಿಹಾರ ಮತ್ತು ಸಾಮಾಜಿಕ ಸುಧಾರಣಾ ಕ್ರಮಗಳು ಅವಶ್ಯಕ, ಆದರೆ ಅಷ್ಟೇ ಸಾಕಾಗುವುದಿಲ್ಲ. ಕಾರ್ಷಿಕ ಕ್ರಾಂತಿ ಮತ್ತು ಸಮಾಜವಾದದ ಸಾಧನೆಯಿಂದ ಮಾತ್ರವೇ ಜಾತಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸಾಧ್ಯ. ಈ ನೂರು ವರ್ಷಗಳ ಹೋರಾಟಗಳ ಅನುಭವಗಳು ಕಮ್ಯುನಿಸ್ಟ್ ಚಳವಳಿಯ ಈ ದೃಷ್ಟಿಕೋನವನ್ನು ಸಮರ್ಥಿಸುತ್ತವೆ. ●

# ಕಾರ್ಮಿಕ ವರ್ಗದ ಚಳವಳಿಯ ಸಂಘಟನೆಯಲ್ಲಿ

ಪುಟ 7 ರಿಂದ

ಚುನಾಯಿತಗೊಂಡ ನಂತರ, ಅದು ಯಾವಾಗಲೂ ಕಾರ್ಮಿಕ ವರ್ಗಕ್ಕೆ ದ್ರೋಹ ಬಗೆದಿದೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ಪೊಲೀಸ್ ಮತ್ತು ಪ್ರಭುತ್ವಯಂತ್ರವನ್ನು ಬಳಸಿಕೊಂಡು ಈ ಹೋರಾಟಗಳನ್ನು ನಿಗ್ರಹಿಸಲು ಸಹ ಅದು ಪ್ರಯತ್ನಿಸಿದೆ.

ಕಾಂಗ್ರೆಸ್ಸಿನ ವರ್ಗ ಮನೋಭಾವದಿಂದಾಗಿ, ಸ್ವಾತಂತ್ರ್ಯದ ನಂತರ ದಶಕಗಳ ನಂತರವೂ ಈ ಬೇಡಿಕೆಗಳು ಈಡೇರಿಲ್ಲ. ಕಾಂಗ್ರೆಸ್ ಮತ್ತು ನಂತರದ ಬಿಜೆಪಿ ನೇತೃತ್ವದ ಸರ್ಕಾರಗಳು ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು ಕ್ರಮಗಳನ್ನು ತೆಗೆದುಕೊಳ್ಳುವ ಬದಲು, ನವ–ಉದಾರವಾದಿ ಆರ್ಥಿಕ ನೀತಿಗಳ ಅನುಷ್ಠಾನದ ಮೂಲಕ ಅವುಗಳನ್ನು ಇನ್ನಷ್ಟು ಹೆಚ್ಚಿಸಿದವು. ಆರು ವರ್ಷಗಳ ಹಿಂದೆ ಬಿಜೆಪಿ ಸರ್ಕಾರದ ಆಗಮನದೊಂದಿಗೆ ಕಾರ್ಮಿಕ ವರ್ಗದ ಮೇಲಿನ ದಾಳಿಗಳು ಅಭೂತಪೂರ್ವ ಮಟ್ಟಕ್ಕೆ ತೀವ್ರಗೊಂಡಿವೆ.

ಬಂಡವಾಳಶಾಹಿ ವರ್ಗದ ಲಾಭ'ದ ಗರಿಷ್ಠೀಕರಣಕ್ಕಾಗಿ, ಮೋದಿ ಸರ್ಕಾರ ಕಾರ್ಮಿಕ ವರ್ಗದ ಮೇಲೆ ಮತ್ತು ಕಾರ್ಮಿಕರ ಕಷ್ಟಪಟ್ಟು ಗೆದ್ದ ಹಕ್ಕುಗಳ ಮೇಲೆ ಅಭೂತಪೂರ್ವ ದಾಳಿ ನಡೆಸಿದೆ. ಕಾರ್ಮಿಕ ವರ್ಗದ ಆಂದೋಲನವನ್ನು ದುರ್ಬಲಗೊಳಿಸಲು, ಕಾರ್ಮಿಕ ಸಂಘಗಳ ರಚನೆಯನ್ನು ತಡೆಯಲು ಮತ್ತು ಮುಷ್ಕರ ಹಕ್ಕನ್ನು ನಿರಾಕರಿಸಲು ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳನ್ನು ಬದಲಾಯಿಸಿದೆ. ನವ–ಉದಾರವಾದಿ ಸುಧಾರಣೆಗಳ ಈ ಪ್ರಮುಖ ಕಾರ್ಯಸೂಚಿಯನ್ನು ಸಾಂಕ್ರಾಮಿಕದ ಸಮಯದಲ್ಲಿ ಸರ್ವಾಧಿಕಾರಿಶಾಹೀ ರೀತಿಯಲ್ಲಿ ಮುಂದೊತ್ತಲಾಗುತ್ತಿದೆ.

ಕಾರ್ಮಿಕ ವರ್ಗದ ನಡುವೆ ಗರಿಷ್ಠ ಐಕ್ಯತೆಯನ್ನು ಬೆಳೆಸುವ ಮೂಲಕ ಮಾತ್ರ ಆಳುವ ವರ್ಗಗಳ ದಾಳಿಯನ್ನು ಸೋಲಿಸಬಹುದು ಎಂದು ಕಾರ್ಮಿಕ ವರ್ಗದ ಚಳವಳಿಯ ಅನುಭವವು ನಮಗೆ ಕಲಿಸುತ್ತದೆ. ಆಳುವ ವರ್ಗಗಳು ಧರ್ಮ, ಜಾತಿ ಇತ್ಯಾದಿಗಳ ಆಧಾರದ ಮೇಲೆ ವಿಭಜಿಸಲು ಪ್ರಯತ್ನಿಸುವ ಮೂಲಕ ಕಾರ್ಮಿಕ ವರ್ಗದ ಐಕ್ಯತೆಯನ್ನು ಹಾಳುಮಾಡಲು ತಮ್ಮ ಗರಿಷ್ಟ ಪ್ರಯತ್ನವನ್ನು ಮಾಡುತ್ತಿದ್ದರೆ, ಕಮ್ಯುನಿಸ್ಟರು ಈ ವಿಭಜಕ ರಾಜಕಾರಣವನ್ನು ಎದುರಿಸಲು ಮತ್ತು ಕಾರ್ಮಿಕ ವರ್ಗವನ್ನು ಒಂದುಗೂಡಿಸಲು ಪ್ರಯತ್ನಿಸಿದ್ದಾರೆ. ಆಳುವ ವರ್ಗಗಳ ದಾಳಿಯ ವಿರುದ್ಧ ಒಗ್ಗಟ್ಟಿನಿಂದ ಹೋರಾಡಲು ವಿವಿಧ ಕೇಂದ್ರ ಕಾರ್ಮಿಕ ಸಂಘಗಳ ಜಂಟಿ ಸಮನ್ವಯ ಸಮಿತಿಗಳನ್ನು ರಚಿಸಲಾಯಿತು.

ಸಿಪಿಐ(ಎಂ) 1964 ರಲ್ಲಿ ಅಂಗೀಕರಿಸಿದ ಮತ್ತು ತರುವಾಯ 2000 ರಲ್ಲಿ ಸಮಕಾಲಿಕಗೊಳಿಸಿದ ಕಾರ್ಯಕ್ರಮವು ಕಾರ್ಮಿಕ ವರ್ಗ ಮತ್ತು ರೈತರ ದೃಢವಾದ ಮೈತ್ರಿಕೂಟದ ಮೂಲಕ ಮಾತ್ರ ನಮ್ಮ ಸಮಾಜದಲ್ಲಿ ಕ್ರಾಂತಿಕಾರಿ ಪರಿವರ್ತನೆ ಸಾಧ್ಯವಾಗುತ್ತದೆ ಎಂದು ಹೇಳುತ್ತದೆ. ಕಾರ್ಮಿಕ ವರ್ಗ ಮತ್ತು ಅದರ ರಾಜಕೀಯ ಪಕ್ಷವಾದ ಸಿಪಿಐ (ಎಂ)ನ ನಾಯಕತ್ವದ ಮಹತ್ವವನ್ನು ಮತ್ತಷ್ಟು ವಿವರಿಸುತ್ತ ಕಾರ್ಯಕ್ರಮವು ಹೀಗೆ ಹೇಳುತ್ತದೆ: "ಐತಿಹಾಸಿಕವಾಗಿ ಕಾರ್ಮಿಕ ವರ್ಗವನ್ನು ಹೊರತುಪಡಿಸಿ ಆಧುನಿಕ ಸಮಾಜದಲ್ಲಿ ಬೇರೆ ಯಾವುದೇ ವರ್ಗವು ಈ ಪಾತ್ರವನ್ನು ನಿರ್ವಹಿಸಲು ಉದ್ದೇಶಿಸಿಲ್ಲ ಮತ್ತು ನಮ್ಮ ಕಾಲದ ಸಂಪೂರ್ಣ ಅನುಭವ ಈ ಸತ್ಯವನ್ನು ಸಾಕಷ್ಟು ಎತ್ತಿ ತೋರಿಸುತ್ತದೆ" ಎಂದಿದೆ. ಇದು ಕಾರ್ಮಿಕ ವರ್ಗದ ಆಂದೋಲನವನ್ನು ಬಲಪಡಿಸುವ ಮತ್ತು ಅಂತಹ ಹೋರಾಟಗಳಿಗೆ ನೇತೃತ್ವ ನೀಡುವ ನಮ್ಮ ಇಂದಿನ ತಿಳುವಳಿಕೆಯನ್ನು ನಿರೂಪಿಸುತ್ತದೆ.

ಇಂದು, ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಎತ್ತಲಾಗುತ್ತಿದ್ದ ಕೆಲವು ಬೇಡಿಕೆಗಳನ್ನು ಎತ್ತುತ್ತಿರುವ ಹೋರಾಟಗಳಲ್ಲಿ ಹೆಚ್ಚೆಚ್ಚು ಸಂಖ್ಯೆಯಲ್ಲಿ ಕಾರ್ಮಿಕರು ಹೊರಬರುತ್ತಿರುವಾಗ ಮತ್ತು ರೈತರು ಸಹ ಅವರ ಮೇಲೆ ಹೆಚ್ಚುತ್ತಿರುವ ದಾಳಿಯನ್ನು ಪ್ರತಿರೋಧಿಸುತ್ತಿರುವಾಗ, ಈ ಹೋರಾಟಗಳನ್ನು ಬಲಪಡಿಸುವುದು ಮತ್ತು ಅವುಗಳನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವ ಹೊಣೆ ಮತ್ತೊಮ್ಮೆ ಕಮ್ಯುನಿಸ್ಟರ ಮೇಲೆ ಬಂದಿದೆ. ಉತ್ತುಂಗಕ್ಕೇರಿದ ವರ್ಗ ಪ್ರಜ್ಞೆಯೊಂದಿಗೆ ವರ್ಗ ಹೋರಾಟಗಳನ್ನು ತೀಕ್ಷ್ಣಗೊಳಿಸುವುದು ಮುಂದೆ ಸಾಗುವ ಏಕೈಕ ಮಾರ್ಗವಾಗಿದೆ. ■

# ಮಹಿಳಾ ವಿಮೋಚನೆಯ ಹೋರಾಟದ ನೂರು ವರ್ಷಗಳು

**ಸ್ವಾತಂತ್ರ್ಯ ಹೋರಾಟದೊಳಗೆ ಮಹಿಳಾ ಸಮಾನತೆಗಾಗಿ ಹೋರಾಟಕ್ಕಿರುವ ಮೂರು ಕಠಿಣ ಸಮಸ್ಯೆಗಳಿಗೆ ಕಮ್ಯುನಿಷ್ಟರು ಹೊಸ ದೃಷ್ಟಿಕೋನವನ್ನು ತಂದರು. ಮೊದಲನೆಯದು: ಕಾರ್ಮಿಕ ವರ್ಗದ ಸದಸ್ಯರಾಗಿ ಮಹಿಳೆಯರ ಮೇಲಿನ ಶೋಷಣೆ ಮತ್ತು ಉಳಿಗಮಾನ್ಯ ಪದ್ಧತಿ ಮತ್ತು ಬಂಡವಾಳಶಾಹಿಗಳ ವಿರುದ್ಧದ ಹೋರಾಟ ಮತ್ತು ಮಹಿಳೆಯರ ವಿಮೋಚನೆಗಾಗಿನ ಹೋರಾಟದ ನಡುವಿನ ಆಂತರಿಕ ಸಂಬಂಧ; ಎರಡನೆಯದು: ಮಹಿಳಾ ನಾಗರಿಕತ್ವದ ಸಮಸ್ಯೆಗಳು ಮತ್ತು ಹೆಚ್ಚು ನಿರ್ದಿಷ್ಟವಾಗಿ ಹೇಳಬೇಕೆಂದರೆ ಜಾತಿ ವ್ಯವಸ್ಥೆಯ ನಿರ್ಮೂಲನೆಗಾಗಿಯೂ ಸಹ ಹೋರಾಟ ಮಾಡುವುದು; ಮೂರನೆಯದು: ಸಂಪ್ರದಾಯ, ಧಾರ್ಮಿಕ ಗ್ರಂಥಗಳು ಮತ್ತು ಚಾಲ್ತಿಯಲ್ಲಿರುವ ಬಂಡವಾಳಶಾಹಿ ಸಂಸ್ಕೃತಿಗಳು ಅನುಮೋದಿಸಿರುವ ಮಹಿಳೆಯರ ಮೇಲಿನ ಹಿಂಸಾಚಾರದ ಪ್ರಶ್ನೆ.**

**- ಬೃಂದಾ ಕಾರಟ್** **ಅನು: ಲವಿತ್ರ**

1920ರಲ್ಲಿ ಸ್ಥಾಪನೆಯಾದ ಕಮ್ಯುನಿಸ್ಟ್ ಪಕ್ಷ ಭಾರತದಲ್ಲಿನ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳ ನಿರ್ದಿಷ್ಟ ಸಂದರ್ಭದ ಜೊತೆ ಮಾರ್ಕ್ಸ್ ವಾದಿ ಸಿದ್ಧಾಂತವನ್ನು ಜೊತೆಗೂಡಿಸಿ ಮಹಿಳೆಯರ ವಿಮೋಚನಾ ಹೋರಾಟವನ್ನು ಮುಂದೆ ತೆಗೆದುಕೊಂಡು ಹೋಗಲು ಪ್ರಯತ್ನಿಸಿದೆ. "ಮಹಿಳೆಯರ ಪ್ರಶ್ನೆ" ಕುರಿತು ಪಕ್ಷದ ತಿಳುವಳಿಕೆ ತನ್ನದೇ ಆದ ನೇರ ಕೆಲಸದ ಮೂಲಕ ವಿಕಸನಗೊಂಡಿದೆ, ಇದು ವಿಶೇಷವಾಗಿ ಮಹಿಳಾ ಕಮ್ಯುನಿಸ್ಟರ ಕೆಲಸ ಅನುಭವದಿಂದ ವಿಕಸನಗೊಂಡಿದೆ. ಇಂದು ಬಿಜೆಪಿ–ಆರೆಸ್ಸೆಸ್ ಪ್ರತಿಗಾಮಿ ಆಡಳಿತದಡಿಯಲ್ಲಿ

**ಆರಂಭದ ವರ್ಷಗಳು**

ಸ್ವಾತಂತ್ರ್ಯ ಹೋರಾಟದೊಳಗೆ ಮಹಿಳಾ ಸಮಾನತೆಗಾಗಿ ಹೋರಾಟಕ್ಕಿರುವ ಮೂರು ಕಠಿಣ ಸಮಸ್ಯೆಗಳಿಗೆ ಕಮ್ಯುನಿಷ್ಟರು ಹೊಸ ದೃಷ್ಟಿಕೋನವನ್ನು ತಂದರು. ಮೊದಲನೆಯದು: ಕಾರ್ಮಿಕ ವರ್ಗದ ಸದಸ್ಯರಾಗಿ ಮಹಿಳೆಯರ ಮೇಲಿನ ಶೋಷಣೆ ಮತ್ತು ಉಳಿಗಮಾನ್ಯ ಪದ್ಧತಿ ಮತ್ತು ಬಂಡವಾಳಶಾಹಿಗಳ ವಿರುದ್ಧದ ಹೋರಾಟ ಮತ್ತು ಮಹಿಳೆಯರ ವಿಮೋಚನೆಗಾಗಿನ ಹೋರಾಟದ ನಡುವಿನ ಆಂತರಿಕ ಸಂಬಂಧ; ಎರಡನೆಯದು: ಮಹಿಳಾ ನಾಗರಿಕತ್ವದ ಸಮಸ್ಯೆಗಳು ಮತ್ತು ಹೆಚ್ಚು ನಿರ್ದಿಷ್ಟವಾಗಿ ಹೇಳಬೇಕೆಂದರೆ ಜಾತಿ ವ್ಯವಸ್ಥೆಯ ನಿರ್ಮೂಲನೆಗಾಗಿಯೂ ಸಹ ಹೋರಾಟ ಮಾಡುವುದು; ಮೂರನೆಯದು: ಸಂಪ್ರದಾಯ, ಧಾರ್ಮಿಕ ಗ್ರಂಥಗಳು ಮತ್ತು ಚಾಲ್ತಿಯಲ್ಲಿರುವ ಬಂಡವಾಳಶಾಹಿ ಸಂಸ್ಕೃತಿಗಳು ಅನುಮೋದಿಸಿರುವ ಮಹಿಳೆಯರ ಮೇಲಿನ ಹಿಂಸಾಚಾರದ ಪ್ರಶ್ನೆ

1929 ರ ಮೀರಟ್ ಪಿತೂರಿ ಪ್ರಕರಣದಲ್ಲಿ ಆರೋಪಿಸಲ್ಪಟ್ಟ 18 ಕಮ್ಯುನಿಸ್ಟರ ರಕ್ಷಣಾ ಹೇಳಿಕೆಯು ಭಾರತೀಯ ಕಮ್ಯುನಿಸ್ಟರನ್ನು ಪ್ರತಿಬಿಂಬಿಸುವ ಪ್ರಮುಖ ಆರಂಭಿಕ ಹೇಳಿಕೆಯಾಗಿದೆ. "ಕುಟುಂಬವನ್ನು ಸುತ್ತುವರೆದಿರುವ ಭಾವನಾ ಕವಚವನ್ನು ಸದಾ ಶೋಷಣೆಯ ಸಾಧನವಾಗಿ ಬಳಸಿಕೊಳ್ಳಲಾಗುತ್ತದೆ. ಸಮಾಜವಾದಿ ವ್ಯವಸ್ಥೆ ಮಾತ್ರವೇ, ಈ ಭಾವನಾ ಕವಚದಡಿಯಲ್ಲಿ ನಡೆಯುವ ಮಹಿಳೆಯರ ಮತ್ತು ಮಕ್ಕಳ ಮೇಲಿನ ಕೌಟುಂಬಿಕ ದೌರ್ಜನ್ಯಗಳನ್ನು ನಿಲ್ಲಿಸುತ್ತದೆ" ಎಂದು ನಾವು ಹೇಳುತ್ತೇವೆ. ಸಾಂಪ್ರದಾಯಿಕವಾಗಿ ಮಹಿಳೆಯರ ಸ್ಥಾನಮಾನವನ್ನು ಪುರುಷರಿಗಿಂತ ಕೆಳಗೆ ಮತ್ತು ಕೆಲವೊಮ್ಮೆ ಗುಲಾಮರ ಸ್ಥಿತಿಯಲ್ಲಿ ಇಡಲಾಗಿದೆ. ಸೋವಿಯತ್ ಒಕ್ಕೂಟದಲ್ಲಿ ನಡೆಯುತ್ತಿರುವ ಮಹಿಳೆಯರ ವಿಮೋಚನೆಯೇ . ನಮ್ಮ ಮುಂದಿರುವ ದಾರಿ. ವರ್ಗ ಶೋಷಣೆಯ ವಿರುದ್ಧ ಯುದ್ಧ ಘೋಷಿಸಿರುವಾಗಲೂ ಕಮ್ಯುನಿಸ್ಟರು ಪುರುಷಪ್ರಧಾನ ಕುಟುಂಬದ ರಚನೆಗಳ ಬಗ್ಗೆ ಬಲವಾದ ಟೀಕೆ ಮಾಡುತ್ತಾರೆ.

ವರ್ಗಹೋರಾಟ ಮತ್ತು ಲಿಂಗ–ಆಧಾರಿತ ತಾರತಮ್ಯದ ವಿರುದ್ಧದ ಹೋರಾಟದಲ್ಲಿ ಮಹಿಳೆಯರು ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸುವುದು.

ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ, ಮಹಿಳೆಯರನ್ನು ಸಾಮಾಜಿಕ ಅಸಹಕಾರದತ್ತ, ಉಪ್ಪಿನ ಸತ್ಯಗ್ರಹ ಮುಂತಾದ ಕೆಲಸಗಳಲ್ಲಿ ಅಣಿ ನೆರೆಸಲಾಯಿತು. ಕಾರ್ಮಿಕ ಸಂಘಗಳಲ್ಲಿ ಕೆಲಸ ಮಾಡುವ ಕಮ್ಯುನಿಸ್ಟರು ಮುಂಬೈನ ಕಾರ್ಖಾನೆಗಳಲ್ಲಿ, ಸೋಲಾಪುರ್ ನ ಬೀಡಿ ಉದ್ಯಮದಲ್ಲಿ ಮಹಿಳಾ ಕಾರ್ಮಿಕರನ್ನು ದೊಡ್ಡ ಹೋರಾಟಗಳಿಗೆ ಅಣಿ ನೆರೆಸುತ್ತಿದ್ದರು. ವೇತನ, ಭೂಮಿ, ಘನತೆ ಮುಂತಾದ ಮೂಲ ವಿಷಯಗಳ ಸುತ್ತ, ಬಿಹಾರದ ಮತ್ತು ಬಂಗಾಳದ ಕೃಷಿ ಕಾರ್ಮಿಕರು ಮತ್ತು ಬಡ ರೈತ ಮಹಿಳೆಯರನ್ನು ಕಮ್ಯುನಿಸ್ಟರು ಸಂಘಟಿಸುತ್ತಿದ್ದರು. ಕೆಲವು ಕಾರ್ಮಿಕ ಸಂಘಟನೆಗಳ ನೇತೃತ್ವವನ್ನು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ವಹಿಸಿತ್ತು. 1920 ರಲ್ಲಿ ರೂಪುಗೊಂಡ ಅಖಿಲ ಭಾರತ ಟ್ರೇಡ್ ಯುನಿಯನ್ ಕಾಂಗ್ರೆಸ್ ಶೀಘ್ರದಲ್ಲೇ ಕಮ್ಯುನಿಸ್ಟರ ಪ್ರಭಾವಕ್ಕೆ ಒಳಗಾಯಿತು. ಸಂಘಟನೆಯ ಮೊದಲ ಸಂಘಟಕರಲ್ಲಿ ಒಬ್ಬರಾದ ಸಂತೋಷ್ ದೇವಿ ಅವರು ಎಐಟಿಯುಸಿ ರಚನೆಯಾದ ಕೂಡಲೇ ಅದನ್ನು ಸೇರಿಕೊಂಡರು ಮತ್ತು ಬಂಗಾಳದಲ್ಲಿ ಸೆಣಬು ಕಾರ್ಮಿಕರು ಮತ್ತು ಅವರ ಕುಟುಂಬಗಳ ನಡುವೆ ತಮ್ಮ ಕೆಲಸ ಪ್ರಾರಂಭಿಸಿದರು. ಬಾಂಬೆಯ ಪಾರ್ವತಿ ಭೋರೆ ಮತ್ತು ನಂತರ ಮೂವತ್ತರ ಹಾಗೂ ನಲವತ್ತರ ದಶಕದಲ್ಲಿ ಅಹಲ್ಯ ರಂಗ್ನೇಕರ್, ಉಷತಾಯಿ ದಾಂಗೆ, ವಿಮಲ ರಣದಿವೆ ಮತ್ತು ಅನೇಕ ಸಂಘಟಕರು ಭಾಗಿಯಾಗಿದ್ದರು. 1936 ರಲ್ಲಿ ಆದ ಅಖಿಲ ಭಾರತ ಕಿಸಾನ್ ಸಭೆಯ ರಚನೆ ಮತ್ತು ಕಮ್ಯುನಿಸ್ಟರು ವಹಿಸಿದ ಪ್ರಮುಖ ಪಾತ್ರದೊಂದಿಗೆ, ರೈತ ಮಹಿಳೆಯರನ್ನು ಭೂಮಿ ಮತ್ತು ಘನತೆಯ ವಿಷಯಗಳ ಹೋರಾಟಕ್ಕೆ ಅಣಿ ನೆರೆಸಲಾಯಿತು. ತೆಭಾಗಾ, ತೆಲಂಗಾಣ, ಸುರ್ಮಾ ಕಣಿವೆ ಹೋರಾಟ, ಇವೆಲ್ಲವೂ ಆರ್ಥಿಕ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಭಾರತದ ದುಡಿಯುವ ಜನರ ಹೋರಾಟಗಳಲ್ಲಿ ಹೆಗ್ಗುರುತುಗಳಾಗಿವೆ. ಈ ಮಹಾನ್ ಹೋರಾಟಗಳಲ್ಲಿ ಮಹಿಳೆಯರ ಸಮಾನ ಭಾಗವಹಿಸುವಿಕೆ ಇದ್ದಿದ್ದು ಮಾತ್ರವಲ್ಲದೆ ಅನೇಕ ಸಲ ಕೈಯಲ್ಲಿ ಕೆಂಪು ಧ್ವಜ ಹಿಡಿದು ಪೂರ್ತಿ ಹೋರಾಟದ ನೇತೃತ್ವವನ್ನು ವಹಿಸಿದ್ದರು.

ಪಕ್ಷದ ನೇತೃತ್ವದಲ್ಲಿ ಮಹಿಳೆಯರ ವರ್ಗ ಆಧಾರಿತ ಕೆಲಸಗಳು ಪ್ರಭುತ್ವದ ಸಾಮಾಜಿಕ ನಿಯಮಗಳಿಗೆ ಸವಾಲು ಒಡ್ಡುವಂತಿದ್ದವು. ಪುರುಷಪ್ರಧಾನ ಸಂಸ್ಕೃತಿಗಳಿಗೆ, ವರ್ಗ ಮತ್ತು ಸಾಮಾಜಿಕ ಕೋನದಿಂದ ದುಪ್ಪಟ್ಟು ಸವಾಲಾಗಿತ್ತು.



ವಾರಲಿ ಹೋರಾಟದಲ್ಲಿ ಗೋದಾವರಿ ಪರಳೇಕರ್

1945 ರಲ್ಲಿ ಪ್ರಾರಂಭವಾದ ಥಾಣೆ, ಮಹಾರಾಷ್ಟ್ರದ ವಾರಲಿ ಆದಿವಾಸಿಗಳ ನಡುವಿನ ಗೋದಾವರಿ ಪರುಳೇಕರ್ ಅವರ ಕೆಲಸದಲ್ಲಿ ಈ ವಿಷಯವು (ಪ್ರಭುತ್ವಕ್ಕೆ ಸವಾಲೊಡ್ಡುವುದು) ತೀವ್ರವಾಗಿ ಕಂಡುಬಂದಿದೆ. ಭೂಮಾಲೀಕರ ಕ್ರೂರ ಶೋಷಣೆಯ ವಿರುದ್ಧದ ಹೋರಾಟದಲ್ಲಿ, ವರ್ಗ ಹೋರಾಟದಲ್ಲಿ ಭಾಗವಹಿಸಿದ ಆದಿವಾಸಿ ಮಹಿಳೆಯರು ತಮ್ಮ ವಿಮೋಚನೆಯ ಭಾವನೆಯನ್ನು ವಿವರಿಸುತ್ತಾ, ತಮ್ಮ ಹಾಗೂ ಪ್ರಭುತ್ವದ ನಡುವಿನ ಸಂಬಂಧಗಳ ಬದಲಾವಣೆ ಆದದ್ದು ಸಾಮೂಹಿಕ ಸಂಘಟನೆಗಳಲ್ಲಿ ಭಾಗವಹಿಸುವ ಮೂಲಕ ಎಂದರು. ಸಾಮೂಹಿಕ ಸಂಘಟನೆಗಳಲ್ಲಿನ ಭಾಗವಹಿಸುವಿಕೆ ಭೂಮಾಲೀಕರ ಕೈಯಲ್ಲಿ ಅವರು ಎದುರಿಸಿದ ಭಯಾನಕ ವ್ಯವಸ್ಥಿತ ಲೈಂಗಿಕ ದೌರ್ಜನ್ಯದ ವಿರುದ್ಧ ಮಾತನಾಡಲು ಅವರಿಗೆ ಅನುವು ಮಾಡಿಕೊಟ್ಟಿತು.

ತ್ರಿಪುರದಲ್ಲಿ, ದಸರತ್ ದೇಬ್ ಬರ್ಮಾ ಅವರ ನೇತೃತ್ವದಲ್ಲಿ, ಕಮ್ಯುನಿಸ್ಟ್ ಪಕ್ಷವೇ, ಹೆಚ್ಚು ಶೋಷಿತ ಬುಡಕಟ್ಟು ಸಮುದಾಯಗಳಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಬುಡಕಟ್ಟು ಮಹಿಳೆಯರಲ್ಲಿ ಸಾಕ್ಷರತೆ ಮತ್ತು ಸಾಮಾಜಿಕ ಪ್ರಜ್ಞೆಯನ್ನು ತಂದಿದೆ. ಈ ಸಾಮಾಜಿಕ ಪ್ರಜ್ಞೆಯ ಪರಿಣಾಮವಾಗಿ, ಮೂರು ಬುಡಕಟ್ಟು ಮಹಿಳೆಯರು ಹುತಾತ್ಮರಾದ ಪಾಳೇಗಾರಿ "ಟಿಟುನ್" ಬಲವಂತ ವಸೂಲಿಯ ದೊಡ್ಡ ದಂಗೆ ನಡೆಯಿತು.

**"ವರ್ಗದೊಳಗೆ"**

ವರ್ಗದೊಳಗಿನ ಪುರುಷ ಮತ್ತು ಮಹಿಳೆಯರ ನಡುವಿನ ಅಸಮಾನ ಸಂಬಂಧಗಳ ಸವಾಲುಗಳನ್ನು ಮೊದಲು ಮಹಿಳೆಯರೇ ಎದುರಿಸಬೇಕಾಯಿತು. ತೆಲಂಗಾಣದ ರೈತರ ಸಶಸ್ತ್ರ ಹೋರಾಟದಲ್ಲಿ ಭಾಗವಹಿಸಿದವರ ಬರಹಗಳು ಇಂತಹ ಅನೇಕ ವಿಷಯಗಳನ್ನು ಎತ್ತಿದವು. ಕುಟುಂಬದ ಅಸ್ತಿತ್ವದಲ್ಲಿರುವ ಸಾಮಾಜಿಕ ಸಮೀಕರಣಗಳನ್ನು ಮಹಿಳೆಯರು ಪ್ರಶ್ನಿಸಿ, 'ಕುಟುಂನ ನಿರ್ಧಾರಿತ" ಅವರ ಸಂಗಾತಿಗಳು ಹೋರಾಟಕ್ಕೆ ಬೆಂಬಲಿಸದ ಕಾರಣ ಅನೇಕ ವಿವಾಹಗಳು ವಿಚ್ಛೇದನೆಯ ಅಂಗಳದಲ್ಲಿ ಕೊನೆಗೊಂಡವು. ಪಿ ಸುಂದರಯ್ಯ ಅವರು ತಮ್ಮ ಬರವಣಿಗೆಗಳಲ್ಲಿ ಇಂತಹ ಅನೇಕ ಉದಾಹರಣೆಗಳನ್ನು ಬರೆದಿದ್ದಾರೆ. ಸಶಸ್ತ್ರ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಮಲ್ಲು ಸ್ವರಾಜ್ಯಂ ಅವರ ಹೇಳಿಕೆಗಳು, ಪಕ್ಷವು ಹೇಗೆ ಮಹಿಳೆಯರನ್ನು ಮಾತನಾಡಲು, ಮುಂಚೂಣಿಯಲ್ಲಿರಲು ಪ್ರೋತ್ಸಾಹಿಸುತ್ತದೆ ಎಂಬುದನ್ನು ತೋರಿಸುತ್ತದೆ. ಚಳುವಳಿಯಲ್ಲಿನ ಪುರುಷರಿಗೆ ಹಿತಕರ ಅನಿಸದಿದ್ದರೂ, ಸಂಗಾತಿಗಳಿಬ್ಬರೂ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಾಗ, ಪುರುಷ ಸಂಗಾತಿ ಗಳು ಏಕೆ ಮನೆಕೆಲಸದಲ್ಲಿ ಸಹಕಾರ ನೀಡಬಾರದು ಎಂಬುವ ಪ್ರಶ್ನೆಗಳನ್ನು ಮಹಿಳಾ ಸಂಗಾತಿಗಳು ಎತ್ತಿದರು. ಹೀಗೆ ಪಕ್ಷದ ಸಹಾಯದಿಂದ ಪುರುಷರನ್ನು ಮತ್ತು ಮಹಿಳೆಯರನ್ನು ಒಗ್ಗೂಡಿಸಿದ ಚಳುವಳಿಗಳಲ್ಲಿ ಕಮ್ಯುನಿಸ್ಟ್ ಮಹಿಳೆಯರು, ಚಳುವಳಿಗಳೊಳಗೆ ಹಾಗೂ ಹೊರಗೆ ಮಹಿಳಾ ಸಮಾನತೆಗಾಗಿ ಹೋರಾಟದ ಮುಂಚೂಣಿಯಲ್ಲಿದ್ದರು.

ಪ್ರಮುಖ ಪಾಠವೆಂದರೆ, ವರ್ಗ ಹೋರಾಟವು ಮಹಿಳೆಯರ ಪ್ರಜ್ಞೆಯನ್ನು ಪರಿವರ್ತಿಸುತ್ತದೆ. ಲಿಂಗ ಆಧಾರಿತ ತಾರತಮ್ಯದ ಎಲ್ಲಾ ಅಂಶಗಳನ್ನು ಚಳುವಳಿಯೊಳಗೆ ಸೇರಿಸುವುದರ ಮೂಲಕ ಅದು ಹೋರಾಟದ ಸ್ವರೂಪವನ್ನು ಸಮಾನವಾಗಿ ವಿಸ್ತರಿಸುತ್ತದೆ. ಇದು ವರ್ಗ ಹೋರಾಟವನ್ನು ಬಲಪಡಿಸುತ್ತದೆ. ಹಲವಾರು ದಶಕಗಳ ನಂತರ, ಬಿ.ಟಿ.ರಣದೀವೆ ಅವರು ಟ್ರೇಡ್ ಯೂನಿಯನ್ ಚಳವಳಿಯೊಳಗೆ ಪ್ರತ್ಯೇಕ ಕಾರ್ಯನಿರತ ಮಹಿಳಾ ಸಮಿತಿಗಳು ಮತ್ತು ವೇದಿಕೆಗಳನ್ನು ನಿರ್ಮಿಸಿದರು, ಇದು ಆರಂಭಿಕ ಹಂತಗಳಲ್ಲಿ ಹೆಚ್ಚಿನ ಪ್ರತಿರೋಧವನ್ನು ಎದುರಿಸಿತು. "ವಿಶ್ವದ ಕಾರ್ಮಿಕರೇ ಒಂದಾಗಿ" ಎಂದು ಮಾರ್ಕ್ಸ್ ಹೇಳಿದಾಗ ಅವರು ಕೇವಲ ಪುರುಷ ಕಾರ್ಮಿಕರ ಬಗ್ಗೆ ಮಾತನಾಡುತ್ತಿಲ್ಲ" ಎಂಬುದು ಅವರ ಪ್ರಸಿದ್ಧ ಹೇಳಿಕೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಬಂಡವಾಳಶಾಹಿ ಯಿಂದ ಆಗುವ ಲಿಂಗ ಆಧಾರಿತ ವಿರುದ್ಧ ವರ್ಗವೇ ಹೋರಾಡಬೇಕಾಗುತ್ತದೆ.

**ಮಹಿಳಾ ವಿಮೋಚನೆಯಲ್ಲಿ ಅಂತರ್ಗತವಾಗಿರುವ ಜಾತಿ ವಿರುದ್ಧದ ಹೋರಾಟ**

ಆರಂಭದಲ್ಲಿ ಕಮ್ಯುನಿಸ್ಟರ ಹೆಚ್ಚಿನ ಕೆಲಸಗಳು ಸಾಮಾಜಿಕ ಸುಧಾರಣೆಗಾಗಿ ಮತ್ತು ದಲಿತರ ವಿಮೋಚನೆಗಾಗಿ ಜಾತಿ ವಿರೋಧಿ ಹೋರಾಟಗಳ ಕ್ಷೇತ್ರದಲ್ಲಿದ್ದವು. ಇದು ಹೆಚ್ಚು ತುಳಿತಕ್ಕೊಳಗಾದ ಜಾತಿಗಳ ಮಹಿಳೆಯರ ಮೇಲೆ ದೊಡ್ಡ ಪರಿಣಾಮ ಬೀರಿತು. ಅದೇ ಸಮಯದಲ್ಲಿ ಮೇಲ್ಜಾತಿ ಮಹಿಳೆಯರ ಕೆಳಮಟ್ಟದ ಸ್ಥಾನಮಾನವನ್ನು ಕೇರಳದ ನಂಬೂದಿರಿಗಳ ನಡುವೆ ಇಎಂಎಸ್ ನೇತೃತ್ವದಲ್ಲಿ ಚಳವಳಿಯಂತೆ ಕೈಗೆತ್ತಿಕೊಳ್ಳಲಾಯಿತು ಮತ್ತು ಇದು ಅವರಲ್ಲಿ ಶಾಶ್ವತ ಪರಿಣಾಮ ಬೀರಿತು. ಆದ್ದರಿಂದ ಇದು ಒಂದು ತಾರ್ಕಿಕ ಬೆಳವಣಿಗೆಯಾಗಿದ್ದು, ಹಿಂದೂ ಸಂಹಿತೆ ಸುಧಾರಣಾ ಮಸೂದೆ ಚರ್ಚೆ ಮತ್ತು ಹೋರಾಟಗಳ ಸಮಯದಲ್ಲಿ, ಕಮ್ಯುನಿಸ್ಟ್ ಮಹಿಳೆಯರು ಸುಧಾರಣೆಗೆ ಬೆಂಬಲ ನೀಡುವ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದರು. ಕಮ್ಯುನಿಸ್ಟ್ ಮಹಿಳೆಯರ ನೇತೃತ್ವದ ಚಳುವಳಿಗಳಿಗೆ ಸಂಬಂಧಪಟ್ಟಂತೆ ಹಿಂದೂ ಸಂಹಿತೆ ಸುಧಾರಣಾ ಮಸೂದೆಯ ಹೋರಾಟವು ಜಾತಿ ವ್ಯವಸ್ಥೆಯ ವಿರುದ್ಧದ ಹೋರಾಟದೊಂದಿಗೆ ಹೆಣೆದುಕೊಂಡಿದೆ. ನಲವತ್ತರ ದಶಕದಿಂದ ಐವತ್ತರ ದಶಕದ ತನಕ, ಹಿಂದೂ ಕಾನೂನುಗಳಲ್ಲಿ ಸುಧಾರಣೆಗಾಗಿ ಮಹಿಳೆಯರ ದೊಡ್ಡ ಹೋರಾಟಗಳನ್ನು ಕಂಡಿತು. ಹಿಂದಿನ ಕಮ್ಯುನಿಸ್ಟರು ಕೈಗೆತ್ತಿಕೊಂಡ ಜಾತಿ ದಬ್ಬಾಳಿಕೆಯ ವಿರುದ್ಧದ ಹೋರಾಟ ಮತ್ತು ಜನನ ಆಧಾರಿತ ಜಾತಿ ಅಸಮಾನತೆ, ವರ್ಗ ಶೋಷಣೆ ಮತ್ತು ಲಿಂಗ ದಬ್ಬಾಳಿಕೆಯ ಮೂರು ದಮನಗಳ ಸಂಗಮವನ್ನು ಎದುರಿಸುವ ದಲಿತ ಮಹಿಳೆಯರ ಹೋರಾಟವನ್ನು ಕಮ್ಯುನಿಸ್ಟ್ ಮಹಿಳೆಯರು ಸತತವಾಗಿ ಆಯೋಜಿಸಿದ್ದಾರೆ. ಜಾತಿ ವಿರುದ್ಧ ಕಮ್ಯುನಿಸ್ಟರ ತಿಳುವಳಿಕೆ ಮತ್ತು ಕೆಲಸ ಹಿಂದೆನೂ ಇಂದಿಗೂ ಎಷ್ಟು ಪ್ರಸ್ತುತವಾಗಿದೆ ಎಂಬುದಕ್ಕೆ ಹತ್ರಾಸ್ ಪ್ರಕರಣ ಈಗಲೂ ಒಂದು ಉದಾಹರಣೆಯಾಗಿದೆ.

**ಮಹಿಳಾ ಸಮೂಹದಲ್ಲಿ ಕಮ್ಯುನಿಸ್ಟ್ ಕೆಲಸ**

ಎಲ್ಲಾ ವರ್ಗದ ಮಹಿಳೆಯರನ್ನು ಬ್ರಿಟಿಷ್ ಆಡಳಿತದ ವಿರುದ್ಧ ಸಜ್ಜುಗೊಳಿಸುವ ಉದ್ದೇಶದಿಂದ, ಮುಂಚಿನ ವರ್ಷಗಳಲ್ಲಿ ಕಮ್ಯುನಿಸ್ಟ್ ಮಹಿಳೆಯರು ಎ.ಐ.ಡಬ್ಲ್ಯೂ.ಸಿಯಂತಹ ಮಹಿಳೆಯರ ಜಂಟಿ ಸಂಸ್ಥೆಗಳಲ್ಲಿ ಕೆಲಸ ಮಾಡಿದರು, ಇದರಲ್ಲಿ ಕಾಂಗ್ರೆಸ್ ಮಹಿಳೆಯರೂ ಒಳಗೊಂಡಿದ್ದರು. ಆದಾಗ್ಯೂ ಅವರ ಒತ್ತು ಮಹಿಳೆಯರ ಬಡ ವರ್ಗಗಳನ್ನು ತಲುಪುವುದು ಮತ್ತು ವಿಶಾಲ ಚಳವಳಿಯ ಭಾಗವಾಗಿ ಅವರ ಬೇಡಿಕೆಗಳನ್ನು ಎತ್ತುವುದು ಆಗಿತ್ತು. ಜಾತಿ ವಿರುದ್ಧ ಮತ್ತು ಜಾತ್ಯತೀತ ಮೌಲ್ಯಗಳ ಪರವಾಗಿ ರಾಜಿಯಾಗದ ಹೋರಾಟವು ಸಂಘಟನೆಯ ಮೇಲೆ ಪ್ರಭಾವ ಬೀರಿತು ಮತ್ತು ಶೀಘ್ರದಲ್ಲೇ ಎಡ–ಆಧಾರಿತ ಮಹಿಳಾ ಸಂಘಟನೆಗಳನ್ನು ರಚಿಸುವುದು ಅಗತ್ಯವಾಯಿತು. ಇದೇ ಸಂದರ್ಭದಲ್ಲಿ ಕಮ್ಯುನಿಸ್ಟ್ ಮನಸ್ಸಿನ ವಿದ್ಯಾರ್ಥಿಗಳ ಸಮೂಹವು ಎ,ಐ.ಎಸ್.ಎಫ್ ಹೆಸರಿನಡಿಯಲ್ಲಿ 1936 ರಲ್ಲಿ ರೂಪುಗೊಂಡ ವಿಶಾಲ ವಿದ್ಯಾರ್ಥಿ ಸಂಘಟನೆಯ ಭಾಗವಾಗಿ ಒಂದು ಹೊಸ ಕೆಲಸ ಆರಂಭಿಸಿತ್ತು. ಇದಾದ ಮೂರು ವರ್ಷಗಳ ನಂತರ, 1939 ರಲ್ಲಿ ವಿದ್ಯಾರ್ಥಿನಿಯರನ್ನು ಉತ್ತಮವಾಗಿ ಸಂಘಟಿಸುವ ಸಲುವಾಗಿ, ವಿದ್ಯಾರ್ಥಿನಿಯರ ಸಮಿತಿಯನ್ನು ರಚಿಸಲಾಯಿತು, ಈ ಸಮಿತಿಯ ಪ್ರಥಮ ಸಂಚಾಲಕರಲ್ಲಿ ಕನಕ್ ಮುಖರ್ಜಿ ಯವರೂ ಒಬ್ಬರು ಮತ್ತು ಸಮಿತಿಯಲ್ಲಿ ಚಿತ್ತಗಾಂಗ್ ಶಸ್ತ್ರಾಗಾರ ದಾಳಿಯ ನಾಯಕಿ ಕಲ್ಪನಾ ದತ್ ಕೂಡ ಇದ್ದರು. ನಲವತ್ತರ ದಶಕದಲ್ಲಿ ಕೇರಳ, ಪಂಜಾಬ್, ಉತ್ತರ್ ಪ್ರದೇಶ, ತಮಿಳು ನಾಡು ಹೀಗೆ ಅನೇಕ ರಾಜ್ಯಗಳಲ್ಲಿ ಕಮ್ಯುನಿಸ್ಟ ಮಹಿಳೆಯರು ಮಹಿಳಾ ಸಮಿತಿಗಳನ್ನು

ಪುಟ 14 ಕ್ಕೆ

# ಭಾರತದ ಕಮ್ಯೂನಿಸ್ಟ್ ಚಳುವಳಿಯ ನೂರು ವರ್ಷಗಳು

**ಸಮಾಜವಾದಿ ಕ್ರಾಂತಿಗೆ ನೇತೃತ್ವ ನೀಡಬೇಕಾದ ಶ್ರಮಿಕ ವರ್ಗ ಸಮಾಜದ ಇತರ ವರ್ಗಗಳೊಂದಿಗೆ ಹೊಂದಿರುವ ಸಂಬಂಧಗಳ ವಿಶ್ಲೇಷಣೆಯ ಆಧಾರದಲ್ಲಿ ಕಮ್ಯುನಿಸ್ಟ್ ಪಕ್ಷವೊಂದು ಕಾಲಕಾಲಕ್ಕೆ ತನ್ನ ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳುತ್ತದೆ. ಭಾರತದಲ್ಲಿ ಕಮ್ಯುನಿಸ್ಟರು ಕಳೆದ ನೂರು ವರ್ಷಗಳಲ್ಲಿ ಇದನ್ನು ಹೇಗೆ ರೂಪಿಸಕೊಂಡರು ಎಂಬುದನ್ನು ಈ ಲೇಖನದಲ್ಲಿ ಹಿರಿಯ ಆರ್ಥಿಕ ತಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಮಾಡಿದ್ದಾರೆ. ಮರಣಾವಸ್ಥೆಯಲ್ಲಿರುವ ನವ ಉದಾರ ಬಂಡವಾಳಶಾಹಿಯನ್ನು ರಕ್ಷಿಸಲು, ಒಂದೆಡೆಯಲ್ಲಿ ದಬ್ಬಾಳಿಕೆ, ಇನ್ನೊಂದೆಡೆಯಲ್ಲಿ "ಅನ್ಯರನ್ನು" ಶತ್ರುಗಳು ಎಂದು ಭಾವಿಸುವಂತೆ ಜನರ ಗಮನವನ್ನು ತಿರುಗಿಸುವ ಕ್ರಮಗಳ ಮೂಲಕ ಪ್ರಯತ್ನಿಸಲಾಗುತ್ತಿದೆ. ಈ ಪರಿಸ್ಥಿತಿಯಿಂದ ಹೊರಬರುವುದೇ ಭಾರತದ ಕಮ್ಯುನಿಸ್ಟ್ ಚಳುವಳಿಯ ಶತಮಾನೋತ್ಸವದ ಸಂದರ್ಭದಲ್ಲಿ ಕಮ್ಯೂನಿಸ್ಟ್‌ರ ಮುಂದಿರುವ ಹೊಸ ಸವಾಲು ಎನ್ನುತ್ತಾರೆ ಅವರು.**

**ಪ್ರೊ. ಪ್ರಭಾತ್ ಪಟ್ನಾಯಕ್** ಅನು: ಕೆ.ಎಂ.ನಾಗರಾಜ್

ಸಮಾಜದ ಪ್ರಚಲಿತ ಸ್ಥಿತಿ–ಗತಿಗಳ ಸಂದರ್ಭದಲ್ಲಿ ಬಂಡವಾಳಶಾಹಿ ವರ್ಗದ ಮತ್ತು ರೈತಾಪಿಗಳ ಬೇರೆ ಬೇರೆ ವಿಭಾಗಗಳೊಂದಿಗೆ ಮತ್ತು ಶ್ರಮಿಕ ವರ್ಗವು (proletariat) ಹೊಂದಿರುವ ಸಂಬಂಧಗಳ ಒಂದು ಸೈದ್ಧಾಂತಿಕ ವಿಶ್ಲೇಳಣೆ ಮತ್ತು ಈ ವಿಶ್ಲೇಷಣೆಯನ್ನು ಆಧರಿಸಿ ಇತರ ರಾಜಕೀಯ ಶಕ್ತಿಗಳ ಬಗ್ಗೆ ಕಾರ್ಯತಂತ್ರಗಳು ಕಮ್ಯೂನಿಸ್ಟ್ ಪಕ್ಷದ ತಾತ್ವಿಕ ನಡವಳಿಕೆ(praxis)ಯ ಪ್ರಮುಖ ಅಂಶ. ಭಾರತದಲ್ಲಿ ಕಮ್ಯುನಸಂ ಅಸ್ತಿತ್ವದಲ್ಲಿರುವ ಕಳೆದ ನೂರು ವರ್ಷಗಳ ಅವಧಿಯಲ್ಲಿ ಈ ತಾತ್ವಿಕ ನಡವಳಿಕೆ(praxis)ಯ ಅಧ್ಯಯನವು ತುಂಬಾ ಬೋಧಪ್ರದವಾಗಿಯೂ ಮತ್ತು ಸುದೀರ್ಘವಾಗಿಯೂ ಇವೆ. ಇದರ ಪೂರ್ಣ ವಿವರಣೆಗಳು ಇಲ್ಲಿ ನನಗಿರುವ ವ್ಯಾಪ್ತಿಯನ್ನು ಮೀರುತ್ತವೆ. ಹಾಗಾಗಿ, ಈ ಸುದೀರ್ಘ ಇತಿಹಾಸದ ಕೆಲವೇ ಕೆಲವು ಘಟ್ಟಗಳ ಬಗ್ಗೆ ಮಾತ್ರ ನನ್ನ ಕೆಲವು ಚಿಂತನೆಗಳನ್ನು ಹಂಚಿಕೊಳ್ಳುತ್ತೇನೆ.

ವಸಾಹತುಶಾಹಿ ಪ್ರಶ್ನೆಯನ್ನು ವಿಶ್ಲೇಷಿಸಿದ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್‌ನ ಆರನೇ ಮಹಾಧಿವೇಶನ (1928), "ವಸಾಹತುಶಾಹಿ ಶೋಷಣೆಯು ರೈತರ ನಿರ್ಗತಿಕತನವನ್ನು ಉಂಟುಮಾಡುತ್ತದೆಯೇ ಹೊರತು, ರೈತರ ಶ್ರಮಿಕೀಕರಣವನ್ನಲ್ಲ" ಎಂಬಂತಹ ಮೌಲಿಕ ಪ್ರತಿಪಾದನೆಗಳನ್ನು ಮಾಡಿದ್ದರೂ, ಅದು ಕಮ್ಯೂನಿಸ್ಟ್ ಪಕ್ಷಗಳಿಗೆ ಸಂಕುಚಿತ ಪಂಥವಾದೀ ಸ್ವರೂಪದ ಕ್ರಿಯೆಯ ಹಾದಿಯನ್ನು ಮುಂದಿಟ್ಟಿತು. ಹಾಗಾಗಿ, ಆರನೆಯ ಮಹಾಧಿವೇಶನದ ನಂತರದ 'ಮೂರನೆಯ ಅವಧಿ' ಎಂದು ಹೇಳಲಾಗುವ ಅವಧಿಯನ್ನು ಪಂಥವಾದದೊಂದಿಗೆ ಕಾಣಲಾಗುತ್ತಿದೆ. ಅರ್ನಸ್ಟ್ ಥೇಲ್ಮನ್, ಆಂಟೋನಿಯೋ ಗ್ರಾಂಸ್ಕಿ ಮತ್ತು ಇತರ ಅನೇಕರನ್ನು ಬಲಿಪಡೆದ ಫ್ಯಾಸಿಸಂ ವಿರುದ್ಧದ ಹೋರಾಟದ ನಡುವೆ, 1935ರಲ್ಲಿ ನಡೆದ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್‌ನ ಏಳನೇ ಮಹಾಧಿವೇಶನದಲ್ಲಿ, ಈ ಪಂಥವಾದವನ್ನು ಸರಿಪಡಿಸಲಾಯಿತು ಮತ್ತು ಕಮ್ಯೂನಿಸ್ಟ್ ಪಕ್ಷಗಳು ಸಂಯುಕ್ತ ರಂಗಗಳನ್ನು ರಚಿಸುವ ಅಗತ್ಯವನ್ನು ಒತ್ತಿ ಹೇಳಲಾಯಿತು. ಏಳನೆಯ ಮಹಾಧಿವೇಶನದ ಈ ಪರಿಕಲ್ಪನೆಯನ್ನು ಭಾರತದ ಸನ್ನಿವೇಶದಲ್ಲಿ 'ಸಾಮ್ರಾಜ್ಯಶಾಹಿ–ವಿರೋಧಿ ಜನತಾ ಸಂಯುಕ್ತ ರಂಗ'ವನ್ನು ರಚಿಸುವ ಮೂಲಕ ಸಾಕಾರಗೊಳಿಸುವಂತೆ ಬ್ರಿಟನ್ ಕಮ್ಯೂನಿಸ್ಟ್ ಪಕ್ಷದ ಪ್ರತಿನಿಧಿಗಳಾದ ರಜನ ಪಾಮೆ ದತ್ ಮತ್ತು ಬೆನ್ ಬ್ರಾಡ್ಲೆ ಮಂಡಿಸಿದ ಪ್ರತಿಪಾದನೆಯು(ದತ್–ಬ್ರಾಡ್ಲಿ ಪ್ರತಿಪಾದನೆ) ಕರೆಕೊಟ್ಟಿತು.

ಇಂತಹ ಒಂದು ಸಂಯುಕ್ತ ರಂಗದಲ್ಲಿ, ಮುಷ್ಕರದ ಹಕ್ಕು, ಕಾರ್ಮಿಕರ ವೇತನವನ್ನು ಕಡಿತಗೊಳಿಸುವ ಮತ್ತು ಅವರನ್ನು ವಜಾ ಮಾಡುವ ಕ್ರಮಗಳ ನಿಷೇಧ, ಕನಿಷ್ಠ ವೇತನ ಮತ್ತು ದಿನದ ಕೆಲಸದ ಅವಧಿಯನ್ನು ಎಂಟು ಗಂಟೆಗಳಿಗೆ ನಿಗದಿ ಮಾಡುವುದು, ಬಾಡಿಗೆ/ ಗೇಣಿಗಳಲ್ಲಿ ಶೇ.50ರಷ್ಟು ಕಡಿತ ಮತ್ತು ಸಾಲಕ್ಕೆ ಬದಲಿಯಾಗಿ ರೈತರ ಭೂಮಿಯನ್ನು ಲೇವಾದೇವಿಗಾರರು, ಜಮೀನ್ದಾರರು, ಸ್ಥಳೀಯ ರಾಜರು ಮತ್ತು ಸಾಮ್ರಾಜ್ಯಶಾಹಿಗಳು ವಶಪಡಿಸಿಕೊಳ್ಳುವುದಕ್ಕೆ ನಿಷೇಧ ಮುಂತಾದ ಆರ್ಥಿಕ ಅಂಶಗಳನ್ನು ಒಳಗೊಂಡ ಒಂದು ಆರ್ಥಿಕ ಕಾರ್ಯಕ್ರಮಗಳ ಆಧಾರದ ಮೇಲೆ ಭಾಗವಹಿಸಬೇಕು ಎಂಬುದು ಕಮ್ಯೂನಿಸ್ಟರ ತಿಳುವಳಿಕೆಯಾಗಿತ್ತು.

ಇದರ ಫಲಿತಾಂಶವೇ ಕಮ್ಯುನಿಸ್ಟರು ಕಾಂಗ್ರೆಸಿನೊಳಗಿಂದ ರಹಸ್ಯವಾಗಿ ಕೆಲಸ ಮಾಡಲಾರಂಭಿಸಿದ್ದು(ದಕ್ಷಿಣ ಆಫ್ರಿಕಾದಲ್ಲಿದ್ದಂತೆ ದಕ್ಷಿಣ ಆಫ್ರಿಕಾದ ಕಮ್ಯೂನಿಸ್ಟ್ ಪಕ್ಷದ( SACP) ಮತ್ತು ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸ್(ANC) ಸದಸ್ಯನಾಗಬಹುದಾಗಿದ್ದ ದ್ವಿಸದಸ್ಯತ್ವಕ್ಕೆ ಇಲ್ಲಿ ಅವಕಾಶವಿರಲಿಲ್ಲ) ಮತ್ತು ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದೊಂದಿಗೆ ಸಹಕಾರದಲ್ಲಿ ಕೆಲಸ ಮಾಡಿದ್ದು.

ಜರ್ಮನಿಯು ಸೋವಿಯತ್ ಒಕ್ಕೂಟದ ಮೇಲೆ ಯುದ್ಧ ಆರಂಭಿಸಿದ ನಂತರ ಸಂಯುಕ್ತ ರಂಗದ ಈ ಹಂತವು ಕೊನೆಗೊಂಡಿತು. ಈ ದಾಳಿಯಿಂದಾಗಿ ಯುದ್ಧದ ಸ್ವರೂಪವೇ ಬದಲಾಯಿತು ಎಂಬ ಕಮ್ಯೂನಿಸ್ಟ್ ಪಕ್ಷದ ತಿಳುವಳಿಕೆಯು ಪ್ರಮುಖ ಕಾಂಗ್ರೆಸ್ಸಿಗರಲ್ಲಿ ಸಹಾನುಭೂತಿಯನ್ನು ಹುಟ್ಟಿಸಿತಾದರೂ, ಕಮ್ಯೂನಿಸ್ಟ್‌ರ ನಿಲುವನ್ನು ಕಾಂಗ್ರೆಸ್ ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಪಕ್ಷಗಳು ಅಧಿಕೃತವಾಗಿ ತಿರಸ್ಕರಿಸಿದವು ಮತ್ತು ಅದೇ ಸಮಯದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯನ್ನು ಆರಂಭಿಸಿದವು. ಈ ಚಳುವಳಿಯಲ್ಲಿ ಕಾಂಗ್ರೆಸ್‌ನ ಸದಸ್ಯರಾಗಿದ್ದ ಅನೇಕ ಕಮ್ಯುನಿಸ್ಟರು ಕೂಡ ದೀರ್ಘ ಕಾಲದ ಜೈಲುವಾಸ ಅನುಭವಿಸಿದರು.

ಸ್ವಾತಂತ್ರ್ಯದೊಂದಿಗೆ ಹೊಸ ಪ್ರಭುತ್ವದ ಸ್ವರೂಪ ಮತ್ತು ಬಂಡವಾಳಶಾಹಿಗಳೊಂದಿಗಿನ ಸಂಬಂಧದ ಪ್ರಶ್ನೆಯು ಮುನ್ನೆಲೆಗೆ ಬಂತು. ಪಕ್ಷದೊಳಗೆ ಒಂದು ತೀವ್ರ ಸ್ವರೂಪದ ಆಂತರಿಕ ಚರ್ಚೆಯನ್ನು ಹುಟ್ಟುಹಾಕಿದ ಈ ಪ್ರಶ್ನೆಯು ಅಂತಿಮವಾಗಿ ಪಕ್ಷವನ್ನೇ ವಿಭಜಿಸಿತು. ಸಿಪಿಐ(ಎಂ) ತನ್ನ ಕಾರ್ಯಕ್ರಮದಲ್ಲಿ ನೆಲೆಗೊಳಿಸಿದ ಸೈದ್ಧಾಂತಿಕ ನಿಲುವು, ಕ್ರಾಂತಿಪೂರ್ವದಲ್ಲಿ ರಷ್ಯಾದ ಸಮಾಜವಾದಿ ಪ್ರಜಾಪ್ರಭುತ್ವವಾದಿ ಕಾರ್ಮಿಕ ಪಕ್ಷದ (RSDLP) ಆಂತರಿಕ ಚರ್ಚೆಗಳಲ್ಲಿ ಲೆನಿನ್ ತೆಗೆದುಕೊಂಡ ನಿಲುವಿನಿಂದ ಮೂಡಿಬಂದದ್ದೇ ಆಗಿದೆ. ಈ ನಿಲುವು, ಇಪ್ಪತ್ತನೇ ಶತಮಾನದಲ್ಲಿ ಮೂರನೆಯ ಜಗತ್ತಿನ ಕ್ರಾಂತಿಕಾರಿ ಪಕ್ಷಗಳ ಕಾರ್ಯಕ್ರಮಗಳಿಗೆ ಒಂದಲ್ಲಾ ಒಂದು ರೀತಿಯಲ್ಲಿ ಆಧಾರವಾಗಿದೆ. ಲೆನಿನ್ ಅವರ ವಾದ ಹೀಗಿತ್ತು: ಚಾರಿತ್ರಿಕವಾಗಿ ಬಂಡವಾಳಶಾಹಿಯು ತಡವಾಗಿ ಕಾಲಿಟ್ಟ ದೇಶಗಳಲ್ಲಿ, ಊಳಿಗಮಾನ್ಯ–ವಿರೋಧಿ ಪ್ರಜಾಪ್ರಭುತ್ವ ಕ್ರಾಂತಿಯನ್ನು ನೆರವೇರಿಸಲು ಅದು ಅಸಮರ್ಥವಾಯಿತು; ಏಕೆಂದರೆ, ಊಳಿಗಮಾನ್ಯ ಆಸ್ತಿ–ಸಂಬಂಧಗಳ ಮೇಲೆ ಅದು ನಡೆಸುವ ಆಕ್ರಮಣವು ಬಂಡವಾಳಶಾಹಿ (ತನ್ನ) ಆಸ್ತಿ–ಸಂಬಂಧಗಳ ಮೇಲೆಯೂ ತಿರುಗಿ ಬೀಳಬಹುದು ಎಂಬ ಭಯ ಅದನ್ನು ಕಾಡುತ್ತಿತ್ತು. ಆದ್ದರಿಂದ, ಅದು ರೈತರ ಪ್ರಜಾಸತ್ತಾತ್ಮಕ ಆಶೋತ್ತರಗಳನ್ನು ಈಡೇರಿಸಲಿಲ್ಲ. ರೈತಾಪಿ ವರ್ಗದ ಸಖ್ಯದೊಂದಿಗೆ ಕಾರ್ಮಿಕ ವರ್ಗವು ನಡೆಸುವ ಕ್ರಾಂತಿಯಿಂದ ಮಾತ್ರ ಊಳಿಗಮಾನ್ಯ ಆಸ್ತಿ–ಸಂಬಂಧಗಳನ್ನು ಮುರಿದು, ಸವಲತ್ತುಗಳನ್ನು ಕಿತ್ತುಹಾಕಿ, ಭೂಮಿಯ ಮರುಹಂಚಿಕೆಯ ಮೂಲಕ ಪ್ರಜಾತಾಂತ್ರಿಕ ಕ್ರಾಂತಿಯನ್ನು ಪೂರ್ಣಗೊಳಿಸುವುದು ಸಾಧ್ಯವಾಗುತ್ತದೆ. ಈ ಪ್ರಜಾತಾಂತ್ರಿಕ ಕ್ರಾಂತಿಯು, ಆರ್ಥಿಕ ಅಭಿವೃದ್ಧಿಯನ್ನು ತಡೆಹಿಡಿಯುವುದರ ಬದಲಾಗಿ, ಭೂಸುಧಾರಣೆಗಳ ಮೂಲಕ ಕೃಷಿಯ ಬೆಳವಣಿಗೆಯನ್ನು ವೇಗಗೊಳಿಸಿ, ದೇಶದ ಆಂತರಿಕ ಮಾರುಕಟ್ಟೆಯ ಗಾತ್ರವನ್ನು ವಿಸ್ತರಿಸುವುದೇ ಅಲ್ಲದೆ ಆರ್ಥಿಕ ಅಭಿವೃದ್ಧಿಯ ಪ್ರಯೋಜನವು ಹೆಚ್ಚು ಹೆಚ್ಚು ಮಂದಿಗೆ ಲಭ್ಯವಾಗುವಂತೆ ಮಾಡುತ್ತದೆ

ಸ್ವಾತಂತ್ರ್ಯಾನಂತರ ಭಾರತದ ಪ್ರಭುತ್ವವು ಆಮೂಲಾಗ್ರ ಭೂ ಹಂಚಿಕೆಯನ್ನು ತೊರೆದು, ಅದರ ಬದಲಿಗೆ ಅನುಪಸ್ಥಿತ (ಬೇರೊಂದು ಊರಿನಲ್ಲಿ ವಾಸಿಸುವ) ಜಮೀನ್ದಾರರ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ರೈತಾಪಿಯ ಮೇಲ್ವರ್ಗದ ದೊಡ್ಡ ದೊಡ್ಡ ಹಿಡುವಳಿದಾರರೊಂದಿಗೆ, ಪಾಳೇಗಾರಿ ಭೂಮಾಲೀಕರೂ ತಮ್ಮ ಖುದ್‌ಕಷ್ಟ್ ಭೂಮಿಯನ್ನು ಬಳಸಿಕೊಂಡು ಬಂಡವಾಳಗಾರರಾಗಿ ಬದಲಾಗಲು ಪ್ರೋತ್ಸಾಹಿಸಿದ ಕ್ರಮಗಳು, ಬಂಡವಾಳಶಾಹಿಯು ಭೂಮಾಲೀಕರೊಂದಿಗೆ ಸಖ್ಯ ಬೆಳೆಸಿರುವುದನ್ನು ಬಿಂಬಿಸುತ್ತದೆ. ದೊಡ್ಡ ಬಂಡವಾಳಶಾಹಿಗಳ ನೇತೃತ್ವದ ಬಂಡವಾಳಶಾಹಿ–ಭೂಮಾಲಿಕ ಹಿಡಿತದ ಪ್ರಭುತ್ವವು ಬಂಡವಾಳಶಾಹಿ ಮಾದರಿಯ ಅಭಿವೃದ್ಧಿಯನ್ನು ಮುಂದುವರೆಸಿತು ಮತ್ತು ಅದು ಗ್ರಾಮೀಣ ಪ್ರದೇಶಗಳಲ್ಲಿ ದೊಡ್ಡ ಹಿಡುವಳಿದಾರರ ಮತ್ತು ಪಾಳೇಗಾರಿ ಭೂಮಾಲೀಕರ ಮಿಶ್ರಣದ ರೈತ ಬಂಡವಾಳಶಾಹಿ ಅಭಿವೃದ್ಧಿಯ ಸ್ವರೂಪ ಪಡೆಯಿತು. ಹಾಗಾಗಿ, ಈ ಪ್ರಭುತ್ವವನ್ನು ಬದಲಾಯಿಸುವ ಹೊಣೆಗಾರಿಕೆಯನ್ನು ಶ್ರಮಿಕ ವರ್ಗವೇ ನಿರ್ವಹಿಸಬೇಕಾಗಿದೆ. ಈ ಜವಾಬ್ದಾರಿಯನ್ನು ನಿರ್ವಹಿಸುವ ಶ್ರಮಿಕ ವರ್ಗವು ಬಹುಸಂಖ್ಯೆಯ ರೈತರೊಂದಿಗೆ ಸಖ್ಯ ಬೆಳೆಸಿ, ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಮುನ್ನಡೆಸಿ, ಬಂಡವಾಳಶಾಹಿ–ಭೂಮಾಲಕ ಪ್ರಭುತ್ವವನ್ನು ಒಂದು ಹೊಸ ಪ್ರಭುತ್ವದೊಂದಿಗೆ ಬದಲಾಯಿಸಿ, ಸಮಾಜವನ್ನು ಅಂತಿಮವಾಗಿ ಸಮಾಜವಾದದತ್ತ ಕೊಂಡೊಯ್ಯ ಬೇಕಾಗುತ್ತದೆ. ಸಾಮ್ರಾಜ್ಯಶಾಹಿಯಿಂದ ಸ್ವಲ್ಪ ಮಟ್ಟಿನ ಸ್ವಾಯತ್ತತೆ ಕಾಯ್ದುಕೊಂಡ ರೀತಿಯ ಬಂಡವಾಳಶಾಹಿ ಮಾದರಿಯನ್ನು ಅನುಸರಿಸುವ ಮಹತ್ವಾಕಾಂಕ್ಷೆಯನ್ನು ಬಂಡವಾಳಶಾಹಿಯು ಹೊಂದಿತ್ತಾದರೂ, ಕಮ್ಯೂನಿಸ್ಟ್ ಪಕ್ಷವು ಗಮನಿಸಿರುವ ಹಾಗೆ, ವಿದೇಶಿ ಹಣಕಾಸು ಬಂಡವಾಳದೊಂದಿಗೆ ಅದರ ಸಹಯೋಗವು ಹೆಚ್ಚುತ್ತಾ ಹೋಯಿತು.

ಪ್ರಭುತ್ವದ ಮತ್ತು ಬಂಡವಾಳಶಾಹಿಯ ಲಕ್ಷಣಗಳ ಈ ನಿರೂಪಣೆಯಲ್ಲಿ ಎರಡು ಅಂಶಗಳು ಗಮನ ಸೆಳೆಯುತ್ತವೆ. ಮೊದಲನೆಯದು, ದೇಶದಲ್ಲಿ ಬಂಡವಾಳಶಾಹಿ ಮಾದರಿಯ ಅಭಿವೃದ್ಧಿಯನ್ನು ಅನುಸರಿಸಿತ್ತಾದರೂ ಸಹ ಅದು ಸಾಮ್ರಾಜ್ಯಶಾಹಿಯ ಆಶ್ರಯದಲ್ಲಲ್ಲ ಎಂಬುದು. ಭಾರತದ ಬಂಡವಾಳಶಾಹಿಯು ಬೆಳೆಯಲು ಮುಂದುವರೆದ ದೇಶಗಳ ಮಹಾನಗರೀಯ(ಮೆಟ್ರೊಪಾಲಿಟನ್) ಬಂಡವಾಳದ ನೆರವು ಪಡೆಯುವುದರ ಬದಲಾಗಿ ದೇಶದ ಸಾರ್ವಜನಿಕ ವಲಯವನ್ನು ಬಳಕೆಮಾಡಿಕೊಂಡದ್ದು, ಸೋವಿಯತ್ ಒಕ್ಕೂಟದ ನೆರವಿನಿಂದ ಆರ್ಥಿಕ ನಿರ್ವಸಾಹತೀಕರಣ (economic decoloni sation) ಪ್ರಕ್ರಿಯೆಯ ಚಾಲನೆ, ಯಾವ ಅರ್ಥದಲ್ಲಿ ನಿರ್ವಸಾಹತೀಕರಣ ಅಂದರೆ, ದೇಶದ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಮೆಟ್ರೋಪಾಲಿಟನ್ ಬಂಡವಾಳವು ಹೊಂದಿದ್ದ ನಿಯಂತ್ರಣ ಪುನಃ ದೇಶದ ಸಾರ್ವಜನಿಕ ವಲಯದ ವಶಕ್ಕೆ ಒಳಪಡಿಸುವ ಕ್ರಮ, ಮತ್ತು, ದೇಶವು ಅಲಿಪ್ತ–ವಿದೇಶಾಂಗ ನೀತಿಯನ್ನು ಅಳವಡಿಸಿಕೊಂಡ ಅಂಶಗಳು ಭಾರತದ ಬಂಡವಾಳಶಾಹಿಯು ಸಾಮ್ರಾಜ್ಯಶಾಹಿಗೆ ಯಾವ ರೀತಿಯಲ್ಲೂ ಅಧೀನವಾಗಿರಲಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಇದೆಲ್ಲವನ್ನೂ ಬೇರೊಂದು ರೀತಿಯಲ್ಲಿ ಹೇಳುವುದಾದರೆ, ದೇಶದಲ್ಲಿ ಬಂಡವಾಳಶಾಹಿಯು ಅಭಿವೃದ್ಧಿ ಹೊಂದಲು ಸ್ವಾತಂತ್ರ್ಯೋತ್ತರ ಪ್ರಭುತ್ವವು ಜಾಗತಿಕ ಬಂಡವಾಳಶಾಹಿಯ ಬಣವನ್ನು ಸೇರಲಿಲ್ಲ.

ಗಮನ ಸೆಳೆಯುವ ಎರಡನೆಯ ಅಂಶವೆಂದರೆ, ಪ್ರಭುತ್ವವು, ಬಂಡವಾಳಶಾಹಿಯನ್ನು ಬೆಳೆಸುವಲ್ಲಿ ಮತ್ತು ಬಂಡವಾಳಗಾರರ ಹಾಗೂ ಭೂಮಾಲೀಕರ ಆಸ್ತಿಯನ್ನು ರಕ್ಷಿಸುವಲ್ಲಿ ತನ್ನ ವರ್ಗಸ್ವರೂಪವನ್ನು ತೋರಿಸಿಕೊಂಡಿತಾದರೂ, ಉಳಿದೆಲ್ಲವನ್ನೂ ಬಿಟ್ಟು ಸಂಪೂರ್ಣವಾಗಿ ಬಂಡವಾಳಶಾಹಿಯ ಮತ್ತು ಭೂಮಾಲೀಕರ ಹಿತಾಸಕ್ತಿಗಳ ರಕ್ಷಣೆಗಾಗಿಯೇ ಕೆಲಸ ಮಾಡಲಿಲ್ಲ. ಕಾರ್ಮಿಕರ ಮತ್ತು ರೈತರ ಪರವಾಗಿ ಆಗಾಗ ನಿಂತರೂ ಸಹ, ಎಲ್ಲ ವರ್ಗಗಳ ಹಿತಾಸಕ್ತಿಯನ್ನು ಕಾಪಾಡುತ್ತಿರುವುದಾಗಿ ತೋರಿಸಿಕೊಂಡಿತು. ಬಂಡವಾಳಶಾಹಿ ಕೃಷಿಗಾರಿಕೆ ಮಾಡುವ ಉದ್ದೇಶದಿಂದ ಭೂಮಾಲೀಕರು ತಮ್ಮ ಗೇಣಿದಾರರನ್ನು ಒಕ್ಕಲೆಬ್ಬಿಸಿದ ಅರ್ಥದಲ್ಲಿ ಬಂಡವಾಳದ ಆದಿಮ ಶೇಖರಣೆಯ ಉಸ್ತುವಾರಿ ವಹಿಸಿತ್ತಾದರೂ ಸಹ, ಪ್ರಭುತ್ವವು, ನಗರದ ದೊಡ್ಡ ದೊಡ್ಡ ಬಂಡವಾಳಗಾರರು ರೈತ ಕೃಷಿಯನ್ನಾಗಲಿ ಅಥವಾ ಕರಕುಶಲ ಉತ್ಪಾದನೆಯನ್ನಾಗಲಿ ಒತ್ತುವರಿ ಮಾಡುವ ಸಾಮಾನ್ಯ ಅರ್ಥದಲ್ಲಿ ಬಂಡವಾಳದ ಆದಿಮ ಶೇಖರಣೆಯನ್ನು ತಡೆಗಟ್ಟಿತು. ಆದಿಮ ಶೇಖರಣೆಗೆ ವಿರುದ್ಧವಾಗಿ, ಮೀಸಲು ನಿಗದಿಪಡಿಸುವ ಮೂಲಕ ಕೈಮಗ್ಗದ ಬಟ್ಟೆ ಉತ್ಪಾದನೆಗೆ ಪ್ರೋತ್ಸಾಹ ಕೊಟ್ಟದ್ದು ಮಾತ್ರವಲ್ಲದೆ, ಲಾಭದಾಯಕ ಬೆಲೆಗಳಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸಲು ಮುಂದಾಯಿತು. ಈ ರೀತಿಯಲ್ಲಿ ಪ್ರಭುತ್ವವು ಕೃಷಿ ವಲಯದಲ್ಲಿ ಮಧ್ಯಪ್ರವೇಶ ಮಾಡಿದ್ದರ ಫಲಾನುಭವಿಗಳು ಏಕೈಕವಾಗಿ ಭೂಮಾಲೀಕರೇ ಆಗಿರಲಿಲ್ಲ; ಎಲ್ಲ ಕೃಷಿಕರೂ ಅದರ ಪ್ರಯೋಜನ ಪಡೆದರು. ಅದೇ ರೀತಿಯಲ್ಲಿ, ಜಾಗತಿಕ ಮಾರುಕಟ್ಟೆಯ ಬೆಲೆ ಏರಿಳಿತಗಳಿಂದ ರೈತರಿಗೆ ರಕ್ಷಣೆ, ಕೃಷಿ ಲಾಗುವಾಡುಗಳಿಗೆ(inputs) ಸಬ್ಸಿಡಿ, ಸಾಂಸ್ಥಿಕ ಸಾಲಗಳಿಗೆ ಸಬ್ಸಿಡಿ, ಸರ್ಕಾದ ವಿಸ್ತರಣಾ ಸೇವೆಗಳ ಮೂಲಕ ಕೃಷಿಯಲ್ಲಿ ಹೊಸ ಹೊಸ ಪದ್ಧತಿಗಳು ಮತ್ತು ಹೊಸ ತಳಿಯ ಬೀಜಗಳು ಮುಂತಾದ ಸೌಲಭ್ಯಗಳನ್ನು ರೈತರಿಗೆ ಒದಗಿಸಲಾಯ್ತು. ಈ ಎಲ್ಲ ಪ್ರಯೋಜನಗಳ ಸಿಂಹಪಾಲು ಗ್ರಾಮೀಣ ಉದಯೋನ್ಮುಖ ಬಂಡವಾಳಗಾರರಿಗೆ ದೊರೆತರೂ ಸಹ, ಹೆಚ್ಚಿನ ಸಂಖ್ಯೆಯ ಸಣ್ಣ ರೈತರಿಗೂ ಪ್ರಯೋಜನ ಲಭಿಸಿತು.

ಬಂಡವಾಳಶಾಹಿ ಮಾದರಿಯನ್ನು ಅನುಸರಿಸಿದ ಅಭಿವೃದ್ಧಿಯು ಅದರ ಪಾಡಿಗೆ ಅದು (sui generis) ಮುಂದುವರೆಯಿತು. ಸಾಮ್ರಾಜ್ಯಶಾಹಿಯೊಂದಿಗೆ ಸಹಯೋಗ ಹೆಚ್ಚುತ್ತಿದ್ದ ಅಂಶದ ಹೊರತಾಗಿಯೂ ಮತ್ತು ಆಗಾಗ ಮೆಟ್ರೋಪಾಲಿಟನ್ ಬಂಡವಾಳಕ್ಕೆ ಮುಜುಗುರ ಉಂಟುಮಾಡಿದ ಈ ಅಭಿವೃದ್ಧಿಯು ದೇಶದೊಳಗಿನಿಂದಲೇ ಉಂಟಾಯಿತೇ ವಿನಃ ಸಾಮ್ರಾಜ್ಯಶಾಹಿಯ ಆಶೀರ್ವಾದದಿಂದ ಆದದ್ದಲ್ಲ. ಅಭಿವೃದ್ಧಿಯ ಈ ವಿಚಿತ್ರ ಗುಣ–ಲಕ್ಷಣದಿಂದಾಗಿ, ಅದು ಸಮಾಜದಲ್ಲಿ ಸರಿಪಡಿಸಲಾಗದ ಲೋಪ–ದೋಷಗಳನ್ನು ಉಂಟುಮಾಡಲಿಲ್ಲ. ಅಂದರೆ, ವಸಾಹತುಶಾಹಿ–ವಿರೋಧಿ ಹೋರಾಟದ ಸಮಯದಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ಭುಜಕ್ಕೆ ಭುಜ ಕೊಟ್ಟು ಹೋರಾಡಿದ ಬೇರೆ ಬೇರೆ ವರ್ಗಗಳ ಒಳಗೆ ದ್ವೇಷಾಸೂಯೆ ಉಂಟಾಗುವ ಮಟ್ಟಿನ ಲೋಪಗಳಿರಲಿಲ್ಲ. ಇದನ್ನೇ ಬೇರೊಂದು ರೀತಿಯಲ್ಲಿ ಹೇಳುವುದಾದರೆ, ವಸಾಹತುಶಾಹಿ–ವಿರೋಧಿ ಹೋರಾಟದಲ್ಲಿ ಕೊಟ್ಟಿದ್ದ ಉಳುವವನಿಗೆ ಭೂಮಿ, ಉದ್ಯೋಗ ಮುಂತಾದ ಅನೇಕ ಭರವಸೆಗಳಿಗೆ ಬಂಡವಾಳಶಾಹಿಯು ದ್ರೋಹ ಬಗೆಯಿತಾದರೂ, ಆರ್ಥಿಕ, ಸಾಮಾಜಿಕ ವಿಷಯಗಳ ಬಗ್ಗೆ ಸರ್ಕಾರದ ನಿಯಂತ್ರಣವೇ ಪ್ರಧಾನವಾಗಿದ್ದ ಸಮಯದವರೆಗೂ ವಸಾಹತುಶಾಹಿ–ವಿರೋಧಿ ಹೋರಾಟದ ಆಶಯಗಳಿಗೆ ಸಂಪೂರ್ಣವಾಗಿ ದ್ರೋಹ ಬಗೆಯಲಿಲ್ಲ. ಈ ಕಾರಣದಿಂದಾಗಿಯೇ, ಪಕ್ಷವು ಆಡಳಿತವನ್ನು ವಿರೋಧಿಸುತ್ತಿದ್ದರೂ ಸಹ, ಬ್ಯಾಂಕ್ ರಾಷ್ಟ್ರೀಕರಣ, ಸಾರ್ವಜನಿಕ ವಲಯದ ಅಭಿವೃದ್ಧಿ ಮತ್ತು ದೇಶದ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಮೆಟ್ರೋಪಾಲಿಟನ್ ಬಂಡವಾಳವು ಹೊಂದಿದ್ದ ನಿಯಂತ್ರಣ ಪುನಃ ಸಾರ್ವಜನಿಕ ವಲಯದ ವಶಕ್ಕೆ, ವಿದೇಶಿ ವಿನಿಮಯ ನಿಯಂತ್ರಣ ಕಾಯ್ದೆ ಮುಂತಾದ ಅನೇಕ ಪ್ರಗತಿಪರ ಕ್ರಮಗಳನ್ನು ಬೆಂಬಲಿಸಿತು.

ಬಂಡವಾಳಶಾಹಿಯ ತನ್ನ ಪಾಡಿಗೆ ಬೆಳೆಯುವ (sui generis) ಈ ಸ್ವಭಾವವು ಅನೇಕ ಮಂದಿಯಲ್ಲಿ ಒಂದು ತಪ್ಪು ಕಲ್ಪನೆ ಮೂಡಲು ಕಾರಣವಾಗಿತ್ತು. ಅದೇನೆಂದರೆ, ಬಂಡವಾಳಶಾಹಿಯ ಈ ಬೆಳವಣಿಗೆಯನ್ನು ನಿರ್ವಹಿಸುತ್ತಿರುವುದು ಒಂದು "ಮಧ್ಯಂತರದ ಆಳ್ವಿಕೆ", ಬಂಡವಾಳಶಾಹಿ–ಭೂಮಾಲಕ ಪ್ರಭುತ್ವವಲ್ಲ ಎಂದು ಅನೇಕರು ಭಾವಿಸಿದ್ದರು. ಈ ತಪ್ಪು ಕಲ್ಪನೆಯೇ ಅದರ ಈ sui generis ಸ್ವಭಾವಕ್ಕೆ ಒಂದು ಪುರಾವೆಯಾಗುತ್ತದೆ. ಬಂಡವಾಳಶಾಹಿಯ ಈ ರೀತಿಯ ಬೆಳವಣಿಗೆಯು ಪುಟ 14 ನೋಡಿ

# ನೂರು ವರ್ಷಗಳು

ಪುಟ 13 ರಿಂದ

ಕನಿಷ್ಠ ನಾಲ್ಕು ಕಾರಣಗಳಿಂದಾಗಿ ಬಹಳ ಕಾಲ ಬಾಳಲಿಲ್ಲ: ಮೊದಲನೆಯದು, ಇಂತಹ ಒಂದು ಅಭಿವೃದ್ಧಿ ದಿಕ್ಪಥವನ್ನು ಸಾಧ್ಯವಾಗಿಸಿದ್ದ ಸೋವಿಯೆತ್ ಒಕ್ಕೂಟವೇ ಪತನವಾದದ್ದು; ಎರಡನೆಯದು, ಸ್ವಾತಂತ್ರ್ಯಾನಂತರದಲ್ಲಿ ಬಂಡವಾಳಗಾರರು ಮತ್ತು ಭೂಮಾಲಿಕರು ಎಸಗಿದ ಬೃಹತ್ ಪ್ರಮಾಣದ ತೆರಿಗೆ ವಂಚನೆಯಿಂದಾಗಿ ಉಲ್ಬಣಗೊಂಡ ವಿತ್ತೀಯ ಬಿಕ್ಕಟ್ಟು, ಮೂರನೆಯದು, ಎಪ್ಪತ್ತರ ದಶಕದಲ್ಲಿ ತೈಲ ಬೆಲೆಗಳ ತೀವ್ರ ಏರಿಕೆಯಿಂದಾಗಿ (“ತೈಲ-ಆಘಾತಗಳು”) ವಮುಂದುವರೆದ ದೇಶಗಳ ಬ್ಯಾಂಕ್‌ಗಳಲ್ಲಿ ಶೇಖರಣೆಯಾದ ಬೆಟ್ಟದಷ್ಟು ಲಾಭವು ಹಣಕಾಸು ಬಂಡವಾಳವಾಗಿ ಮಾರ್ಪಟ್ಟಿತು. ಬ್ರೆಟನ್-ವುಡ್ಸ್ ವ್ಯವಸ್ಥೆಯನ್ನು ಕಿತ್ತೊಗೆದ ನಂತರ ಈ ಹಣಕಾಸು ಬಂಡವಾಳವು ಜಾಗತಿಕವಾಗಿ ಹರಿಯಿತು(ಬ್ರೆಟನ್-ವುಡ್ಸ್ ವ್ಯವಸ್ಥೆಯ ಕಿತ್ತೆಸೆತವನ್ನು ಸ್ವತಃ ಈ ಹಣಕಾಸು ಬಂಡವಾಳವೇ ರೂಪಿಸಿತ್ತು ಎಂದು ಹೇಳಲಾಗಿದೆ). ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯ ಲಾಭ ಪಡೆದು ಭಾರತದಂತಹ ರಾಷ್ಟ್ರಗಳಿಗೆ ಸಾಲ ಕೊಡಲು ಈ ಹಣಕಾಸು ಬಂಡವಾಳವು ಬಳಕೆಯಾಯ್ತು. ನಾಲ್ಕನೆಯದು, ವಸಾಹತುಶಾಹಿ ಕಾಲಕ್ಕೆ ಹೋಲಿಸಿದರೆ, ಬಡ ಜನರಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿದ ಸಾಧನೆಗಳನ್ನು ಮಾಡಿದ್ದರೂ ಸಹ, ಈ ‘ನಿಯಂತ್ರಣದ ವ್ಯವಸ್ಥೆ’ಯು (dirigiste regime) ಬಡವರ ಬೆಂಬಲವನ್ನು ಉಳಿಸಿಕೊಳ್ಳುವುದು ಸಾಧ್ಯವಾಗಲಿಲ್ಲ.

ಜಾಗತಿಕ ಹಣಕಾಸು ಬಂಡವಾಳದ ಅಧೀನದ ನವ ಉದಾರವಾದಿ ಆಡಳಿತವು ಒಂದು ಅತ್ಯಂತ ಸಂಪ್ರದಾಯವಾದಿ ಸ್ವರೂಪದ ಬಂಡವಾಳಶಾಹಿಯನ್ನು ಪ್ರತಿನಿಧಿಸುತ್ತಿದೆ. ‘ನಿಯಂತ್ರಣದ ವ್ಯವಸ್ಥೆಯ ಅವಧಿ’ಯಲ್ಲಿ (dirigiste period) ಬಾಳಿದ sui generis ಬಂಡವಾಳಶಾಹಿಗೆ ಹೋಲಿಸಿದರೆ, ನವ ಉದಾರ ಆಡಳಿತ ಕಾಲದ ಬಂಡವಾಳಶಾಹಿಯು ಭಿನ್ನವಾಗಿದೆ. ನವ ಉದಾರದಡಿಯ ಪ್ರಭುತ್ವವು ಆಳುವ ವರ್ಗಗಳ ಹಿತಾಸಕ್ತಿಗಳನ್ನು, ಅದರಲ್ಲೂ ವಿಶೇಷವಾಗಿ ಜಾಗತಿಕ ಹಣಕಾಸು ಬಂಡವಾಳದೊಂದಿಗೆ ನಿಕಟ ಬಾಂಧವ್ಯ ಹೊಂದಿರುವ ಕಾರ್ಪೊರೇಟ್-ಹಣಕಾಸು ಕುಳಗಳ ಹಿತಾಸಕ್ತಿಗಳನ್ನು ಮತ್ತು ನೇರವಾಗಿಯೇ ಜಾಗತಿಕ ಹಣಕಾಸು ಬಂಡವಾಳದ ಹಿತಾಸಕ್ತಿಗಳನ್ನು ಉತ್ತೇಜಿಸುತ್ತದೆ (ಇಲ್ಲದಿದ್ದರೆ ವಿದೇಶಿ ಬಂಡವಾಳವು ಹಾರಿ ಹೋಗಬಹುದು ಎಂಬ ಭಯದಲ್ಲಿ). ದೇಶದ ಹಿರಿಯ ಬಂಡವಾಳಶಾಹಿಯು ಸಾಮ್ರಾಜ್ಯಶಾಹಿಯೊಂದಿಗಿನ ಸಂಬಂಧದಲ್ಲಿ ಸ್ವಲ್ಪ ಮಟ್ಟಿಗಾದರೂ ಸ್ವಾಯತ್ತತೆಯನ್ನು ಉಳಿಸಿಕೊಳ್ಳಬೇಕೆಂಬ ತನ್ನ ಮಹತ್ವಾಕಾಂಕ್ಷೆಯನ್ನು ತೊರೆದು ಈಗ ಮೆಟ್ರೋಪಾಲಿಟನ್ ಬಂಡವಾಳದೊಂದಿಗೆ ಬೆಸೆದುಕೊಳ್ಳುತ್ತಿರುವುದರಿಂದ, ದೇಶದೊಳಗೆ ಒಂದು ದಾಟಲಾಗದ ಕಂದಕ ನಿರ್ಮಾಣವಾಗಿದೆ.

ನವ ಉದಾರವಾದಿ ಆಡಳಿತವು ಕಿರು ಉತ್ಪಾದಕರಿಗೆ ಮತ್ತು ರೈತ ಕೃಷಿಗೆ ಕೊಟ್ಟಿದ್ದ ಬೆಂಬಲವನ್ನು ಬಹುಮಟ್ಟಿಗೆ ಹಿಂತೆಗೆದುಕೊಂಡಿದೆ. ಹಾಗಾಗಿ ಅವರು ದುರ್ಬಲರಾಗಿದ್ದಾರೆ. ಅಷ್ಟೇ ಅಲ್ಲದೆ, ಬಂಡವಾಳದ ಆದಿಮ ಶೇಖರಣೆಯನ್ನು ರೈತ ಕೃಷಿಯ ಮೇಲೆ ಹರಿಯಬಿಡಲಾಗಿದೆ. ಈ ಪ್ರಕ್ರಿಯೆಯು ಭೂಮಾಲೀಕರಿಂದ ನಡೆಯುತ್ತಿಲ್ಲ. ಬದಲಾಗಿ, ಕೃಷಿ-ವ್ಯಾಪಾರಿಗಳು ಮತ್ತು ಹೊರಗಿನ ದೊಡ್ಡ ಬಂಡವಾಳಗಾರರಿಂದ ನಡೆಯುತ್ತಿದೆ. ಅದೇ ರೀತಿಯಲ್ಲಿ, ನೋಟು ರದ್ದತಿಯ ಮೂಲಕ ಮತ್ತು ಜಿಎಸ್‌ಟಿ ಪದ್ಧತಿಗೆ ಹೊರಳುವ ಮೂಲಕ ಕಿರು ಉತ್ಪಾದನಾ ವಲಯದಲ್ಲೂ ಬಂಡವಾಳದ ಆದಿಮ ಶೇಖರಣೆಯಾಗುತ್ತಿದೆ. ಈ ವಲಯದ ಉತ್ಪನ್ನಗಳಿಗೆ ಒದಗಿಸಿದ್ದ ಮೀಸಲು ವ್ಯವಸ್ಥೆಯನ್ನು ಕೈಬಿಡಲಾಗಿದೆ. ತಮ್ಮ ಕಸುಬು/ಉದ್ಯೋಗಗಳಿಂದ ಪಲ್ಲಟಗೊಂಡ ರೈತರು ಮತ್ತು ಕಿರು ಉತ್ಪಾದಕರು ಉದ್ಯೋಗವನ್ನು ಅರಸಿ ಪಟ್ಟಣಗಳಿಗೆ ಹೋಗುತ್ತಾರೆ. ಆದರೆ, ಪಟ್ಟಣಗಳಲ್ಲಿ ಉದ್ಯೋಗಗಳು ಕ್ಷೀಣಿಸಿವೆ. ತಾಂತ್ರಿಕ ಆವಿಷ್ಕಾರಗಳು ಮತ್ತು ಸಂರಚನಾತ್ಮಕ ಬದಲಾವಣೆಗಳ ಮೇಲೆ ಯಾವ ನಿರ್ಬಂಧಗಳೂ ಇಲ್ಲದುದರಿಂದ ಮತ್ತು ಹಿಂದಿನ ಪರವಾನಗಿ ವ್ಯವಸ್ಥೆಯು ಹೇರಿದ್ದ ನಿರ್ಬಂಧಗಳನ್ನು ಕೈಬಿಟ್ಟಿದ್ದರಿಂದ ಉದ್ಯೋಗಗಳು ಕ್ಷೀಣಿಸಿವೆ. ಹಾಗಾಗಿ, ದಿನೇ ದಿನೇ ಬೆಳೆಯುತ್ತಿರುವ ನಿರುದ್ಯೋಗಿ ಪಡೆಯ ಗಾತ್ರವು ಸಂಘಟಿತ ಕಾರ್ಮಿಕರ ಸ್ಥಿತಿ ಗತಿಗಳಿಗೆ ಅಪಾಯ ಒಡ್ಡಿದೆ. ರೈತರ, ಕೃಷಿ ಕೂಲಿಕಾರರ, ಕಿರು ಉತ್ಪಾದಕರ ಮತ್ತು ಸಂಘಟಿತ ಕಾರ್ಮಿಕರ ಪಾಡು ದಿನೇ ದಿನೇ ಹದಗೆಡುತ್ತಾ ಬಿಡಿಸಲಾಗದ ಕಗ್ಗಂಟಾಗಿದೆ. ಹಾಗಾಗಿ, ಅಸಮಾನತೆ ಮಾತ್ರವಲ್ಲ, ಬಡತನವೂ ಉಲ್ಬಣಗೊಂಡಿದೆ.

ಅದೇ ಸಮಯದಲ್ಲಿ ನವ ಉದಾರವಾದವು ಹಲವಾರು ಚಟುವಟಿಕೆಗಳು/ಉದ್ಯೋಗಗಳನ್ನು, ಅದರಲ್ಲೂ ವಿಶೇಷವಾಗಿ ಸೇವಾ ವಲಯದ ಉದ್ಯೋಗಗಳನ್ನು (ಐಟಿ ಸಂಬಂಧಿತ ಸೇವೆಗಳು) ದೇಶ ದೇಶಗಳ ಮಹಾ ನಗರಗಳಿಂದ ಭಾರತದ ಅರ್ಥವ್ಯವಸ್ಥೆಗೆ ವರ್ಗಾಯಿಸಿದೆ. ಅದರಿಂದಾಗಿ ನಮ್ಮ ಜಿಡಿಪಿಯ ಬೆಳವಣಿಗೆಯ ದರ ಹೆಚ್ಚಿದೆ. ಈ ವಿದ್ಯಮಾನವು ಈ ಕೆಳಗಿನ ವಾದದಿಂದಾಗಿ ಪಕ್ಷದ ಮುಂದೆ ಹೊಸ ಸವಾಲನ್ನು ಒಡ್ಡುತ್ತದೆ.

ಮಾರ್ಕ್ಸ್ ತನ್ನ ‘ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆಗೆ ಒಂದು ಕೊಡುಗೆ’ ಎಂಬ ಕೃತಿಯ ಮುನ್ನುಡಿಯಲ್ಲಿ, ಉತ್ಪಾದನೆಯ ಸ್ವರೂಪವನ್ನು ನಿರೂಪಿಸುವ ಉತ್ಪಾದನಾ ಸಂಬಂಧಗಳೇ ಉತ್ಪಾದಕ ಶಕ್ತಿಗಳ ಅಭಿವೃದ್ಧಿಯನ್ನು ಅಡ್ಡಿಪಡಿಸಿದಾಗ, ಉತ್ಪಾದನಾ ವಿಧಾನವು ಚಾರಿತ್ರಿಕವಾಗಿ ಗತಿಸುತ್ತದೆ ಎಂಬುದಾಗಿ ಹೇಳಿದ್ದರು. ಈ ಹೇಳಿಕೆಯ ಆಧಾರದಲ್ಲಿ, ಉತ್ಪಾದಕ ಶಕ್ತಿಗಳು ಅಭಿವೃದ್ಧಿ ಹೊಂದುತ್ತಾ ಹೋಗುವ ವರೆಗೆ, ಆ ಉತ್ಪಾದನಾ ವಿಧಾನವು ಐತಿಹಾಸಿಕವಾಗಿ ಪ್ರಗತಿಶೀಲವಾಗಿ ಉಳಿಯುತ್ತದೆ ಎಂಬ ಒಂದು ನಿರ್ಣಯಕ್ಕೆ ಬರಲಾಗುತ್ತದೆ. ಉತ್ಪಾದಕ ಶಕ್ತಿಗಳ ಅಭಿವೃದ್ಧಿಯ ಒಂದು ಸ್ಪಷ್ಟ ಸೂಚಿಯೆಂದರೆ ಜಿಡಿಪಿಯ ಬೆಳವಣಿಗೆಯ ದರವೇ. ಈ ಅಂಶವು ಏನನ್ನು ಹೇಳುತ್ತದೆ ಎಂದರೆ, ಜಿಡಿಪಿಯ ಬೆಳವಣಿಗೆಯು ವೇಗವಾಗಿ ಇರುವವರೆಗೂ ಒಂದು ಆಡಳಿತವನ್ನು ಅನ್ಯಾಯ ಮತ್ತು ಶೋಷಣೆಯ ಹೆಸರಿನಲ್ಲಿ ವಿರೋಧಿಸುವುದು ಐತಿಹಾಸಿಕವಾಗಿ ಅಸಮರ್ಥನೀಯವಾಗುತ್ತದೆ. ಈ ವಾದದ ಪ್ರಕಾರ, ಕಮ್ಯುನಿಸ್ಟರು ನವ ಉದಾರವಾದಿ ಜಾಗತೀಕರಣವನ್ನು ವಿರೋಧಿಸಬಾರದು. ಅದನ್ನು ಒಪ್ಪಿಕೊಳ್ಳುವಲ್ಲಿ ಇತರ ರಾಜಕೀಯ ಶಕ್ತಿಗಳೊಂದಿಗೆ ಕೈಜೋಡಿಸಬೇಕು, ವಿಮರ್ಶಾತ್ಮಕವಾಗಿಯಾದರೂ.

ಆದರೆ, ಈ ವಾದವು ಪರಿಶೀಲನೆಯಲ್ಲಿ ಬಿದ್ದು ಹೋಗುತ್ತದೆ. ಕ್ರಾಂತಿ ಪೂರ್ವದ ರಷ್ಯಾವು ಅಭೂತಪೂರ್ವ ಆರ್ಥಿಕ ಬೆಳವಣಿಗೆಯನ್ನು ಮತ್ತು ವಿಶೇಷವಾಗಿ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಿತ್ತು ಮತ್ತು ಮುಂದುವರಿದ ಬಂಡವಾಳಶಾಹಿ ಜಗತ್ತು ಒಂದು ಸುದೀರ್ಘ ಬೆಳವಣಿಗೆಯನ್ನು ಕಂಡಿತ್ತು ಎಂಬುದನ್ನು ಅರ್ಥಶಾಸ್ತ್ರದ ಇತಿಹಾಸಕಾರರು ಒಪ್ಪುತ್ತಾರೆ. ಆದಾಗ್ಯೂ, ಆ ಕಾಲದ ಬಂಡವಾಳಶಾಹಿಯು “ಮರಣಾವಸ್ಥೆಯಲ್ಲಿದೆ” ಎಂದು ಕರೆಯಲು ಲೆನಿನ್‌ಗೆ ಯಾವ ಸಂಕೋಚವೂ ಇರಲಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಜಿಡಿಪಿ ಬೆಳವಣಿಗೆಯನ್ನು ಒಂದು ಉತ್ಪಾದನಾ ವಿಧಾನದ ಚಾರಿತ್ರಿಕ ಸೂಚಕವಾಗಿ ತೆಗೆದುಕೊಳ್ಳುವುದು ಸರಕುಗಳ ಸಂಕೇತಾರಾಧನೆಯಾಗುತ್ತದೆ ಮತ್ತು “ವಸ್ತುಗಳ” ಪ್ರಪಂಚದಲ್ಲಿ “ಸಂಬಂಧಗಳ” ಪ್ರಪಂಚಕ್ಕೆ ಸೇರಿದ ವಿದ್ಯಮಾನಗಳನ್ನು ಗುರುತಿಸಲು ಪ್ರಯತ್ನಿಸಿದಂತಾಗುತ್ತದೆ.

ಇತರ ರಾಜಕೀಯ ಶಕ್ತಿಗಳು ನವ ಉದಾರವಾದಿ ಜಾಗತೀಕರಣವನ್ನು ಒಪ್ಪಿಕೊಂಡರೂ ಸಹ, ಪಕ್ಷವು ಅದನ್ನು ದೃಢವಾಗಿ ವಿರೋಧಿಸಿದೆ. ಇತರ ಎಡ ರಾಜಕೀಯ ಶಕ್ತಿಗಳೊಂದಿಗೆ ಒಟ್ಟಾಗಿ, ಈ ಜಾಗತೀಕರಣದ ಬಲಿಪಶುಗಳಾದ ಕಾರ್ಮಿಕರು ಮತ್ತು ರೈತರ ಬೆಂಬಲಕ್ಕೆ ನಿಂತಿದೆ. ಹಲವು ದೇಶಗಳಲ್ಲಿ ಅನೇಕ ಎಡ ಗುಂಪುಗಳು ಜಾಗತೀಕರಣವನ್ನು ಒಂದು ಪ್ರಗತಿಯ ಸಂಕೇತವಾಗಿ ಸೂಚ್ಯವಾಗಿ ಇಲ್ಲವೇ ಮುಚ್ಚುಮರೆ ಇಲ್ಲದೆ ಸ್ವೀಕರಿಸಿರುವ ಸನ್ನಿವೇಶದಲ್ಲಿ ಇಲ್ಲಿ ಕಮ್ಯುನಿಸ್ಟ್ ಪಕ್ಷವು ಜಾಗತೀಕರಣವನ್ನು ದೃಢವಾಗಿ ವಿರೋಧಿಸಿದೆ.

ಕಮ್ಯೂನಿಸ್ಟರ ಜಾಗತೀಕರಣದ ವಿರೋಧವು ಅವರಿಗೆ ಕಾರ್ಯತಃ ಕೆಲವು ಸಮಸ್ಯೆಗಳನ್ನು ತಂದೊಡ್ಡಿದೆ. ‘ನಿಯಂತ್ರಣದ ವ್ಯವಸ್ಥೆ’(dirigiste period) ಕಾಲದಲ್ಲಿ ಬೇರೆ ಪಕ್ಷಗಳಿಂದ ಕಮ್ಯೂನಿಸ್ಟರನ್ನು ಬೇರ್ಪಡಿಸುತ್ತಿದ್ದ ಒಂದು ಅಂಶವೆಂದರೆ ಭೂಸುಧಾರಣೆಯೇ. ಕಮ್ಯೂನಿಸ್ಟ್ ಪಕ್ಷವು ಒಂದು ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗ ಅದು ನಿರ್ವಹಿಸುವ ಕಾರ್ಯವು ಸ್ಪಷ್ಟವಾಗಿರುತ್ತಿತ್ತು. ಅಂದರೆ, ಭೂ ಸುಧಾರಣೆಗಳನ್ನು ಅದು ಜಾರಿಗೊಳಿಸುತ್ತಿತ್ತು. ಭೂ ಸುಧಾರಣೆಗಳನ್ನು ಪೂರ್ಣಗೊಳಿಸಿದ ನಂತರ ಮುಂದಿನ ಕಾರ್ಯ ಯಾವುದು ಎಂಬುದರ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಕೈಗಾರೀಕೀಕರಣದ ಅವಶ್ಯಕತೆಯಿದ್ದಾಗ, ಅದು ಯಾವ ರೂಪದಲ್ಲಿರಬೇಕು ಮತ್ತು ಅದನ್ನು ಯಾವ ರೀತಿಯಲ್ಲಿ ಕಾರ್ಯರೂಪಕ್ಕೆ ತರಬೇಕು ಎಂಬ ಅಂಶಗಳ ಬಗ್ಗೆ, ರಾಜ್ಯ ಸರ್ಕಾರಗಳಿಗೆ (ಕಮ್ಯುನಿಸ್ಟರು ಸಾಮಾನ್ಯವಾಗಿ ಬಲವಾಗಿರುವ ರಾಜ್ಯಗಳಲ್ಲಿ) ನವ ಉದಾರವಾದಿ ಆಡಳಿತದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅವಕಾಶವೇ ಇಲ್ಲ. ಹಾಗಾಗಿ, ಇಂತಹ ಆಳ್ವಿಕೆಯ ಅಡಿಯಲ್ಲಿ ಕಮ್ಯುನಿಸ್ಟ್ ರಾಜ್ಯ ಸರ್ಕಾರಗಳು ತಮಗೆ ಒಪ್ಪಿಗೆಯಾಗದಿದ್ದರೂ ಸಹ, ಅನೇಕ ಸಂದರ್ಭಗಳಲ್ಲಿ ಇತರ ರಾಜ್ಯ ಸರ್ಕಾರಗಳನ್ನು ಅನುಕರಿಸಬೇಕಾಗುತ್ತಿತ್ತು. ಈ ಬಗ್ಗೆ ಹೆಚ್ಚಿನ ಚಿಂತನೆಗಳು ಮತ್ತು ಪ್ರಯೋಗಗಳು ನಡೆಯಬೇಕಾಗಿದೆ.

ಈಗ ನವ ಉದಾರವಾದಿ ಜಾಗತೀಕರಣಕ್ಕೇ ಮುಂದೆ ದಾರಿ ಕಾಣದಂತಾಗಿದೆ. ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಸರ್ವಾಧಿಕಾರಶಾಹಿ/ಫ್ಯಾಸಿಸ್ಟ್ ಆಡಳಿತಗಳು ನಾಯಿ ಕೊಡೆಗಳಂತೆ ತಲೆ ಎತ್ತಿರುವ ವಿದ್ಯಮಾನವು ಬಂಡವಾಳಶಾಹಿ ಬಿಕ್ಕಟ್ಟಿನ ದ್ಯೋತಕವಾಗಿದೆ. ಮರಣಾವಸ್ಥೆಯಲ್ಲಿರುವ ನವ ಉದಾರ ಬಂಡವಾಳಶಾಹಿಯನ್ನು ರಕ್ಷಿಸಲು, ದಬ್ಬಾಳಿಕೆಯ ಮತ್ತು “ಅನ್ಯರನ್ನು” ಶತ್ರುಗಳು ಎಂದು ಪರಿಭಾವಿಸುವತ್ತ ಜನರ ಗಮನವನ್ನು ತಿರುಗಿಸುವ ಕ್ರಮಗಳ ಮಿಶ್ರಣದ ಮೂಲಕ ಪ್ರಯತ್ನಿಸಲಾಗುತ್ತಿದೆ. ಈ ಪರಿಸ್ಥಿತಿಯಿಂದ ಹೊರಬರುವುದೇ ಭಾರತದ ಕಮ್ಯುನಿಸ್ಟ್ ಚಳುವಳಿಯ ಶತಮಾನೋತ್ಸವದ ಸಂದರ್ಭದಲ್ಲಿ ಕಮ್ಯೂನಿಸ್ಟರ ಮುಂದಿರುವ ಒಂದು ಹೊಸ ಸವಾಲು.

# ಮಹಿಳಾ ವಿಮೋಚನೆಯ ಹೋರಾಟದ ನೂರು ವರ್ಷಗಳು..

ಪುಟ 12 ರಿಂದ

ರಚಿಸಲು ಸನ್ನದ್ಧರಾದರು. ಬಂಗಾಳದಲ್ಲಿ 1942 ರಲ್ಲಿ ಕಮ್ಯುನಿಸ್ಟ್ ಮಹಿಳೆಯರು, ಬಡ ಮಹಿಳೆಯರ ಮಧ್ಯೆ ಮಹಿಳಾ ಆತ್ಮ ರಕ್ಷಾ ಸಮಿತಿ ಯನ್ನು ರಚಿಸಲು ಮುಂದಾಗಿರುವುದು ಗಮನಾರ್ಹವಾಗಿ ಕಂಡಿತು. ರೇಣು ಚಕ್ರವರ್ತಿ ಅವರು "ಕಮ್ಯುನಿಸ್ಟ್ ಇನ್ ಇಂಡಿಯನ್ ವುಮೆನ್ಸ್ ಮೂವ್ಮೆಂಟ್ಸ್" ಎಂಬ ತನ್ನ ಪ್ರಮುಖ ಪುಸ್ತಕದಲ್ಲಿ ಈ ಮುಂಚೂಣಿ ಮಹಿಳಾ ಸಂಘಟಕರ ಕೆಲಸವನ್ನು ವಿವರಿಸಿದ್ದಾರೆ.

ರಾಜ್ಯ ಮೂಲದ ಮಹಿಳಾ ಸಮಿತಿಗಳು 1954 ರಲ್ಲಿ ರಾಷ್ಟ್ರೀಯ ಮಹಿಳಾ ಒಕ್ಕೂಟವನ್ನು (National Federation Of Indian Women : NFIW) ರಚಿಸಿದರು, ಇದರಲ್ಲಿ ಕಮ್ಯುನಿಸ್ಟ್ ಮಹಿಳೆಯರು ಇತರರೊಂದಿಗೆ ಕೆಲಸ ಮಾಡಿದರು. ಸ್ವಾತಂತ್ರ್ಯ-ಪೂರ್ವ ಮಹಿಳಾ ಸಂಘಟನೆಗಳನ್ನು ಮುಂದಕ್ಕೆ ಒಯ್ದ NFIW ನಲ್ಲಿನ ಅನೇಕ ರಾಜ್ಯ ಘಟಕಗಳು ಅಥವಾ ಘಟಕಗಳ ವಿಭಾಗಗಳು NFIW ನಿಂದ ಪ್ರತ್ಯೇಕವಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದವು. ನಂತರ 1981 ರಲ್ಲಿ, ಈ ಘಟಕಗಳು ಒಟ್ಟಿಗೆ ಸೇರಿಕೊಂಡು ಎಡ-ಆಧಾರಿತ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯನ್ನು ರಚಿಸಿದವು, ಒಂದು ಕೋಟಿಗೂ ಹೆಚ್ಚು ಮಹಿಳೆಯರ ಸದಸ್ಯತ್ವವನ್ನು ಹೊಂದಿದ ಈ ಸಂಘಟನೆಯು ಭಾರತದ ಅತಿದೊಡ್ಡ ಮಹಿಳಾ ಸಂಘಟನೆಯಾಗಿ ಹೊರಹೊಮ್ಮಿದೆ. ಆದರೆ ಕಮ್ಯುನಿಸ್ಟ್ ಮಹಿಳೆಯರು ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರೂ ಇದನ್ನು ಕಮ್ಯುನಿಸ್ಟ್ ಮಹಿಳಾ ಸಂಘಟನೆ ಎಂದು ಹೇಳಲಾಗುವುದಿಲ್ಲ. ಈ ಸಂಘಟನೆಯು ಮಹಿಳಾ ವಿಮೋಚನೆಯ ಬಗ್ಗೆ ಒಂದು ನಿರ್ದಿಷ್ಟ ರಾಜಕೀಯ ಧೋರಣೆಯನ್ನು ಹೊಂದಿದ್ದರೂ, ಅದು ಕಮ್ಯುನಿಸ್ಟ್ ಸಂಘಟನೆಯಲ್ಲ ಅಥವಾ ಕೆಲವೊಮ್ಮೆ ತಪ್ಪಾಗಿ ವಿವರಿಸಿದಂತೆ ಕಮ್ಯುನಿಸ್ಟರ ‘ರಂಗ’ವಲ್ಲ. ಯಾವುದೇ ರಾಜಕೀಯ ಪಕ್ಷದಿಂದ ಸ್ವತಂತ್ರವಾಗಿರುವ ಹಾಗೂ ತನ್ನದೇ ಆದ ಸಂವಿಧಾನ ಮತ್ತು ಕಾರ್ಯಸೂಚಿಯನ್ನು ಹೊಂದಿರುವುದು ಮಾತ್ರವಲ್ಲದೇ ಅದರ ಬಹುಪಾಲು ಸದಸ್ಯರಿಗೆ ಯಾವುದೇ ಪಕ್ಷದ ಸಂಬಂಧವಿಲ್ಲ.

**ಸಿಪಿಐ (ಎಂ) ಪಕ್ಷದ ಪಾತ್ರ**

ಮಹಿಳೆಯರ ವಿಮೋಚನೆಗಾಗಿ ಹೋರಾಟವನ್ನು ಮುಂದುವರೆಸುವಲ್ಲಿ ಕಮ್ಯುನಿಸ್ಟರ ಪಾತ್ರವು 1964 ರಲ್ಲಿ ಸಿಪಿಐ(ಎಂ) ರಚನೆಯೊಂದಿಗೆ ಒಂದು ಮುಖ್ಯ ಮುನ್ನಡೆಯನ್ನು ಕಂಡಿತು. ಕಮ್ಯುನಿಸ್ಟ್ ಪಕ್ಷದ ಆರಂಭಿಕ ಪಾತ್ರವನ್ನು ಮುಂದಿಟ್ಟುಕೊಂಡು, ಸಿಪಿಐ (ಎಂ) 1964 ರಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಕಾರ್ಯಕ್ರಮದಲ್ಲಿ ಮತ್ತು ನಂತರ 2000 ರಲ್ಲಿ ನವೀಕರಿಸಿದ ಪಕ್ಷದ ಕಾರ್ಯಕ್ರಮದಲ್ಲಿ ಮಹಿಳಾ ವಿಮೋಚನೆಗೆ ವರ್ಗ ಆಧಾರಿತ ವಿಧಾನದ ಸೈದ್ಧಾಂತಿಕ ಸ್ಪಷ್ಟತೆಯನ್ನು ಒದಗಿಸಿದೆ.

2000 ನವೀಕರಿಸಿದ ಪಕ್ಷದ ಕಾರ್ಯಕ್ರಮದಲ್ಲಿ ಪ್ರಜಾಪ್ರಭುತ್ವ ಕ್ರಾಂತಿಯ ವಿಭಾಗದಲ್ಲಿ “ಕುಟುಂಬಗಳನ್ನು ಪ್ರಜಾಪ್ರಭುತ್ವಗೊಳಿಸುವ ದಿಕ್ಕಿನಲ್ಲಿ ಮಕ್ಕಳ ಲಾಲನೆ ಪಾಲನೆ ಮತ್ತು ಮನೆ ಕೆಲಸಗಳಿಗೆ ಅಗತ್ಯವಾದ ತಕ್ಕ ಬೆಂಬಲ ವ್ಯವಸ್ಥೆ ಒದಗಿಸುವುದು” ಎಂಬ ಗಮನಾರ್ಹ ಸೇರ್ಪಡೆಯನ್ನು ಮಾಡಲಾಯಿತು. ಲಿಂಗ ಆಧಾರಿತ ಶ್ರಮ ವಿಭಜನೆಯ ವಿರುದ್ಧ ಮತ್ತು ‘ಪವಿತ್ರ’ ಕುಟುಂಬ ಕ್ಷೇತ್ರಕ್ಕೆ ಪ್ರಜಾಸತ್ತೀಕರಣವನ್ನು ವಿಸ್ತರಿಸುವ ಮಾರ್ಕ್ಸ್‌ವಾದಿ ಕಣ್ಣೋಟವನ್ನು ಕಾರ್ಯಕ್ರಮದಲ್ಲಿ ಅಳವಡಿಸಲಾಗಿದೆ. ಕಾರ್ಷಿಕ ಕ್ರಾಂತಿಯ ಭಾಗವಾಗಿ ಜಾತಿ ಮತ್ತು ಲಿಂಗ ದಬ್ಬಾಳಿಕೆ ವಿರುದ್ಧದ ಹೋರಾಟದ ಬಗ್ಗೆ ನಿರ್ದಿಷ್ಟ ಉಲ್ಲೇಖವಿದೆ. ಪಕ್ಷದ ಕಾರ್ಯಕ್ರಮವು "ಐದು ದಶಕಗಳ ಬೂರ್ಜ್ವಾ ಭೂಮಾಲೀಕರ ಆಡಳಿತವು ಪ್ರತಿಯೊಂದು ಕ್ಷೇತ್ರದಲ್ಲೂ ಪುರುಷಪ್ರಾಧಾನ್ಯವನ್ನು ಶಾಶ್ವತಗೊಳಿಸಿತು" ಎಂದು ಸೂಚಿಸುತ್ತದೆ. ಗಮನಾರ್ಹವಾಗಿ, ಸಿಪಿಐ (ಎಂ) ಕಾರ್ಯಕ್ರಮವು ವಿವಿಧ ಹಂತಗಳಲ್ಲಿ ಮಹಿಳೆಯರ ಶೋಷಣೆಯನ್ನು "ಮಹಿಳೆಯಾಗಿ, ಕಾರ್ಮಿಕಳಾಗಿ, ನಾಗರಿಕಳಾಗಿ" ಎಂದು ವಿವರಿಸುತ್ತದೆ.

ಡಿಸೆಂಬರ್ 2005 ರಲ್ಲಿ ಅಂಗೀಕರಿಸಲ್ಪಟ್ಟ "ಮಹಿಳಾ ಸಮಸ್ಯೆಗಳು ಮತ್ತು ಕಾರ್ಯಭಾರಗಳ" ಕುರಿತಾದ ಸಂಘಟನೆಯ ದೃಷ್ಟಿಕೋನದ ಕುರಿತ ಕೇಂದ್ರ ಸಮಿತಿಯ ದಾಖಲೆಯಲ್ಲಿ ಮತ್ತಷ್ಟು ವಿವರಿಸಲಾಗಿದೆ. ಮನೆಗೆಲಸಕ್ಕೆ ಸಂಬಂಧಿಸಿದಂತಹ ಪ್ರಶ್ನೆಗಳ ಬಗ್ಗೆ ಮಾರ್ಕ್ಸ್‌ವಾದಿ ಧೋರಣೆ ಸೇರಿದಂತೆ ಮಹಿಳೆಯರಿಗೆ ಸಂಬಂಧಿಸಿದಂತಹ ಪ್ರಶ್ನೆಗಳ ಕುರಿತು ಸಿಪಿಐಎಂನ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಲು ಕೇಂದ್ರ ಸಮಿತಿಯ ದಾಖಲೆಗಳನ್ನು ಓದುವುದು ಸಮಂಜಸ ಮತ್ತು ಅಗತ್ಯ.

**ನೀತಿ ಸಮಸ್ಯೆಗಳು**

ಈ ಚೌಕಟ್ಟಿನಲ್ಲಿಯೇ ಇಂದಿನ ಪರಿಸ್ಥಿತಿಗಳನ್ನು ದೃಷ್ಟಿಕೋನದಲ್ಲಿ ಇಟ್ಟುಕೊಂಡು ನೇರವಾಗಿ ಮಹಿಳೆಯರಿಗೆ ಸಂಬಂಧ ಪಡುವಂತಹ ವಿಷಯಗಳ ಬಗ್ಗೆ ಪಕ್ಷ ಹೋರಾಟ ನಡೆಸುತ್ತಿದೆ. ಸಿಪಿಐ (ಎಂ) ರಚನೆಯಾದ ನಂತರದ ದಶಕಗಳಲ್ಲಿ ನಡೆದ ಎಲ್ಲಾ ಕಾರ್ಯಗಳನ್ನು ಉಲ್ಲೇಖಿಸಲು ಸಾಧ್ಯವಿಲ್ಲ, ಆದರೆ ಮಹಿಳೆಯರ ಸ್ಥಾನಮಾನ, ಸಮಾನತೆ, ಅವರ ಹಕ್ಕುಗಳಿಗಾಗಿ ಹೋರಾಟಗಳನ್ನು ಮಾಡುವಲ್ಲಿ ಸಿಪಿಐ(ಎಂ) ಪಕ್ಷವು ಸದಾ ಮುಂಚೂಣಿಯಲ್ಲಿ ಇರುತ್ತದೆ ಎಂದು ಹೇಳಬಹುದು. ಪಕ್ಷದ ನವ-ಉದಾರವಾದಿ ನೀತಿಗಳ ವಿರುದ್ಧದ ಹೋರಾಟವು ಮಹಿಳೆಯರ ನಿರ್ದಿಷ್ಟ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಒಳಗೊಂಡಿದೆ. ಸಿಪಿಐ (ಎಂ) ಸಂಸತ್ತಿನ ಸದಸ್ಯರು ಮತ್ತು ವಿಧಾನ ಸಭೆಗಳ ಸದಸ್ಯರು ಸಮಾನ ಹಕ್ಕುಗಳ ಮತ್ತು ನ್ಯಾಯಕ್ಕಾಗಿ ಶಾಸನಗಳನ್ನು ಮುಂದೆ ತರಲು ಮಹಿಳಾ ಚಳುವಳಿಗಳ ದೃಢವಾದ ಸಹಚರರಾಗಿದ್ದಾರೆ

ಸಮಕಾಲೀನ ಭಾರತದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯದ ವಿರುದ್ಧದ ಹೋರಾಟ, ಯುವತಿಯರ ಹಕ್ಕುಗಳ ರಕ್ಷಣೆ ➚

# ಹಿರಿಯ ರೈತ ನಾಯಕ ಮಾರುತಿ ಮಾನ್ಪಡೆ ನಿಧನ–ಕೆಪಿಆರ್‌ಎಸ್ ಕಂಬನಿ





ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ಉಪಾಧ್ಯಕ್ಷರು, ಸಿಪಿಐಎಂ ಪಕ್ಷದ ರಾಜ್ಯ ನೇತಾರರು ಆಗಿದ್ದ ಹಿರಿಯ ರೈತ ನಾಯಕ ಕಾಮ್ರೆಡ್ ಮಾರುತಿ ಮಾನ್ಪಡೆ ರವರು ನಿಧನರಾಗಿರುವುದು ರಾಜ್ಯದ ರೈತ ಚಳವಳಿ ಗೆ ಹಾಗೂ ಶೋಷಿತರ ಪರ ಹೋರಾಟಕ್ಕೆ ತುಂಬಲಾರದ ನಷ್ಟ ಎಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ರಾಜ್ಯ ಸಮಿತಿ ಕಂಬನಿ ಮಿಡಿಯುತ್ತದೆ.

ಕಾಮ್ರೆಡ್ ಮಾರುತಿ ಮಾನ್ಪಡೆ ರವರು ಇಡೀ ರಾಜ್ಯ ಕಂಡ ಅಪರೂಪದ ದಿಟ್ಟ ರೈತ ನಾಯಕ. ರಾಜ್ಯದ ನೀರಾವರಿ ಯೋಜನೆ ಗಳು ಮತ್ತು ನೀರಾವರಿ ಹೋರಾಟಗಳ ಕುರಿತು ಅಪಾರ ಜ್ಞಾನ ಹೊಂದಿದ್ದ ಮಾನ್ಪಡೆ ರವರು ತೊಗರಿ ಬೆಲೆ ಗಾಗಿ, ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ, ಕೃಷ್ಣ ನದಿ ನೀರು ಬಳಕೆಯ ನೀರಾವರಿಗಾಗಿ, ವಿದ್ಯುತ್ ಖಾಸಗೀಕರಣ, ಕೃಷಿ ಉತ್ಪನ್ನ ಗಳ ಅಮದು ಮುಂತಾದ ಕೇಂದ್ರ, ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಗಳ ವಿರುದ್ಧದ ಹಲವಾರು ರೈತರ ಪ್ರಶ್ನೆಗಳ ಹೋರಾಟ ಕೈಗೆತ್ತಿಕೊಂಡು ರೈತ ಸಮುದಾಯಕ್ಕೆ ಪರಿಹಾರ ಒದಗಿಸುವುದರಲ್ಲಿ ನಿರತರಾಗಿದ್ದ ರಾಜಿ ರಹಿತ ಹೋರಾಟಗಾರರಾಗಿದ್ದರು.

ರೈತ – ಕೃಷಿ ಕೂಲಿಕಾರರ ಪ್ರಶ್ನೆಗಳಿಗೆ ಮಾತ್ರವೇ ಅಲ್ಲದೇ ರಾಜ್ಯದ ಪಂಚಾಯತಿ, ಅಂಗನವಾಡಿ ಕಾರ್ಮಿಕರನ್ನು ಹಾಗೂ ಸಾಮಾಜಿಕವಾಗಿ ದಮನಕ್ಕೀಡಾಗಿದ್ದ ಶೋಷಿತ ದಲಿತ, ಮಹಿಳೆಯರನ್ನು ಕೂಡ ಸಂಘಟಿಸುವಲ್ಲಿ ಮುಂಚೂಣಿ ಪಾತ್ರವನ್ನು ಕಾಮ್ರೆಡ್ ಮಾರುತಿ ಮಾನ್ಪಡೆ ವಹಿಸಿದ್ದರು.

1995 ರಿಂದ 2017 ರವರೆಗೆ ಸುಧೀರ್ಘ ಕಾಲಾವಧಿಗೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅವರು 1989 ರಿಂದ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘಕ್ಕೆ ಕೂಡ ರಾಜ್ಯ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದರು. ಸುಮಾರು 40 ವರ್ಷಗಳ ಕಾಲದ ಅವರ ಹೋರಾಟದಿಂದ ರಾಜ್ಯದ ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಹಾಗೂ ಇಡೀ ಉತ್ತರ ಕರ್ನಾಟಕದ ಒಬ್ಬ ಪ್ರಮುಖ ಕಮ್ಯುನಿಸ್ಟ್ ನಾಯಕರಾಗಿ ಗುರುತಿಸಲ್ಪಟ್ಟಿದ್ದರು.

ಸಂಗಾತಿ ಮಾನ್ಪಡೆ ರವರು ಜನರ ಸಮಸ್ಯೆಗಳನ್ನು ನಿಖರವಾಗಿ ಗುರುತಿಸಿ ಹೋರಾಟದ ಸ್ವರೂಪ ನೀಡುವುದರಲ್ಲಿ ಬಹಳ ಪರಿಣತಿ ಇದ್ದ ರಾಜ್ಯದ ಚಳವಳಿಗಳ ಒಬ್ಬ ಮಾರ್ಗದರ್ಶಕ ಒಡನಾಡಿಯಾಗಿದ್ದರು. ಇವರ ನಿಧನ ರೈತ ಚಳುವಳಿಗೆ ಮಾತ್ರವೇ ಅಲ್ಲದೇ ಒಟ್ಟಾರೆ ಪ್ರಜಾಸತ್ತಾತ್ಮಕ ಹೋರಾಟಗಳಿಗೆ ಅಪಾರ ನಷ್ಟ ಉಂಟಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ಅಭಿಪ್ರಾಯ ಪಡುತ್ತದೆ.

ರಾಜ್ಯ ಸರ್ಕಾರದ ಆರೋಗ್ಯ ಇಲಾಖೆಯ ನೌಕರಿಯಲ್ಲಿದ್ದ ಮಾರುತಿ ಮಾನ್ಪಡೆ ರವರು ರೈತ ಹಾಗೂ ಕಮ್ಯುನಿಸ್ಟ್ ಚಳುವಳಿ ಯ ಪ್ರಭಾವಕ್ಕೆ ಒಳಗಾಗಿ ನೌಕರಿಗೆ ರಾಜೀನಾಮೆ ನೀಡಿ ರೈತ ಚಳವಳಿಯ ಪೂರ್ಣ ಕಾಲದ ಕಾರ್ಯಕರ್ತರಾಗಿ ಗುಲ್ಬರ್ಗ ಜಿಲ್ಲೆಯಲ್ಲಿ ಕೆಲಸ ಆರಂಭಿಸಿದರು. ಶೋಷಿತರ ಪರವಾದ ದಣಿವರಿಯದ ಕೆಲಸದ ಪರಿಣಾಮವಾಗಿ 1986 ರಲ್ಲಿ ಗುಲ್ಬರ್ಗ ಜಿ.ಪಂ ಸದಸ್ಯರಾಗಿ ಸಿಪಿಐಎಂ ನ ಪ್ರತಿನಿಧಿಸಿದ್ದರು. ಜಿ.ಪಂ ಸದಸ್ಯರಾಗಿ ಅವರು ಮಾಡಿದ ಕೆಲಸಗಳು ಇಡೀ ರಾಜ್ಯದಲ್ಲೇ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಹೇಗೆ ಕೆಲಸ ಮಾಡಬೇಕು ಎಂಬುದಕ್ಕೆ ಮಾದರಿಯಾಗಿತ್ತು.

65 ವಯಸ್ಸಿನ ಹಿರಿಯರಾಗಿದ್ದರೂ ದೈಹಿಕ ಆರೋಗ್ಯ ಸ್ಥಿತಿಯನ್ನು ಲೆಕ್ಕಿಸದೇ ಕೇಂದ್ರ, ರಾಜ್ಯ ಸರ್ಕಾರಗಳ ಕೃಷಿ ಸುಗ್ರಿವಾಜ್ಞೆ ಗಳನ್ನು ವಿರೋಧಿಸಿ ಸೆಪ್ಟೆಂಬರ್ 21 ರಿಂದ 26 ರವರೆಗಿನ ಬೆಂಗಳೂರು ನಲ್ಲಿ ನಡೆದ ಆಹೋ ರಾತ್ರಿ ಹೋರಾಟದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾಗಿ ತೊಡಗಿಸಿಕೊಂಡಿದ್ದರು. ಸೆಪ್ಟೆಂಬರ್ 28 ರ ಕರ್ನಾಟಕ ಬಂದ್ ಯಶಸ್ವಿ ಗೊಳಿಸಲು ಗುಲ್ಬರ್ಗ ಕ್ಕೆ ತೆರಳಿ ಹೈದರಾಬಾದ್ ಕರ್ನಾಟಕ ಬಂದ್ ಯಶಸ್ವಿ ಆಗಲು ಶ್ರಮಿಸಿದ್ದರು.ಈ ಕಾಲಾವಧಿಯಲ್ಲಿ ಆದ ಕೋವಿಡ್ –19 ಸೋಂಕಿಗೆ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ವೈದ್ಯರ ಉತ್ತಮ ಪ್ರಯತ್ನದ ಹೊರತಾಗಿಯೂ ಚಿಕಿತ್ಸೆ ಫಲಕಾರಿಯಾಗದೇ ಶೋಷಿತರ ಬಲವಾದ ಧ್ವನಿಯೊಂದು ನಿಂತು ಹೋಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ಅಪಾರ ನೋವನ್ನು ವ್ಯಕ್ತಪಡಿಸಿದೆ.

ಮಾರುತಿ ಮಾನ್ಪಡೆ ರವರ ಪತ್ನಿ, ಇಬ್ಬರು ಮಕ್ಕಳನ್ನು ಹಾಗೂ ಅಪಾರ ಬಂಧು– ಬಳಗ, ಹೋರಾಟದ ಒಡನಾಡಿಗಳಿಗೆ ದುಃಖ ಭರಿಸುವ ಆತ್ಮ ಸ್ಥೈರ್ಯ ದೊರಕಲಿ ಎಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ತನ್ನ ತೀವ್ರವಾದ ಸಂತಾಪಗಳನ್ನು ತಿಳಿಸುತ್ತದೆ.

*ಜಿ.ಸಿ. ಬಯ್ಯಾರೆಡ್ಡಿ ಅಧ್ಯಕ್ಷರು*
*ಯು ಬಸವರಾಜ್, ಪ್ರಧಾನ ಕಾರ್ಯದರ್ಶಿ*
*(20–10–2020)*



## ಕಾಂ. ಮಾರುತಿ ಮಾನ್ಪಡೆಯವರಿಗೆ ಕೃಷಿ ಕೂಲಿಕಾರರ ಸಂಘದಿಂದ ಶ್ರದ್ಧಾಂಜಲಿ

ಕರ್ನಾಟಕದ ರೈತ ಚಳುವಳಿಯ ಪ್ರಮುಖ ನಾಯಕರಲ್ಲೊಬ್ಬರಾದ, ಕರ್ನಾಟಕ ಪ್ರಾಂತ ರೈತ ಸಂಘದ ನಿಕಟ ಪೂರ್ವ ರಾಜ್ಯ ಅಧ್ಯಕ್ಷರಾಗಿದ್ದ ಮಾರುತಿ ಮಾನ್ಪಡೆಯವರು ಕೋವಿಡ್ ಸೋಂಕಿಗೆ ಬಲಿಯಾಗಿ ನಿಧನದ ಬಗ್ಗೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ತನ್ನ ಅತೀವ ದುಃಖವನ್ನು ವ್ಯಕ್ತಪಡಿಸುತ್ತದೆ.

ರೈತರ ಹಲವು ಸಮಸ್ಯೆಗಳ ಬಗ್ಗೆ ಮಾನ್ಪಡೆಯವರು ಮುನ್ನುಗ್ಗಿ ಹೋರಾಟಗಳನ್ನು ಮಾಡುತ್ತಿದ್ದರು. ಇಂತಹ ಹೋರಾಟಗಳ ಫಲವಾಗಿ ಕೃಷಿ ಕೂಲಿಕಾರರ ಕೆಲ ಸಮಸ್ಯೆಗಳ ಪರಿಹಾರಕ್ಕೆ ಸಹಾಯವಾಗಿದೆ ಎಂಬುದನ್ನು ಪ್ರಾಂತ ಕೃಷಿ ಕೂಲಿಕಾರ ಸಂಘ ನೆನಸಿಕೊಳ್ಳುತ್ತದೆ.

ಉದ್ಯೋಗ ಖಾತರಿ ಯೋಜನೆಯ ವ್ಯಾಪಕ ಜಾರಿಗೆ, ಕೂಲಿಕಾರರಿಗೆ ಮನೆ, ಭಾಗ್ಯಜ್ಯೋತಿ ಮೊದಲಾದ ಯೋಜನೆಯ ಜಾರಿಗಳಿಗೆ ನಿರಂತರವಾಗಿ ಶ್ರಮಿಸುತ್ತಿದ್ದರು.

ದಲಿತರ ಮೇಲೆ ದೌರ್ಜನ್ಯಗಳ ಸಮಯದಲ್ಲಿ ಅವರಿಗೆ ಪರಿಹಾರ, ದೌರ್ಜನ್ಯವೆಸಗಿದವರಿಗೆ ಶಿಕ್ಷೆಗಾಗಿ ಶ್ರಮಿಸಿದ್ದಾರೆ. ಇವರ ನಿಧನದಿಂದ ಕರ್ನಾಟಕದ ರೈತರು ಕೂಲಿಕಾರರಿಗೆ ಅಪಾರ ನಷ್ಟ ಉಂಟಾಗಿದೆ. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮಿತಿಯು ಅತೀವ ಸಂತಾಪವನ್ನು ವ್ಯಕ್ತಪಡಿಸಿದೆ.

*ಚಂದ್ರಪ್ಪ ಹೊಸ್ಕೇರಾ,*
*ರಾಜ್ಯ ಪ್ರಧಾನ ಕಾರ್ಯದರ್ಶಿ (20–10–2020)*

## ದುಡಿಯುವ ವರ್ಗದ ನೇತಾರ ಮಾರುತಿ ಮಾನ್ಪಡೆಯವರ ನಿಧನಕ್ಕೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಶ್ರದ್ಧಾಂಜಲಿ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರು ಮತ್ತು ಕರ್ನಟಕ ಗ್ರಾಮ ಪಂಚಾಯತ್ ನೌಕರರ ಸಂಘಟನೆಯ ರಾಜ್ಯಾಧ್ಯಕ್ಷರು, ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಹ ಸಂಚಾಲಕರಾದ ಮಾರುತಿ ಮಾನ್ಪಡೆಯವರ ನಿಧನ ರಾಜ್ಯ ಪ್ರಜಾಪ್ರಭುತ್ವೀಯ ಚಳುವಳಿಗೆ ತುಂಬಲಾರದ ನಷ್ಟ. ಇವರಿಗೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿಯು ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

ಹೈದ್ರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ದುಡಿಯುವ ವರ್ಗದ ಚಳುವಳಿಗಾಗಿ ಜೀವನವನ್ನು ಮುಡುಪಿಟ್ಟ ಸಂಗಾತಿ ಮಾರುತಿ ಮಾನ್ಪಡೆಯವರು ಅಸಂಘಟಿತ ವಿಭಾಗಗಳಾದ ಅಂಗನವಾಡಿ, ಬಿಸಿಯೂಟ, ಸಂಘಟನೆಗಳನ್ನು, ದೇವದಾಸಿ ಮಹಿಳೆಯರ ಸಂಘಟನೆ ಮತ್ತು ಜನವಾದಿ ಮಹಿಳಾ ಸಂಘಟನೆಯನ್ನ ಕಟ್ಟಲು ಶ್ರಮಿಸಿದವರಾಗಿದ್ದಾರೆ.

ಕೊನೆಯುಸಿರಿನವರೆಗೂ ದುಡಿಯುವ ಚಳುವಳಿಯಲ್ಲಿ ಸಕ್ರಿಯವಾಗಿದ್ದ ಅವರ ಬದ್ಧತೆ ಅತ್ಯಂತ ಸ್ಫೂರ್ತಿದಾಯಕವಾದುದು. ಇತ್ತೀಚಿಗೆ ಕೇಂದ್ರ ರಾಜ್ಯ ಸರ್ಕಾರಗಳ ಕೃಷಿ ವಿರೋಧಿ ಸುಗ್ರೀವಾಜ್ಞೆಗಳ ವಿರುದ್ಧ ಹೋರಾಟಗಳಲ್ಲಿ ಮುಂಚೂಣಿ ಪಾತ್ರ ವಹಿಸಿದ್ದರು. ಇವರ ಹೋರಾಟದ ಬದುಕು ಹೋರಾಟಗಾರರಿಗೆ ಮಾದರಿಯಾಗಿದ್ದು ಇವರ ಅಗಲಿಕೆಗೆ ಸಂಘಟನೆಯ ರಾಜ್ಯ ಸಮಿತಿಯು ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ.

*ದೇವಿ ಅಧ್ಯಕ್ಷರು,*
*ಗೌರಮ್ಮ ಪ್ರಧಾನ ಕಾರ್ಯದರ್ಶಿ*
*(20–10–2020)*

---

ಮತ್ತು ಸಂಗಾತಿಗಳನ್ನು ಸ್ವಯಂ–ಆಯ್ಕೆ ಮಾಡಲು ಸ್ವಾಯತ್ತತೆಯ ಬೇಡಿಕೆ, ಸಲಿಂಗ ಸಂಬಂಧಗಳನ್ನು ಅಪರಾಧ–ಮುಕ್ತಗೊಳಿಸುವ ಬೇಡಿಕೆಗೆ ಬೆಂಬಲ, ಅಲ್ಪಸಂಖ್ಯಾತ ಮಹಿಳೆಯರ ರಕ್ಷಣೆ ಮತ್ತು ಅವರ ಹಕ್ಕುಗಳು ಮತ್ತು ಹೀಗೆ, ಇತರ ಪಕ್ಷಗಳಿಗಿಂತ ಭಿನ್ನವಾಗಿ ಸಿಪಿಐ (ಎಂ) ಪಕ್ಷವು ಮಹಿಳೆಯರನ್ನು ಬೆಂಬಲಿಸುವಲ್ಲಿ ನಿಸ್ಸಂದಿಗ್ಧವಾದ ನಿಲುವನ್ನು ತೆಗೆದುಕೊಂಡಿದೆ.


ಸಿಪಿಐಎಂ ಪಕ್ಷವು ಪಶ್ಚಿಮ ಬಂಗಾಳ, ಕೇರಳ, ತ್ರಿಪುರಗಳಲ್ಲಿ ಸರಕಾರ ನಡೆಸಿದಾಗ ಪಕ್ಷದ ನಿಜವಾದ ಬದ್ಧತೆ ಎಲ್ಲರಿಗೂ ತಿಳಿದುಬಂದಿತ್ತು. ಪಕ್ಷದ ಮಹಿಳಾ–ಪರ ನಿಲುವಿಗೆ ಕೇರಳದ ಎಲ್‌ಡಿಎಫ್ ಸರ್ಕಾರ ಇಂದು ಒಂದು ಉದಾಹರಣೆಯಾಗಿದೆ. ದೇಶದಲ್ಲಿಯೇ ವಿಶಿಷ್ಟವಾದ ಸ್ವ–ಸಹಾಯ ಗುಂಪುಗಳ ಕುಡುಂಬಶ್ರೀ ಚಳುವಳಿ ಮತ್ತು ಸಾಮಾಜಿಕ ಸುಧಾರಣೆಯನ್ನು ಮುಂದಕ್ಕೊಯ್ಯುವ ಶಬರಿಮಲದಂತಹ ವಿಷಯಗಳು ಸೇರಿದಂತೆ ಮಹಿಳಾ ಸ್ಥಾನಮಾನವನ್ನು ಹೆಚ್ಚಿಸಲು ಹಲವಾರು ನೀತಿ ಮಧ್ಯಪ್ರವೇಶಗಳ ಮೂಲಕ ಜನರಲ್ಲಿ ಭರವಸೆ ಮೂಡಿಸಿದೆ. ಈ ಹಿಂದೆ ಬಂಗಾಳ ಮತ್ತು ತ್ರಿಪುರದ ಎಡಪಂಥೀಯ ಸರ್ಕಾರಗಳು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಕ್ರಮಗಳನ್ನು ಕೈಗೊಂಡಿದ್ದು ಇದು ಮಹಿಳೆಯರ ಜೀವನದ ಮೇಲೆ ಮಹತ್ತರ ವ್ಯತ್ಯಾಸವನ್ನುಂಟು ಮಾಡಿತು. ನಿರ್ದಿಷ್ಟವಾಗಿ ಬಂಗಾಳದಲ್ಲಿ ಭೂ ಸುಧಾರಣಾ ಆಂದೋಲನ ಮತ್ತು ಪುರುಷರು ಮತ್ತು ಮಹಿಳೆಯರ ಹೆಸರಿನಲ್ಲಿ ಜಂಟಿ ಪಟ್ಟಾಗಳ ಮತ್ತು ಒಂಟಿ ಮಹಿಳೆಯರಿಗೆ ಪಟ್ಟಾಗಳನ್ನು ವಿತರಣೆ ಮಾಡಲಾಗಿತ್ತು. ಆಸ್ತಿ ಕಾನೂನುಗಳಲ್ಲಿ ಬದಲಾವಣೆಗಳನ್ನು ಮಾಡುವ ಮೊದಲೇ ಮಹಿಳೆಯರಿಗೆ ಭೂಮಿಯಲ್ಲಿ ಸಮಾನ ಹಕ್ಕುಗಳನ್ನು ನೀಡುವಲ್ಲಿ ಎಡರಂಗದ ಸರ್ಕಾರಗಳು ಮುಂಚೂಣಿಯಲ್ಲಿದ್ದವು. ಸಂಸತ್ತಿನಲ್ಲಿ ಮೂರನೇ ಒಂದು ಭಾಗದಷ್ಟು ಮಹಿಳಾ ಮೀಸಲಾತಿಗಾಗಿ ಪ್ರಸ್ತುತ ನಡೆಯುತ್ತಿರುವ ಚಳವಳಿಯ ದಶಕಗಳ ಹಿಂದೆ ಬಂಗಾಳದ ಐತಿಹಾಸಿಕ ವಿಕೇಂದ್ರೀಕೃತ ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದ ಪ್ರಾತಿನಿಧ್ಯ ನೀಡಿತು, ಅದರ ಮೂಲಕ ಪಕ್ಷದ ನೇತೃತ್ವದ ಚಳುವಳಿಗಳು ಬಡ ವರ್ಗದ ಮಹಿಳೆಯರು ನೀತಿ ನಿರ್ಧಾರ ತೆಗೆದುಕೊಳ್ಳುವ ಸಮಿತಿಗಳಲ್ಲಿ ಪ್ರಾತಿನಿಧ್ಯವನ್ನು ತೆಗೆದುಕೊಳ್ಳುವಂತೆ ಖಾತ್ರಿಪಡಿಸಿತು.

**ಕಮ್ಯುನಿಸ್ಟ್ ಮಹಿಳೆಯರ ತ್ಯಾಗ**

ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆಯು ಅನೇಕ ಮಹಿಳಾ ಸಂಘಟನಾಕಾರರ ಕೆಲಸ ಮತ್ತು ತ್ಯಾಗಗಳನ್ನು ಕಂಡಿದೆ. ಪಕ್ಷವು ಆಡಳಿತ ವರ್ಗಗಳಿಂದ ತೀವ್ರ ದಾಳಿ ಮತ್ತು ದಬ್ಬಾಳಿಕೆಗೆ ಒಳಗಾದಾಗ, ಪುರುಷ ಸಂಗತಿಗಳೊಂದಿಗೆ ಸಂಘಟನಾಕಾರರೊಂದಿಗೆ ಭುಜಕ್ಕೆ ಭುಜ ನೀಡಿ ನಮ್ಮ ಕೆಲಸವನ್ನು ಮಾಡಿದ್ದಾರೆ, ವಿಶೇಷವಾಗಿ ಪಶ್ಚಿಮ ಬಂಗಾಳ ಮತ್ತು ತ್ರಿಪುರದಲ್ಲಿ ಪ್ರಚಂಡ ಕೆಲಸ ಮತ್ತು ತ್ಯಾಗಗಳನ್ನು ಕಂಡಿದೆ. ಪಕ್ಷದ 100 ನೇ ವಾರ್ಷಿಕೋತ್ಸವದ ಐತಿಹಾಸಿಕ ಸಂದರ್ಭದಲ್ಲಿ ನಮ್ಮ ಹುತಾತ್ಮರನ್ನು ನಾವು ಸ್ಮರಿಸುತ್ತೇವೆ ಮತ್ತು ನಮಸ್ಕರಿಸುತ್ತೇವೆ. ಅಸಂಖ್ಯಾತ ಹುತಾತ್ಮರಲ್ಲಿ ಕೆಂಪು ಧ್ವಜಕ್ಕಾಗಿ ಮತ್ತು ಸಾಮಾಜಿಕ ಮತ್ತು ಆರ್ಥಿಕ ವಿಮೋಚನೆಗಾಗಿ ತಮ್ಮ ಅಮೂಲ್ಯವಾದ ಜೀವನವನ್ನು ತ್ಯಾಗ ಮಾಡಿದ ಧೈರ್ಯಶಾಲಿ ಮಹಿಳಾ ಹುತಾತ್ಮರೂ ಇದ್ದಾರೆ. ಅವರನ್ನೂ ಸಹ ನಾವು ನೆನಪಿಸಿಕೊಳ್ಳುತ್ತೇವೆ. ■

JANASHAKTHI KANNADA VARA PATRIKE October 26-November 1, 2020 Price: Rs. 10/- Date of Publication: 23 October 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

# ಸಿಪಿಐ(ಎಂ) ನಾಯಕರು ರೈತ ಮುಖಂಡರು ಕಾಂ.ಮಾರುತಿ ಮಾನ್ಪಡೆಯವರಿಗೆ ಸಿಪಿಐ(ಎಂ) ಶ್ರದ್ಧಾಂಜಲಿ



ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ರಾಜ್ಯ ಮುಖಂಡರು ಹಾಗೂ ರಾಜ್ಯದ ರೈತ ಚಳುವಳಿಯ ನಾಯಕರಾದಂತಹ ಕಾಂ. ಮಾರುತಿ ಮಾನ್ಪಡೆ 20–10–2020 ಎಂದು ಸೋಲ್ಲಾಪುರದ ಅಶ್ವಿನಿ ಆಸ್ಪತ್ರೆಯಲ್ಲಿ ಕೋವಿಡ್‌ನಿಂದಾಗಿ ನಿಧನರಾಗಿದ್ದಾರೆ. ಅವರಿಗೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಶದ್ಧಾಂಜಲಿಯನ್ನು ಸಲ್ಲಿಸುತ್ತದೆ. 65 ವರ್ಷದ ಮಾನ್ಪಡೆಯವರು ಬಡ ಕೃಷಿ ಕೂಲಿಕಾರ ಕುಟುಂಬದಿಂದ ಮೂಡಿ ಬಂದ ಸಮರಧೀರ ಕಾರ್ಯಕರ್ತರಾಗಿ ರಾಜ್ಯದ ಚಳುವಳಿಯ ನಾಯಕರಾಗಿದ್ದಾರೆ. ಸಿಪಿಐ(ಎಂ) ಗುಲ್ಬಾರ್ಗ ಜಿಲ್ಲಾ ಕಾರ್ಯದರ್ಶಿಯಾಗಿದ್ದ ಅವರು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿದ್ದರು. ಪ್ರಸ್ತುತ ರಾಜ್ಯ ಸಮಿತಿಯ ಕಾಯಂ ಆಹ್ವಾನಿತರಾಗಿದ್ದರು.

ಅಕ್ಟೋಬರ್ 4 ರಂದು ತೀವ್ರ ಜ್ವರದಿಂದ ಗುಲ್ಬರ್ಗಾ ಜಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಸೋಲ್ಲಾಪುರದ ಖಾಸಗಿ ಆಸ್ಪತ್ರೆಗೆ ಅಕ್ಟೋಬರ್ 5 ರಂದು ದಾಖಲಿಸಲಾಗಿತ್ತು. ಇಂದು ಬೆಳಿಗ್ಗೆ 9.30 ಕ್ಕೆ ಕೋವಿಡ್‌ನಿಂದಾಗಿ ಅವರು ಅಸುನೀಗಿದ್ದಾರೆ.

ಇತ್ತೀಚೆಗೆ ಸೆಪ್ಟೆಂಬರ್ ತಿಂಗಳಲ್ಲಿ ಪಂಚಾಯತ್ ನೌಕರರ ಬಾಕಿ ವೇತನ ಬಿಡುಗಡೆಗಾಗಿ ರಾಜ್ಯವ್ಯಾಪ್ತಿ ನಡೆದ ಪಂಚಾಯತಿ ನೌಕರರ ಹೋರಾಟಕ್ಕೆ ನೇತೃತ್ವ ನೀಡಿದ್ದರು. ಸೆಪ್ಟೆಂಬರ್ 20 ರಿಂದ ಬೆಂಗಳೂರಿನಲ್ಲಿ ನಡೆದ ರೈತ ದಲಿತ ಕಾರ್ಮಿಕರ ಐಕ್ಯ ಹೋರಾಟದ ನಾಯಕರಾಗಿದ್ದ ಅವರು ರೈತ ಚಳುವಳಿಯ ಎಲ್ಲಾ ಬಣಗಳನ್ನು ಒಂದೂಗೂಡಿಸಿ ಸೆಪ್ಟೆಂಬರ್ 25 ರ ರಾಜ್ಯವ್ಯಾಪ್ತಿ ರಸ್ತೆ ತಡೆ ಮತ್ತು 28 ರ ಬಂದ್ ಯಶಸ್ವಿಗೊಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು. 26 ರ ವರೆಗೆ ಬೆಂಗಳೂರಿನಲ್ಲಿದ್ದ ಅವರು 28 ರ ಬಂದ್ ಹಿನ್ನೆಲೆಯಲ್ಲಿ ಗುಲ್ಬರ್ಗಾಕ್ಕೆ ಹಿಂದಿರುಗಿ ಬಂದ್ ಯಶಸ್ವಿಗೆ ನೇತೃತ್ವ ನೀಡಿದ್ದರು. ನಂತರದ ದಿನಗಳಲ್ಲಿ ಅನಾರೋಗ್ಯಕ್ಕೆ ಈಡಾಗಿದ್ದರು.

ಕಲ್ಯಾಣ ಕರ್ನಾಟಕದ ಭಾಗದಲ್ಲಿ ಹಲವು ರೈತ ಕಾರ್ಮಿಕರ ಹಾಗೂ ಜನತೆಯ ಹೋರಾಟಕ್ಕೆ ನೇತೃತ್ವ ನೀಡಿದ್ದ ಅವರು ಕಲ್ಯಾಣ ಕರ್ನಾಟಕದ ಎಡಪ್ರಗತಿಪರ ಚಳುವಳಿಯ ಮುಂಚೂಣಿ ನಾಯಕರಾಗಿದ್ದರು. ತೊಗರಿ ಮಂಡಳಿ ರಚನೆಗಾಗಿ ನಡೆದ ಹೋರಾಟ, ಕಲ್ಯಾಣ ಕರ್ನಾಟಕದ ಜಿಲ್ಲೆಗಳ ನೀರಾವರಿ ಹೋರಾಟ, ಪಂಚಾಯತಿ ನೌಕರರಿಗೆ ಸೇವಾ ನಿಯಮವಳಿಗಳಿಗಾಗಿ ಹೋರಾಟ ಮತ್ತು ಕನಿಷ್ಠ ವೇತನ ನಿಗದಿ ಹೋರಾಟದೊಂದಿಗೆ ಕೋಮುಸೌಹಾರ್ದತೆಗಾಗಿ ದಣಿವರಿಯದೆ ಹೋರಾಟಗಳಿಗೆ ನಾಯಕತ್ವ ನೀಡಿದ್ದ ಸಂಗಾತಿ ಕಾಂ. ಮಾನ್ಪಡೆ ಯವರ ಅಗಲಿಕೆ ರಾಜ್ಯದ ಎಡ ಪ್ರಗತಿಪರ ಚಳುವಳಿಗೆ ಅಪಾರ ನಷ್ಟವನ್ನುಂಟುಮಾಡಿದೆ. ರಾಜ್ಯದ ಅಂಗನವಾಡಿ ನೌಕರರು, ಬಿಸಿಯೂಟ ನೌಕರರ ಚಳುವಳಿ ಕಟ್ಟುವಲ್ಲಿ ಮತ್ತು ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧ ನಡೆದ ಹೋರಾಟದಲ್ಲಿ ಕ್ರಿಯಾಶೀಲ ಪಾತ್ರ ವಹಿಸಿದ್ದರು.

ಭೂ ಸುಧಾರಣೆ ಕಾಯ್ದೆ ತಿದ್ದುಪಡಿ, ಎಪಿಎಂಸಿ ಕಾಯ್ದೆ ತಿದ್ದುಪಡಿ ಮತ್ತು ಕಾರ್ಮಿಕ ಕಾನೂನು ತಿದ್ದುಪಡಿ ಸುಗ್ರೀವಾಜ್ಞೆಗಳ ವಿರುದ್ಧ ಇತ್ತೀಚೆಗೆ ನಡೆದ ಹೋರಾಟಗಳಲ್ಲಿ ಅವರು ನೀಡಿದ ನೇತೃತ್ವವು ಅವಿಸ್ಮರಣೀಯವಾದದ್ದು. ಕಾಂ. ಮಾನ್ಪಡೆಯವರು ಪತ್ನಿ, ಇಬ್ಬರು ಪುತ್ರರು ಮತ್ತು ಅವರ ಕುಟುಂಬ ವರ್ಗದ ಜೊತೆ ಅಪಾರ ಸಂಖ್ಯೆಯ ಎಡ ಪ್ರಗತಿಪರ ಚಳುವಳಿಯ ಕಾರ್ಯಕರ್ತರನ್ನು ಅಗಲಿದ್ದಾರೆ.

ರಾಜ್ಯ ಸರ್ಕಾರದ ಆರೋಗ್ಯ ಇಲಾಖೆಯಡಿ ಪ್ರಾಥಮಿಕ ಆರೋಗ್ಯ ಕಾರ್ಯಕರ್ತರಾಗಿ ನೇಮಕಗೊಂಡಿದ್ದ ಅವರು 80 ರ ದಶಕದ ಆರಂಭದಲ್ಲಿ ಸರ್ಕಾರಿ ನೌಕರಿ ತ್ಯಜಿಸಿ ರೈತ ಚಳುವಳಿಯ ಪೂರ್ಣಾವಧಿ ಕಾರ್ಯಕರ್ತರಾಗಿ ತಮ್ಮನ್ನು ತಾವು ತೊಡಗಿಸಿಕೊಂಡರು. 1986 ರಲ್ಲಿ ಗುಲ್ಬರ್ಗಾದ ಜಿಲ್ಲಾ ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿದ್ದ ಅವರು ಆನಂತರದ ವಿಧಾನಸಭಾ ಚುನಾವಣೆಗಳಲ್ಲಿ ಗುಲ್ಬರ್ಗಾದ ಕಮಲಪುರ ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. 1996 ರಲ್ಲಿ ಬೀದರ್ ಲೋಕಸಭಾ ಕ್ಷೇತ್ರದಿಂದಲೂ ಜನತಾದಳ ಬೆಂಬಲಿತ ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. 1995 ರಲ್ಲಿ ಬಿಜಾಪುರದಲ್ಲಿ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ (ಕೆ.ಪಿ.ಆರ್.ಎಸ್.) ಸಮ್ಮೇಳನದಲ್ಲಿ ರಾಜ್ಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಅವರು 2017 ರ ವರೆಗೆ ರಾಜ್ಯ ಅಧ್ಯಕ್ಷರಾಗಿ ಮುಂದುವರೆದಿದ್ದ ಅವರು ಹಾಲಿ ರಾಜ್ಯ ಉಪಾಧ್ಯಕ್ಷರಾಗಿದ್ದರು. 1989 ರಿಂದಲ್ಲೂ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ರಾಜ್ಯ ಅಧ್ಯಕ್ಷರಾಗಿ ಇಂದಿನವರೆಗೆ ಗ್ರಾಮ ಪಂಚಾಯತ್ ನೌಕರರ ಚಳುವಳಿಯನ್ನು ಮುನ್ನಡೆಸಿದ್ದರು.

ರಾಜ್ಯವು ಮುಂಚೂಣಿ ಹೋರಾಟಗಾರರೊಬ್ಬರನ್ನು ಕಳೆದುಕೊಂಡಿದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಶ್ರದ್ಧಾಂಜಲಿ ಸಲ್ಲಿಸಿದೆ.

*ಯು. ಬಸವರಾಜ*
*ಕಾರ್ಯದರ್ಶಿ (20–10–2020)*













ದೇಶದಲ್ಲಿ ಐಕ್ಯ ದಲಿತ ಚಳುವಳಿಯನ್ನು ಕಟ್ಟಿ ಬೆಸೆಯುವ ಸಲುವಾಗಿ ನವದೆಹಲಿಯಲ್ಲಿ 2014 ರಲ್ಲಿ ನಡೆದ 'ದಲಿತ ಶೋಷಣ್ ಮುಕ್ತಿ ಮಂಚ್ DSMM ಅಖಿಲ ಭಾರತ ಮಟ್ಟದ ವೇದಿಕೆಯ ಸಂಸ್ಥಾಪನಾ ಸಮಾವೇಶದಲ್ಲಿ ಕಾಂ. ಮಾರುತಿ ಮಾನ್ಪಡೆ.






**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**